5. ವಿತ್ತೀಯ ಕಾರ್ಯಕಲಾಪ

ವಿಷಯ: 1999-2000ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ.

+ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಜನತಾದಳದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವಿಶೇಷವಾಗಿ ಕೇವಲ ಕೆಲವೇ ಮಂತ್ರಿಗಳ ಖಾತೆಗಳು ಬದಲಾವಣೆಯಾಗದಿರುವವರಲ್ಲಿ ಆರೋಗ್ಯ ಸಚಿವರು ಒಬ್ಬರು. ಪ್ರಮುಖವಾಗಿ ನಾಲ್ಕುವರೆ ವರ್ಷಗಳಿಂದ ಒಬ್ಬರೇ ಸಚಿವರು ಆರೋಗ್ಯದ ಇಲಾಖೆಯನ್ನು ಹೊತ್ತು ಕೆಲಸವನ್ನು ನಿರ್ವಹಿಸುವಂತಹ ಸಮಯದಲ್ಲಿ ಕಳೆದ 4 ವರ್ಷಗಳಲ್ಲಿ ಆ ಇಲಾಖೆಯಲ್ಲಿ ಆದಂತಹ ಸಾಧನೆಗಳು ಅದರ ಬಾಧಕಗಳ ಬಗ್ಗೆ ನಾವು ಒಂದು ಸಲ ಯೋಚನೆ ಮಾಡಬೇಕು ಎಂದು ಅನಿಸುತ್ತದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಬಿ.ಶಿವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇಲ್ಲಿ ಪ್ರಮುಖವಾಗಿ ಸರ್ಕಾರವು ಅಧಿಕಾರಕ್ಕೆ ಬಂದ ತಕ್ಷಣದಲ್ಲೇ ಮೊದಲನೆಯ ಘೋಷಣೆ ಏನೆಂದರೆ 2000ನೇ ಇಸವಿಗೆ ಎಲ್ಲರಿಗೂ ಆರೋಗ್ಯವನ್ನು ಕೊಡುತ್ತೇವೆ. "Health for all in 2000". ಇದು ದೊಡ್ಡ ಸ್ಲೋಗನ್ ಆಗಿ ಕಳೆದ 4 ವರ್ಷಗಳ ಕಾಲದಿಂದ ಕೂಡ ಆಗಾಗ ಪತ್ರಿಕೆಗಳಲ್ಲಿ, ಭಾಷಣಗಳಲ್ಲಿ ಸದನದಲ್ಲಿ ಮೊಳಗುತ್ತಾ ಬಂದಿದೆ. ಈ 2000ನೇ ಇಸವಿಗೆ ಕೇವಲ 5 ತಿಂಗಳು ಇರುವಂತಹ ಸಂದರ್ಭದಲ್ಲಿ ರಾಜ್ಯದಲ್ಲಿ ಯಾರ್ಯಾರಿಗೆ ಯಾವ ಯಾವ ರೀತಿಯಾಗಿ ಆರೋಗ್ಯವನ್ನು ಕೊಟ್ಟಿದೆ? ಅನಾರೋಗ್ಯವು ಯಾರಿಗೆ ಆಗಿದೆ, ಸರ್ಕಾರಕ್ಕೆ ಯಾವ ರೀತಿ ಆರೋಗ್ಯ ಇದೆ, ಅನಾರೋಗ್ಯವಿದೆ, ಅದರ ಪ್ರಭಾವ ಜನಗಳ ಆರೋಗ್ಯದ ಮೇಲೆ ಹೇಗೆ ಬೀರಿದೆ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕಾದಂತಹ ಅವಶ್ಯಕತೆ ಇದೆ ಎಂದು ನನಗನಿಸುತ್ತಿದೆ. ಹಾಗೆಯೇ ಪಕ್ಷದ ಅನಾರೋಗ್ಯ, ಸರ್ಕಾರದ ಮೇಲೆ ಬೀರಿ ಸರ್ಕಾರದ ಅನಾರೋಗ್ಯ ರಾಜ್ಯದ ಜನರ ಮೇಲೆ ಬೀರಿರುವಂತಹದ್ದನ್ನು ಕಳೆದ 4 ವರ್ಷಗಳಿಂದ ನಾವು ನೋಡಿದಾಗಲೂ ಕೂಡ ನಮಗೆ ಅನಿಸುತ್ತಿದೆ. ಕಳೆದ ಬಾರಿ ಇಲ್ಲಿ ಹೇಳಿದಂತಹ ಸಂದರ್ಭದಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಹಾಗೆ, 2000ನೇ ಇಸವಿಯ ಹೊತ್ತಿಗೆ ಎಲ್ಲರಿಗೂ ಆರೋಗ್ಯವನ್ನು ಕೊಡುವಂತಹ ದೃಷ್ಟಿಯಲ್ಲಿ ನಾವು ಸಾಧನೆಯನ್ನು ಮಾಡಿದ್ದೇವೆ ಎಂಬ ವಿಚಾರವನ್ನು ಹೇಳಿದ್ದಾರೆ. ಆದರೆ ಸರ್ಕಾರದ ದಾಖಲೆಗಳ ಪ್ರಕಾರದಲ್ಲೇ 1994-95, 95-96, 96-97, 97-98 ಈ ಸಾಲುಗಳಲ್ಲಿ ಆರೋಗ್ಯ ಇಲಾಖೆಗೆ ರಾಜ್ಯಸರ್ಕಾರದಿಂದ ಬಜೆಟ್‌ನಲ್ಲಿರುವಂತಹ ಅಲೋಕೇಷನ್ಸ್, ಕೇಂದ್ರಸರ್ಕಾರದಿಂದ ಬಂದಂತಹ ಹಣ, ಹೀಗೆ ಸುಮಾರು 86 ಯೋಜನೆಗಳು ಈ ಇಲಾಖೆಗೆ ಬರುತ್ತದೆ. ಕೇಂದ್ರ ಸರ್ಕಾರದ 8 ಯೋಜನೆಗಳು, ರಾಜ್ಯಸರ್ಕಾರದ ಬೇರೆ

ಬೇರೆ ಯೋಜನೆಗಳು ಹೀಗೆ ಸುಮಾರು 86 ಯೋಜನೆಗಳ ವ್ಯಾಪ್ತಿಯಲ್ಲಿ ಬರುವಂತಹ ಹಣವನ್ನು ಯಾವುದೇ ವರ್ಷದಲ್ಲೂ ಕೂಡ ಸಂಪೂರ್ಣವಾದಂತಹ ಹಣವನ್ನು ಉಪಯೋಗಿಸಿಕೊಂಡಂತಹ ನಿದರ್ಶನ ಇಲ್ಲವೇ ಇಲ್ಲ. ಉದಾಹರಣೆಗೆ ಹೇಳುವುದಾದರೆ 1995-96 ನೇ ಸಾಲಿನಲ್ಲಿ 60 ಕೋಟಿ 27 ಲಕ್ಷ ರೂಪಾಯಿಗಳನ್ನು ಇಟ್ಟಂತಹ ಹಣದಲ್ಲಿ 49 ಕೋಟಿ 34 ಲಕ್ಷರೂಪಾಯಿಗಳು ಮಾತ್ರ ಖರ್ಚಾಗಿರುತ್ತದೆ. 1996-97 ನೇ ಸಾಲಿನಲ್ಲಿ 72 ಕೋಟಿ 43 ಲಕ್ಷ ರೂಪಯಿಗಳನ್ನು ಇಡಲಾಗಿತ್ತು, ಅದರಲ್ಲಿ 56 ಕೋಟಿ 60 ಲಕ್ಷರೂಪಾಯಿಗಳು ಮಾತ್ರ ಖರ್ಚಾಗಿರುತ್ತದೆ. 1997-98ನೇ ಸಾಲಿನಲ್ಲಿ 67 ಕೋಟಿ 11 ಲಕ್ಷ ರೂಪಾಯಿಗಳು ಇದ್ದಿದ್ದು ಅದರಲ್ಲಿ 42 ಕೋಟಿ 60ಲಕ್ಷ ರೂಪಯಿಗಳು ಮಾತ್ರ ಖರ್ಚಾಗಿರುತ್ತದೆ. ಇದರಿಂದ ಎರಡು ಅರ್ಥಗಳು ಬರುತ್ತದೆ, ರಾಜ್ಯದಲ್ಲಿ ಎಲ್ಲರೂ ಆರೋಗ್ಯವಾಗಿದ್ದಾರೆ, ಅನಾರೋಗ್ಯದ ವ್ಯವಸ್ಥೆ ಕಡಿಮೆ ಇರುವುದರಿಂದ ಹಣ ಕಡಿಮೆ ಖರ್ಚಾಗಿದೆ ಎಂದು ಒಂದು ಭಾವನೆ. ಎರಡನೆಯದಾಗಿ ಸರ್ಕಾರದ ಅನಾರೋಗ್ಯದಿಂದ ಈ ಹಣವನ್ನು ಸರಿಯಾದ ರೀತಿಯಲ್ಲಿ ಸದ್‌ವಿನಿಯೋಗ ಮಾಡಿಲ್ಲ. ಇದರಲ್ಲಿ ಯಾರ ಆರೋಗ್ಯ ತಪ್ಪಿದೆ ಎನ್ನುವ ವಿಚಾರವನ್ನು ತಮ್ಮ ಮೂಲಕ ಸನ್ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಕ್ಕೆ ಸಂಬಂಧಪಟ್ಟಹಾಗೆ ಸರ್ಕಾರದಿಂದ, ವಿಶೇಷವಾಗಿ ಬೇರೆ ಬೇರೆ ಸಮಿತಿಗಳಿಂದ ಏಕೆ ಪ್ರಸ್ತುದ ಸಾಲುಗಳಲ್ಲಿ ಹಣ ಖರ್ಚಾಗಿಲ್ಲ, ಇದಕ್ಕೆ ಸಂಬಂಧಪಟ್ಟ ಹಾಗೆ ಆರೋಗ್ಯ ಇಲಾಖೆಯಲ್ಲಿ ಏಕೆ ಪ್ರೋಗ್ರೆಸ್ ಆಗುತ್ತಿಲ್ಲ, ಎನ್ನುವಂತಹ ವಿಚಾರವನ್ನು ಕೇಳಿದಾಗ ಇಲಾಖೆಯವರೇ ಕೊಟ್ಟಂತಹ ಉತ್ತರದ ಪ್ರಕಾರ ಈ ಇಲಾಖೆಗಳಲ್ಲಿ ವಿಶೇಷವಾಗಿ 573 ವೈದ್ಯರ ಹುದ್ದೆಗಳು, 2,586 ಬೇರೆ ಬೇರೆ ಹುದ್ದೆಗಳು, ಒಟ್ಟು 3159 ಹುದ್ದೆಗಳು, ಖಾಲಿಯಾಗಿವೆ. ಸರ್ಕಾರದಿಂದ ನೇಮಕ ಮಾಡಲಿಕ್ಕೆ ಆಗಲಿಲ್ಲ. ಅದಕ್ಕೆ ಸಂಬಂಧಪಟ್ಟ ಹಾಗೆ ಹಣವು ಖರ್ಚಾಗಿಲ್ಲ ಎನ್ನುವಂತಹ ಉತ್ತರವನ್ನು ಕೂಡ ಸರ್ಕಾರನೇ ಕೊಟ್ಟಿದೆ. ಇದರ ಜೊತೆಯಲ್ಲಿ ಪ್ರಮುಖವಾಗಿ ಹೇಳಬೇಕಾದರೆ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಹೆಚ್ಚಿದ ಒತ್ತನ್ನು ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರವೆ ಇಟ್ಟುಕೊಂಡಿದ್ದೇವೆ ಎಂದು ಹಿಂದಿನಿಂದ ಘೊಷಣೆಯನ್ನು ಮಾಡಿಕೊಂಡು ಬಂದಿದೆ. ಪ್ರಮುಖವಾಗಿ ಆರೋಗ್ಯ ಘಟಕಗಳಿಗೆ ಹೆಚ್ಚಿನ ಒತ್ತನ್ನು ಕೊಡುವಂತಹ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೇವೆ ಎನ್ನುವಂತಹ ಘೋಷಣೆಯನ್ನು ಸರ್ಕಾರ ಆಗಿನಿಂದಲೂ ಮಾಡಿಕೊಂಡು ಬರುತ್ತಿದ್ದರೂ ಕೂಡ ಈ ಪ್ರಸ್ತುತ ಸಾಲುಗಳಲ್ಲೂ ಕೂಡ ವಿಶೇಷವಾಗಿ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಮಂಜೂರಾದ ಹಣ ಸಹ ವಿನಿಯೋಗವಾಗಿಲ್ಲದಿರುವುದು ಬಹಳ ದುರಾದೃಷ್ಟಕರವಾದುದು ಎಂಬ ಮಾತನ್ನು ತಮ್ಮ ಮೂಲಕ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕಳೆದ ಬಾರಿ ಮಾತನಾಡುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಒಂದು ಮಾತನ್ನು ಹೇಳಿದರು. ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ವಿಚಾರವನ್ನು ಹೇಳುವಾಗ, ಹೈಟೆಕ್ ಚೀಫ್‌ಮಿನಿಸ್ಟರ್ ಎನ್ನತಕ್ಕ ವಿಚಾರ ಬರುತ್ತೆ, ನಮ್ಮ ರಾಜ್ಯದಲ್ಲೂ ಅದೇ ರೀತಿಯಲ್ಲಿ

ಅದಕ್ಕಿಂತ ಹೆಚ್ಚು ಕೇಂದ್ರದ ಸವಲತ್ತುಗಳನ್ನು ನಾವು ಉಪಯೋಗಿಸಿಕೊಂಡಿದ್ದೇವೆಂದು ಹೇಳಿದರು. ಆದರೆ, ಸನ್ಮಾನ್ಯ ಮಂತ್ರಿಗಳಲ್ಲಿ ಕೇಳಲಿಕ್ಕೆ ಇಚ್ಛೆಪಡುತ್ತೇನೆ, ಕೇಂದ್ರ ಸರ್ಕಾರದಿಂದ ಬಿಡುಗಡೆಯಾದಂತಹ ಹಣ ವಿಶೇಷವಾಗಿ ಎಂಟು ಯೋಜನೆಗಳು ಕೇಂದ್ರದಿಂದ ಬಿಡುಗಡೆಯಾದಂತಹ ಹಣದಲ್ಲಿ ಶೇಕಡ 50-60 ರಷ್ಟು ಉಪಯೋಗಿಸದೇ ಇರುವಂತಹ ವಿಚಾರಗಳು ತಮ್ಮ ದಾಖಲೆಗಳಿಂದ ಕಾಣುತ್ತಿದೆ. ಉದಾಹರಣೆಗೆ ಕುಷ್ಠರೋಗ ನಿರ್ಮೂಲನ ಯೋಜನೆಯ ಅಡಿಯಲ್ಲಿ ತಾವು 2000ದ ಇಸವಿಗೆ ಕರ್ನಾಟಕ ರಾಜ್ಯದಲ್ಲಿ ಯಾವುದೇ ಒಬ್ಬ ಕುಷ್ಠರೋಗಿ ಇರುವುದಿಲ್ಲ ಎನ್ನುವುದನ್ನು ತಮ್ಮ ದಾಖಲೆಗಳಲ್ಲಿ ಬಹಳ ಸಂತೋಷದಿಂದ ಹೇಳಿಕೊಂಡಿದ್ದೀರಿ. ಆದರೆ ಆಗಿರುವಂತಹ ವ್ಯವಸ್ಥೆಗಳನ್ನು ನೋಡಿದಾಗ ತಮ್ಮ ದಾಖಲೆಗಳ ಪ್ರಕಾರ ತಪಾಸಣೆಯನ್ನು ಮಾಡಿದಾಗ, ಕಳೆದ ವರ್ಷ ತಮ್ಮ ದಾಖಲೆ ಪ್ರಕಾರ 9,881 ಮಂದಿ ಕುಷ್ಠರೋಗಿಗಳನ್ನು ತಪಾಸಣೆ ಮಾಡಿ ಪಾಸಿಟೀವ್ ಎಂದು ವರದಿ ಬಂದಿದೆಯೆಂದು ಹೇಳಿದ್ದೀರಿ. ಅಂದರೆ ಹಿಂದೆ ಇದ್ದಂತಹ 18,667 ಮತ್ತು ಈಗ ನಮಗೆ ಬಂದಿರುವ ವರದಿ ಪ್ರಕಾರ 9 ಸಾವಿರ. ಈಗಾಗಲೇ ತಮ್ಮ ದಾಖಲೆಗಳ ಪ್ರಕಾರ 27 ಸಾವಿರ ಜನ ಕುಷ್ಠರೋಗಿಗಳು ಇದ್ದರೂ ಕೂಡ ಅವರಿಗೆ ಔಷಧಿಗಳನ್ನು ಕೊಡುವಂತಹದ್ದು ಪುನರ್ ವ್ಯವಸ್ಥೆಯನ್ನು ಮಾಡತಕ್ಕದ್ದು ಕಳೆದ ನಾಲ್ಕು ವರ್ಷಗಳಿಂದ ಕೇಂದ್ರದಿಂದ ಬಂದಂತಹ ಹಣವನ್ನು ಉಪಯೋಗಿಸಿಕೊಳ್ಳದೆ ಹಾಗೆಯೇ ಹಿಂದಕ್ಕೆ ಬಿಡುವಂತಹ ಪ್ರಕರಣಗಳು ಏಕೆ ಬಂದಿದೆ? ಇದು ಆಶ್ಚರ್ಯವನ್ನು ಉಂಟುಮಾಡುತ್ತದೆ. ಒಂದು ಕಡೆ ರಾಜ್ಯದಲ್ಲಿ ಕುಷ್ಠರೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿದ್ದರೂ ಕೂಡ ಅದಕ್ಕೆ ಕೇಂದ್ರದಿಂದ ಬಂದಂತಹ ಹಣವನ್ನು ಉಪಯೋಗಿಸಿಕೊಳ್ಳದೆ ನಿರ್ಲಕ್ಷ್ಯ ಮಾಡಿರುವಂತಹದ್ದು ಮಂತ್ರಿಗಳ ಕಡೆಯಿಂದನಾ ಅಥವಾ ಅಧಿಕಾರಿಗಳ ಕಡೆಯಿಂದನಾ ಅಥವಾ ಪಾಲಿಸಿಯಿಂದ ಆಗುವಂತಹ ಸಮಸ್ಯೆಗಳೇ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಕ್ಕೆ ಸಂಬಂಧಪಟ್ಟಹಾಗೆ ಪ್ರಶ್ನೆಯನ್ನು ಕೇಳಿದಾಗ ತಮ್ಮ ಇಲಾಖೆಯಿಂದ ಉತ್ತರವನ್ನು ಕೊಟ್ಟಿರತಕ್ಕದ್ದು, ರೋಗಿಗಳಿಗೆ ಏಕೆ ಹಣವನ್ನು ಖರ್ಚು ಮಾಡಿಲ್ಲವೆಂದು ಪ್ರಶ್ನೆ ಕೇಳಿದರೆ ಇದರಲ್ಲಿ ಕೇಂದ್ರಸರ್ಕಾರದಿಂದ ಬಂದಂತಹ ಹಣವನ್ನು ಖರ್ಚು ಮಾಡದಿರುವುದಕ್ಕೆ ಕಾರಣ 200 ವಿವಿಧ ಹುದ್ದೆಗಳು ಭರ್ತಿಯಾಗಿರುವುದರಿಂದ ಈ ಹಣವನ್ನು ಹಿಂದಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಯಾವುದೇ ಒಂದು ವಿಚಾರವನ್ನು ಕೇಳಿದಾಗಲೂ ಕೂಡ ಆ ಇಲಾಖೆಯಲ್ಲಿ ಹಣ ಏತಕ್ಕೆ ಖರ್ಚಾಗಿಲ್ಲವೆಂದರೆ, ನೇಮಕಾತಿಯಾಗಿಲ್ಲವೆನ್ನುವ ಉತ್ತರವನ್ನು ಬಿಟ್ಟರೆ ಸರ್ಕಾರ ಬೇರೆ ಉತ್ತರವನ್ನು ಕೊಟ್ಟಿಲ್ಲವೆಂದು ನನಗನಿಸುತ್ತದೆ.

ಎರಡನೆಯದಾಗಿ ಇವತ್ತು ಪ್ರಪಂಚದಲ್ಲಿಯೇ ಅತಿ ಹೆಚ್ಚಿಗೆ ಕುರುಡರು ಇರುವಂತಹ ದೇಶ ಅಂಥದ್ದ ದೇಶವೆಂದರೆ ಭಾರತ. ಅದರಲ್ಲಿ ಶೇಕಡ ಎರಡು, ನೂರರಲ್ಲಿ ಇಬ್ಬರು ಕರ್ನಾಟಕದಲ್ಲಿ ಕುರುಡರು ಇದ್ದಾರೆ, ಅಂಥದ್ವ ಇದೆ ವಿಶೇಷವಾಗಿ

ಮಕ್ಕಳಲ್ಲಿ ಅಂಧತ್ವ ದಿನೇದಿನೇ ಜಾಸ್ತಿಯಾಗುತ್ತಿದೆ. ಆ ವರದಿ ಇವತ್ತುನಮ್ಮಲ್ಲಿದೆ. ರಾಜ್ಯದಲ್ಲಿ ಕೂಡ ಶೇಕಡ 1.86 ಅಂಧತ್ವ ಇದೆ ಎನ್ನುವುದನ್ನು ಇವತ್ತು ನಾವು ಕಾಣುತ್ತಿದ್ದೇವೆ. ಇದರಲ್ಲಿ ಶೇಕಡ ನೂರು ಭಾಗ ಹಣವನ್ನು ಕೇಂದ್ರಸರ್ಕಾರ ರಾಷ್ಟ್ರೀಯ ಅಂಧತ್ವ ತಡೆ ಕಾರ್ಯಕ್ರಮದ ಅಡಿಯಲ್ಲಿ ಕೊಟ್ಟರೂ ಕೂಡ ಸಾಧನೆಯನ್ನು ಅವಲೋಕನ ಮಾಡಿದಾಗ 1996-97 ರಲ್ಲಿ ಒಟ್ಟು ಅನುದಾನ ಬಂದದ್ದು ಕೇಂದ್ರಸರ್ಕಾರದಿಂದ 74 ಲಕ್ಷ ರೂಪಾಯಿಗಳು ರಾಜ್ಯದ್ದು 110 ಲಕ್ಷ ರೂಪಾಯಿಗಳು ಆದರೆ ಖರ್ಚಾಗಿರುವಂತಹದ್ದು ಕೇವರ 97 ಲಕ್ಷ ರೂಪಾಯಿಗಳು ಮಾತ್ರ. 1997-98 ರಲ್ಲಿ ರಾಜ್ಯದಿಂದ 110 ಲಕ್ಷ ರೂಪಾಯಿಗಳು ಕೇಂದ್ರದಿಂದ 27 ಲಕ್ಷ ರೂಪಾಯಿಗಳು ಆದರೆ ಖರ್ಚಾಗಿರುವಂತಹದ್ದು ಕೇವಲ 11 ಲಕ್ಷ ರೂಪಾಯಿಗಳು ಮಾತ್ರ. 1998-99ನೇ ಸಾಲಿನಲ್ಲಿ ರಾಜ್ಯದಿಂದ 42 ಲಕ್ಷ ರೂಪಾಯಿಗಳು ಕೇಂದ್ರದಿಂದ 61 ಲಕ್ಷ ರೂಪಾಯಿಗಳು ಒಟ್ಟು ಖರ್ಚಾಗಿರುವಂತಹದ್ದು 11 ಲಕ್ಷದ 68 ಸಾವಿರ ರೂಪಾಯಿಗಳು ಮಾತ್ರ. ಅಂದರೆ ವಿಶೇಷವಾಗಿ ಮಕ್ಕಳಲ್ಲಿ ಪೌಷ್ಟಿಕ ಆಹಾರದ ಕೊರತೆಯಿಂದ ದಿನೇ ದಿನೇ ಅಂಧತ್ವ ಬೆಳೆಯುತ್ತಿದ್ದರೂ ಕೂಡ 4 ವರ್ಷಗಳಿಂದ ಕೇಂದ್ರದಿಂದ ಬಂದಂತಹ ಹಣವನ್ನೂ ಯಾವುದೇ ಕಾರಣದಿಂದ ಖರ್ಚು ಮಾಡದಿರುವ ವ್ಯವಸ್ಥೆಯನ್ನು ನಾವು ಕಾಣುತ್ತಿದ್ದೇವೆ. ಹೀಗೆ ಕೇವಲ ಇದು ಒಂದೇ ಅಲ್ಲ. ಕೇಂದ್ರಸರ್ಕಾರದಿಂದ ಬರುವಂತಹ ಎಂಟು ಯೋಜನೆಗಳಲ್ಲಿ ಕೇಂದ್ರಸರ್ಕಾರದಿಂದ ಬಂದಂತಹ ಹಣದಲ್ಲಿ ಅದನ್ನು ಸದ್ವಿನಿಯೋಗ ಮಾಡಿಕೊಳ್ಳದೆ ಶೇಕಡ 50-60 ಭಾಗ ಹಣವನ್ನು ಹಿಂದೆ ಕೊಡುವಂತಹ ವ್ಯವಸ್ಥೆಯನ್ನು ನಾವು ಈ ಸರ್ಕಾರದಲ್ಲಿ ನೋಡುವಂತಹ ಸಮಯದಲ್ಲಿ 2000 ಇಸವಿಗೆ ಎಲ್ಲರಿಗೂ ಹೇಗೆ ಆರೋಗ್ಯ ಸಿಗುತ್ತೆ ಎನ್ನುವ ವಿಚಾರವನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಜೊತೆಗೆ ಇನ್ನೊಂದು ದುರ್ದೈವ, ದೇಶದ ವ್ಯವಸ್ಥೆಯನ್ನು ತೆಗೆದುಕೊಂಡಾಗಲೂ ಕೂಡ ಇಡೀ ಪ್ರಪಂಚದಲ್ಲಿ ಏಡ್ಸ್‌ನಲ್ಲಿ ಭಾರತದೇಶದಲ್ಲಿ ಆ ಪರ್ಸೆಂಟೇಜ್ ಜಾಸ್ತಿಯಾಗುತ್ತಿದೆ ಎನ್ನುವುದು ದೇಶಕ್ಕೆ ಅವಮಾನವಾದರೆ, ಅದರಲ್ಲಿ ದೇಶದ ವ್ಯವಸ್ಥೆಯೊಳಗಡೆ ರಾಜ್ಯದಲ್ಲೂ ಕೂಡ ಏಡ್ಸ್ ರೋಗಿಗಳ ಸಂಖ್ಯೆ ದಿನೇದಿನೇ ಜಾಸ್ತಿಯಾಗುತ್ತಿದೆ. ಇದಕ್ಕೆ ಸಂಬಂಧಪಟ್ಟಹಾಗೆ ನಿಯಂತ್ರಣ ಮಾಡುವ ದಿಕ್ಕಿನಲ್ಲಿ ಕೂಡ, ಆ ಸಂಖ್ಯೆ ಹೆಚ್ಚಾಗುತ್ತಿರುವುದು ಅದರ ನಿಯಂತ್ರಣಕ್ಕೆ ಹಣವನ್ನು ವಿನಿಯೋಗ ಮಾಡುವುದು ಕೇವಲ ಅಡ್ವರ್‌ಟೈಸ್‌ಮೆಂಟ್ ಕೊಡುವುದು ಬೇರೆ ಬೇರೆ ಮಾಧ್ಯಮಗಳಿಗೆ ಮಾತ್ರ ಹಣವನ್ನು ಖರ್ಚುಮಾಡುತ್ತಾ, ಆ ದೃಷ್ಟಿಯಲ್ಲಿ ನಮ್ಮ ಸಾಧನೆ ಶೂನ್ಯ ಅಲ್ಲದೇ ಹೋದರೂ ಕೂಡ ಸಾಧನೆಯ ಪ್ರಮಾಣ ಬಹಳ ಕಡಿಮೆಯಾಗಿರುವುದು ಬಹಳ ನೋವಿನ ವಿಚಾರ. ತಮ್ಮ ಮೂಲಕ ಮಾನ್ಯ ಆರೋಗ್ಯಮಂತ್ರಿಗಳಲ್ಲಿ ಒಂದು ವಿಚಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯಸರ್ಕಾರ ವಿಶೇಷವಾಗಿ ಮಾನ್ಯ ಉಪಮುಖ್ಯಮಂತ್ರಿಗಳ ಛೇರ್ಮನ್‌ಶಿಪ್‌ನಲ್ಲಿ ಒಂದು ಸಮಿತಿ ಮಾಡಿದರು. ಅದು ಕರ್ನಾಟಕ ರಾಜ್ಯದ ಖರ್ಚಿನ ವ್ಯವಸ್ಥೆ ಏನಿದೆ ಅದನ್ನು

ಕಡಿಮೆ ಮಾಡಬೇಕು. ಹಾಗಾಗಿ ಎಲ್ಲ ಇಲಾಖೆಗಳಲ್ಲಿ ಕೂಡ ಶೇಕಡ 5 ರಷ್ಟು ಹುದ್ದೆಗಳನ್ನು ಕಡಿಮೆ ಮಾಡಬೇಕೆನ್ನುವ ವರದಿಯನ್ನು ಕೊಡಲಾಗಿದೆ. ಇದಕ್ಕೆ ಸಂಬಂಧಪಟ್ಟಹಾಗೆ ಸರ್ಕಾರಿ ಆಜ್ಞೆ 14-12-98ರಲ್ಲಿ ಸರ್ಕಾರ ಒಂದು ಆಜ್ಞೆ ಹೊರಡಿಸಿತು. ಅದರ ಪ್ರಕಾರ ಒಟ್ಟು ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಹಾಗೆ 2,162 ಹುದ್ದೆಗಳನ್ನು ರದ್ದು ಮಾಡಿದ್ದಾರೆ. ಆದರೆ ಸರ್ಕಾರ ಆವೃತ್ತಿನಿಂಧ ಕೂಡ ವಿಶೇಷವಾಗಿ ಆರೋಗ್ಯ ಇಲಾಖೆ, ವಿದ್ಯಾ ಇಲಾಖೆ, ಈ ಎರಡೂ ಇಲಾಖೆಗಳಿಗೆ ಸಂಬಂಧಪಟ್ಟಹಾಗೆ ಯಾವುದೇ ಹುದ್ದೆಗಳ ಕಡಿತ ಮಾಡುವುದಿಲ್ಲ ಆ ಮಾತನ್ನು ಆವೃತ್ತಿನಿಂದ ಹೇಳಿಕೊಂಡು ಬಂದಿದ್ದಾರೆ. ಆದರೆ, ಇದೇ ಸರ್ಕಾರಿ ಆಜ್ಞೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಒಟ್ಟು ಒಂದು ಸಾವಿರ ಹುದ್ದೆಗಳನ್ನು ಇವತ್ತು ರದ್ದು ಮಾಡಲಾಗಿದೆ. ಹಾಗೆಯೇ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ನೂರು ಹುದ್ದೆಗಳನ್ನು ತೆಗೆದು ಹಾಕಲಾಗಿದೆ. ಆದರೆ, ಪ್ರಮುಖವಾಗಿ ನನಗೆ ಆಶ್ಚರ್ಯವಾಗುವುದು ಅಂದರೆ ಯಾವುದೇ ಅನಾವಶ್ಯಕವಾದ ಹುದ್ದೆಗಳನ್ನು ತೆಗೆದುಹಾಕುವುದಾದರೆ, ಯಾವುದೇ ಕಾರಣಕ್ಕೂ ಕೂಡ ಸರ್ಕಾರವನ್ನು ನಡೆಸುವಂತಹ ರೀತಿಯಲ್ಲಿ ಸರ್ಕಾರದ ನಿಯಂತ್ರಣವನ್ನು ನೋಡಿಕೊಳ್ಳುವಂತಹದ್ದು ವಿರೋಧ ಪಕ್ಷದವರಿಗೂ ಕೂಡ ನಮಗೂ ಆ ವಿಚಾರದಲ್ಲಿ ಅಪವಾದವೇನೂ ಅಲ್ಲ. ಆದರೆ ತಮ್ಮ ಇಲಾಖೆಯಲ್ಲಿ ತೆಗೆದಿರುವಂತಹ ಹುದ್ದೆಗಳು ಯಾವ್ಯಾವುದು? ಅದನ್ನು ನಾವು ಮೊದಲು ನೋಡಬೇಕಾದ ಅವಶ್ಯಕತೆಯಿದೆ. ವಿಶೇಷವಾಗಿ ತಾವು ತೆಗೆದಿರುವಂತಹ ಹುದ್ದೆಗಳಲ್ಲಿ ಬೆಂಗಳೂರಿನಲ್ಲಿರುವಂತಹ ಸಂಶೋಧನಾ ಕೇಂದ್ರದಲ್ಲಿರುವಂತಹ 9 ಹುದ್ದೆಗಳನ್ನು, ಹಾಗೆಯೇ ಸರ್ಕಾರಿ ಔಷಧ ಮಳಿಗೆಯಲ್ಲಿರುವಂತಹ ವೈದ್ಯಾಧಿಕಾರಿಗಳ ಹುದ್ದೆಯನ್ನು ಇಷ್ಟು ಮಾತ್ರವಲ್ಲ ಇವತ್ತು ಸದನದಲ್ಲಿ ಪ್ರತಿಯೊಬ್ಬ ಶಾಸಕನೂ ಕೂಡ ಎತ್ತಿ ಕೇಳುತ್ತಿರುವಂಥದ್ದು ವೈದ್ಯರ ಕೊರತೆ ಇದೆ, ಆ ಕೊರತೆಯನ್ನು ನೀಗಿಸಲಿಕ್ಕೆ ತಮ್ಮ ಪ್ರಯತ್ನ ಏನಾಗಿದೆ ಅನ್ನುವಂತಹ ವಿಚಾರವನ್ನು ಕೇಳಲಿಕ್ಕೆ ಪ್ರತಿ ಅಧಿವೇಶನದಲ್ಲೂ ಪ್ರಶ್ನೆಗಳು ಬರುತ್ತಿವೆ. ಆದರೆ ಮಾನ್ಯ ಸಚಿವರು 58 ಜನ ವೈದ್ಯರ ಹುದ್ದೆಯನ್ನು ಸಹ ಇದರಲ್ಲಿ ತೆಗೆದುಹಾಕಿದ್ದಾರೆ. ಅದರಲ್ಲಿ ಪ್ರಮುಖವಾಗಿ ಬೆಂಗಳೂರು ಮಹಾನಗರ, ಆರು ಮಹಾನಗರಗಳಲ್ಲಿ ಬರುವಂತಹ ಪ್ರಾಥಮಿಕ ಆರೋಗ್ಯ ಘಟಕಗಳ 58 ಜನ ವೈದ್ಯರ ಹುದ್ದೆಗಳನ್ನು ಇದರಲ್ಲಿ ಕಡಿತ ಮಾಡುವಂತಹ ಒಂದು ಆಜ್ಞೆಯನ್ನು ಮಾಡಿದ್ದಾರೆ.

ಶ್ರೀ ಎನ್.ರಾಜಣ್ಣ: ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗಬೇಕು. ನಾನು ತಮಗೆ ಡಿಸ್ಟರ್ಬ್ ಮಾಡುತ್ತಿಲ್ಲ. ಬೆಂಗಳೂರು ನಗರದಲ್ಲಿ ಏನಾಗಿದೆ ಅಂದರೆ, ಕೆಲವು ಕಡೆ ಡಿಸ್ಪೆನ್ಸರಿಗಳಲ್ಲಿ ಪೇಶೆಂಟ್‌ಗಳಿಗಿಂತ ಡಾಕ್ಟರು ಮತ್ತು ಸ್ಟಾಫ್ ಜಾಸ್ತಿ. ಅದರಿಂದ ಕಡಿಮೆ ಮಾಡಿರಬಹುದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ನೋಡಿ ಬನ್ನಿ ಡಾಕ್ಟರು ಸ್ಟಾಫ್ ಎಲ್ಲ ಸೇರಿ 8 ಜನ ಇದ್ದಾರೆ. ಆದರೆ

ಪೇಶೆಂಟ್‌ಗಳು ಬರುವುದು ಐದು ಆರು. ಇಂತಹ ಪರಿಸ್ಥಿತಿ ಇರುವಾಗ ಸಿಬ್ಬಂದಿಯನ್ನು ಬೇರೆ ಕಡೆ ಟ್ರಾನ್ಸ್‌ಫರ್ ಮಾಡಲೇ ಬೇಕಾಗುತ್ತದೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಪ್ರಮುಖವಾಗಿ ನಾನು ಆರು ಮಹಾನಗರ ಪಾಲಿಕೆಗಳ ಬಗ್ಗೆ ಹೇಳಿದೆ. ಆದರೆ ಬೆಂಗಳೂರು ಮಹಾನಗರಪಾಲಿಕೆಯ ಬಗ್ಗೆ ಮಾನ್ಯ ಶಾಸಕರುಗಳು ಏನಿದ್ದಾರೆ ಆ ವಿಚಾರದಲ್ಲಿ ಅವರಿಗೆ ಹೆಚ್ಚು ಅರಿವು ಇರುತ್ತೆ. ಆದರೆ ಆರು ಮಹಾನಗರ ಪಾಲಿಕೆಗಳಲ್ಲಿ ಮೈಸೂರಿನ ಸ್ಥಿತಿಯನ್ನು ನೋಡಿದರೆ ಅದು ನಮ್ಮ ರಾಜ್ಯದಲ್ಲಿದೆ ಎಂದು ನಾನು ಅಂದುಕೊಂಡಿದ್ದೇನೆ. ಮೈಸೂರು ನಗರಕ್ಕೆ ಸಂಬಂಧಪಟ್ಟಹಾಗೆ 14 ಪ್ರಾಥಮಿಕ ಆರೋಗ್ಯ ಘಟಕಗಳನ್ನು ತೆಗೆಯಲಿಕ್ಕೆ ಸರ್ಕಾರ ಆಲೋಚನೆಯನ್ನು ಮಾಡಿತ್ತು. ಆ 14 ಆರೋಗ್ಯ ಘಟಕಗಳಿಗೆ ಸಂಬಂಧಪಟ್ಟಹಾಗೆ ಕಳೆದ ಸಾಲಿನಲ್ಲಿ 2 ಲಕ್ಷದ 91 ಸಾವಿರದ 636 ಜನ ಪೇಶೆಂಟ್‌ಗಳು 14 ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಔಷಧವನ್ನು ಪಡೆದಿದ್ದಾರೆ. ಆದರೆ ಈ ಒಂದು ಘಟಕಗಳಿಗೆ ಖರ್ಚುಮಾಡಿದಂಥ ಹಣ ಎರಡು ಕೋಟಿ ರೂಪಾಯಿಗಳು. ಕರ್ನಾಟಕದ ಸೆಕೆಂಡರಿ ಆಸ್ಪತ್ರೆಯಾದ ಕೆ.ಆರ್.ಆಸ್ಪತ್ರೆಯಲ್ಲಿ ಕಳೆದವರ್ಷ 3 ಲಕ್ಷ 16 ಸಾವಿರ ಜನ ರೋಗಿಗಳು ತಪಾಸಣೆ ಅಥವಾ ಔಷಧಿಯನ್ನು ಪಡೆದಿದ್ದಾರೆ. ಅದಕ್ಕೆ ನಾವು ಕೊಟ್ಟಂಥ ಹಣ ಮೂರು ಕೋಟಿ ರೂಪಾಯಿಗಳು. ಇಲ್ಲಿ ಪ್ರಮುಖವಾಗಿ ಬರುವಂಥಾದ್ದು ಏನೆಂದರೆ ನಗರಪ್ರದೇಶಗಳಲ್ಲಿ ಒಂದು ಪ್ರೈಮರಿ ಹೆಲ್ತ್ ಯೂನಿಟ್ ಅಂದರೆ ಕೇವಲ ಸಣ್ಣಪುಟ್ಟ ರೋಗಗಳಿಗೆ ಔಷಧಿ ಪಡೆದು ಅನಂತರ ರೆಫರ್ ಆದ ಕೇಸುಗಳು ಮಾತ್ರ ಸೆಕೆಂಡರಿ ಆಸ್ಪತ್ರೆಗಳಿಗೆ ಹೋಗುತ್ತವೆ. ಆದರೆ ಈ ಆಜ್ಞೆಯನ್ನು ಮಾಡಿದಂಥ ಸಂದರ್ಭದಲ್ಲಿ 10-15 ಕಿಲೋಮೀಟರ್ ದೂರದಿಂದ ರೋಗಿಗಳು ಬರುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಉದ್ದೇಶವನ್ನು ಇಟ್ಟುಕೊಂಡು ಸರ್ಕಾರ ಈ ವಿಚಾರವನ್ನು ಜಾರಿಮಾಡಿರುವಂಥಾದ್ದು, ಅಷ್ಟೇ ಅಲ್ಲದೆ ಮೈಸೂರು ನಗರಕ್ಕೆ ಸಂಬಂಧಪಟ್ಟಹಾಗೆ 14 ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಸಂಬಂಧಪಟ್ಟಹಾಗೆ 13 ಘಟಕಗಳಿಗೆ ಸ್ವಂತ ಬಿಲ್ಡಿಂಗ್ಸ್ ಇವೆ. ಆ ಬಿಲ್ಡಿಂಗ್ಸ್‌ನ್ನು ಕೊಟ್ಟವರು ದಾನಿಗಳು. ದಾನವನ್ನು ಸರ್ಕಾರಕ್ಕೆ ಬರೆದಾಗಲೂ ಕೂಡ ಇದಕ್ಕೆ ಸಂಬಂಧಪಟ್ಟಹಾಗೆ ಈ ಒಂದು ಉದ್ದೇಶಕ್ಕೋಸ್ಕರವಾಗಿಯೇ ಉಪಯೋಗಿಸಬೇಕು, ಅದನ್ನು ಬಿಟ್ಟು ಬೇರೆ ಯಾವುದಕ್ಕೇ ಉಪಯೋಗಿಸುವುದಾದರೆ ಅದನ್ನು ಸರ್ಕಾರದಿಂದ ಹಿಂದಕ್ಕೆ ಪಡೆಯುವಂತಹ ಷರತ್ತನ್ನು ಕೂಡ ಹಾಕಿದ್ದಾರೆ. ಆದರೂ ಈ ಎಲ್ಲ ಷರತ್ತಿನ ಮಧ್ಯದಲ್ಲಿ ಎಲ್ಲ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಪ್ರತಿನಿತ್ಯ ಸುಮಾರು 180ರಿಂದ 200 ಜನ ರೋಗಿಗಳ ದಾಖಲೆಗಳು ಇದ್ದರೂ ಕೂಡ ಏತಕ್ಕೋಸ್ಕರವಾಗಿ ಇದನ್ನು ಹಿಂದೆ ಪಡೆಯುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ ಎಂಬುದನ್ನು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ರಾಜಣ್ಣನವರು ಒಂದು ವಿಚಾರ ಹೇಳಿದರು. 6 ನಗರಪಾಲಿಕೆಗಳಿಗೆ ಈ ಪಾಲಿಸಿಯನ್ನು ನೀವು ತಂದಿರಲ್ಲ,

ಪ್ರತಿಯೊಂದು ನಗರಪಾಲಿಕೆಯಲ್ಲಿ ಕಂದಾಯ ಹಾಕುವ ಸಮಯದಲ್ಲಿ ಎಲ್ಲ ಕಡೆ 2 ಪರ್ಸೆಂಟ್ ಹೆಲ್ತ್ ಸೆಸ್‌ನ್ನು ಹಾಕುತ್ತೀರಿ. ಹೆಲ್ತ್‌ಸೆಸ್‌ನ್ನು ನಗರಪಾಲಿಕೆಯವರು ಕಲೆಕ್ಟ್ ಮಾಡುತ್ತಾರೆ. ನಗರಪಾಲಿಕೆಯಿಂದ ಕೂಡ ರಾಜ್ಯಸರ್ಕಾರಕ್ಕೆ ವಿಶೇಷವಾಗಿ ಆರೋಗ್ಯ ಇಲಾಖೆಗೆ ಹಣ ಬರುತ್ತದೆ. ಈ ಹಣವನ್ನು ವಿನಿಯೋಗ ಮಾಡುವುದಕ್ಕೋಸ್ಕರವಾಗಿ ಪಿ.ಹೆಚ್.ಯು.ಗಳನ್ನು ರನ್ ಮಾಡುತ್ತಿವೆ. ಆದರೆ ಮೈಸೂರಿನ ಉದಾಹರಣೆಯನ್ನು ತೆಗೆದುಕೊಂಡರೆ ಕಳೆದ ನಾಲ್ಕು ವರ್ಷಗಳಲ್ಲಿ ಮೈಸೂರಿನಿಂದ 2 ಕೋಟಿ 86 ಲಕ್ಷ 366 ರೂಪಾಯಿಗಳನ್ನು ಹೆಲ್ತ್‌ಸೆಸ್ ಆಗಿ ನಗರಪಾಲಿಕೆಯಿಂದ ರಾಜ್ಯಸರ್ಕಾರಕ್ಕೆ ಕೊಟ್ಟಿದ್ದೇವೆ. ಒಂದು ಕಡೆ ಹಣ ಪಡೆದುಕೊಂಡರೂ ಕೂಡ ಆರೋಗ್ಯ ಘಟಕಗಳನ್ನು ಮುಚ್ಚುವಂಥ ನಿರ್ಧಾರವನ್ನು ತೆಗೆದುಕೊಂಡಿರುವುದು ಸರಿಯೆ? ಎರಡು ಸಾವಿರ ಇಸವಿಯೊಳಗೆ ಆರೋಗ್ಯವನ್ನು ಎಲ್ಲ ಪ್ರದೇಶಗಳ ಜನತೆಗೆ ಕೊಡಬೇಕೆಂದು ನಿರ್ಣಯವಾಗಿದ್ದರೆ, ಈ ಸರ್ಕಾರ ಜನಸಾಮಾನ್ಯರಿಗೆ ವಿರುದ್ಧವಾದಂಥ ಆಜ್ಞೆಯನ್ನು ಮಾಡಿದ್ದೀರಿ ಎಂಬುದರ ಬಗ್ಗೆ ತಿಳಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ನಂಜೇಗೌಡರು ಯಾವಾಗಲೂ ಹೇಳುತ್ತಲೇ ಇರುತ್ತಾರೆ. ಅವರು ಮಾತನಾಡುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಕೂಡ ನಾನು ತಪ್ಪಿಸಿಕೊಳ್ಳದೆ ಇರುತ್ತೇನೆ. ಏಕೆಂದರೆ ಆಡಳಿತ ವ್ಯವಸ್ಥೆ ಹೇಗೆ ಇರುತ್ತದೆ, ಆಡಳಿತವನ್ನು ನಡೆಸುವಂಥವರು ಹೇಗೆ ಇರಬೇಕು ಎನ್ನುವಂಥ ಅವರ ವಿಚಾರವನ್ನು ಕೇಳಲಿಕ್ಕೆ ನಾನು ಇರುತ್ತೇನೆ. ಸನ್ಮಾನ್ಯ ಮಂತ್ರಿಗಳು ಕೊಟ್ಟಂಥ ಆಜ್ಞೆಯಿಂದ ಕೇವಲ ಪ್ರಾಥಮಿಕ ಆರೋಗ್ಯಘಟಕದ ವೈದ್ಯಾಧಿಕಾರಿಗಳನ್ನು ವಿತ್‌ಡ್ರಾ ಮಾಡಿ ಎಕಾನಮಿ ಮೆಶರ್ಸ್ ಎಂದು ಹೇಳಿದರು. ಆದರೆ ಇವತ್ತು ತಾವೇನೆ ತಮ್ಮ ಇಲಾಖೆಯಲ್ಲಿ ಹೊಸ ಹೊಸ ಹುದ್ದೆಗಳನ್ನು ಸೃಷ್ಟಿ ಮಾಡಿದ್ದೀರಿ. ನಿಮ್ಮ ಇಲಾಖೆಯನ್ನು ನಡೆಸುವುದಕ್ಕೋಸ್ಕರವಾಗಿ ಇಲ್ಲಿಯವರೆಗೆ ನಡೆದುಕೊಂಡು ಬಂದಿರುವಂಥ ವ್ಯವಸ್ಥೆ ಮಧ್ಯೆದಲ್ಲಿ ಆರೋಗ್ಯ ಇಲಾಖೆಯಲ್ಲಿ ಒಬ್ಬ ಹೆಲ್ತ್ ಕಮೀಷನರ್ ಪೋಸ್ಟ್‌ನ್ನು ಕ್ರಿಯೇಟ್ ಮಾಡಿದ್ದೀರಿ. ಅಂದರೆ ಇಷ್ಟು ದಿವಸ ಕಾಲ ನಿಮ್ಮ ಇಲಾಖೆ ಹೆಲ್ತ್ ಕಮೀಷನರ್ ಇಲ್ಲದೇನೆ ನಡೆಯುತ್ತಿರಲಿಲ್ಲವೆ? ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ತೆಗೆದುಕೊಂಡು ಬಂದು ಅಲ್ಲಿ ಹಾಕಬೇಕು. ಸರ್ಕಾರಕ್ಕೆ ಒಂದು ಪೋಸ್ಟ್‌ನ್ನು ಕ್ರಿಯೇಟ್ ಮಾಡಿಕೊಡಬೇಕು ಎನ್ನುವಂಥ ಕಾರಣಕ್ಕೆ ಅಲ್ಲಿಗೆ ಅಧಿಕಾರಿ ಬಂದಿರುವುದು. ಆ ಅಧಿಕಾರಿ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ದಕ್ಷ ಆಡಳಿತಗಾರರು ಇರಬಹುದು. ಆದರೆ ಈ ಪೋಸ್ಟ್‌ನ್ನು ಕ್ರಿಯೇಟ್ ಮಾಡಿ ಹೆಲ್ತ್ ಕಮೀಷನರ್‌ಗೆ ಬೇಕಾದಂಥ ಸಿಬ್ಬಂದಿಯನ್ನು ಮತ್ತಿತರ ವ್ಯವಸ್ಥೆಗಳನ್ನು ಕೊಡುವಂಥ ಮುಖಾಂತರದಲ್ಲಿ ಪ್ರಾಥಮಿಕ ಆರೋಗ್ಯ ಘಟಕದಿಂದ ಮಿಗಿಸುವ ಹಣವನ್ನು ಒಬ್ಬ ಹೆಲ್ತ್ ಕಮೀಷನರ್‌ನ್ನು ನೇಮಕ ಮಾಡಿ ಅವರಿಗೆ ಇಡೀ ವ್ಯವಸ್ಥೆಗಳನ್ನು ಕೊಡುವ ಸಲುವಾಗಿ ತಮಗೆ ಈ ಯೋಚನೆ ಯಾಕೆ ಬಂತು? ಎರಡನೆಯದು, ಇವತ್ತು ಐ.ಪಿ.ಪಿ. ಪ್ರೋಗ್ರಾಮ್ ಬಗ್ಗೆ ದೊಡ್ಡದೊಡ್ಡ ವಿಚಾರಗಳನ್ನು ಇಲ್ಲಿ ಹೇಳುತ್ತಿದ್ದೇವೆ. ಇವತ್ತು ಇಂಡಿಯನ್ ಪಾಪ್ಯುಲೇಶನ್ ಪ್ರಾಜೆಕ್ಟ್ ಏನಿದೆ ಈ ಪ್ರಾಜೆಕ್ಟ್‌ನಲ್ಲಿ ಹಿಂದಿನಿಂದ ಕೂಡ

ಇದ್ದಂಥ ಅಡಿಶನಲ್ ಡೈರೆಕ್ಟರ್ ಅವರೇ ಅದನ್ನು ನೋಡಿಕೊಳ್ಳುತ್ತಿದ್ದರು. ಅವರೇನೆ ಈ ಪ್ರಾಜೆಕ್ಟ್‌ಗೆ ಸಂಬಂಧಿಸಿದ ಎಲ್ಲ ಕೆಲಸವನ್ನು ನಿರ್ವಹಿಸುತ್ತಿದ್ದರು. ಆದರೆ ಇವತ್ತು ಒಂದುಕಡೆ ಹುದ್ದೆಯನ್ನು ಕಿತ್ತುಹಾಕಿ ಮತ್ತೊಬ್ಬ ಅಧಿಕಾರಿಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ತಾವು ಐ.ಪಿ.ಪಿ.ಗೆ ಸಂಬಂಧಪಟ್ಟಹಾಗೆ ಸ್ಪೆಶಲ್ ಆಫೀಸರ್‌ನ್ನು ಅಪಾಯಿಂಟ್ ಮಾಡುವಂಥಾದ್ದು ಮತ್ತು ಅದಕ್ಕೆ ಬೇಕಾದಂಥ ವ್ಯವಸ್ಥೆಗಳನ್ನು ಮಾಡುವಂಥ ಅವಶ್ಯಕತೆ ಏನಿತ್ತು ಎನ್ನುವುದರ ಬಗ್ಗೆ ಕೂಡ ತಾವು ಕ್ಲಾರಿಫೈ ಮಾಡಬೇಕೆಂದು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ 25 ಸಾವಿರ ಜನರಿಗೆ ಒಂದು ಪಿ.ಹೆಚ್.ಯು. ಕೊಡುತ್ತೇವೆ ಎಂದು ಘೋಷಣೆ ಮಾಡಿದಂಥವರು ಒಂದು ಕಡೆ ಪಿ.ಹೆಚ್.ಯುಗಳನ್ನು ವಿತ್‌ಡ್ರಾ ಮಾಡುತ್ತೀರಿ. ಇನ್ನೊಂದು ಕಡೆ ಐ.ಎ.ಎಸ್. ಅಧಿಕಾರಿಗಳಿಗೆ ಅವಕಾಶ ಮಾಡಿಕೊಡುವುದಕ್ಕೋಸ್ಕರ ಹುದ್ದೆಗಳನ್ನು ನಿರ್ಮಾಣ ಮಾಡುತ್ತೀರಿ. ಈ ವ್ಯವಸ್ಥೆ ಏಕೆ ಹೆಲ್ತ್ ಸಿಸ್ಟಮ್‌ನಲ್ಲಿ ಆಗಿದೆ ಎಂದು ಕೇಳುವುದಕ್ಕೆ ಬಯಸುತ್ತೇನೆ. ಕೆಲವು ಶ್ಲಾಘನೀಯ ಕೆಲಸಗಳು ಕೂಡ ಆಗಿವೆ. ಇದನ್ನು ನಾವು ವಿರೋಧ ಪಕ್ಷದಲ್ಲಿದ್ದರೂ ಕೂಡ ಮೆಚ್ಚುಗೆ ವ್ಯಕ್ತಪಡಿಸುತ್ತೇವೆ. ಇವತ್ತು ಕರ್ನಾಟಕ ಹೆಲ್ತ್ ಸಿಸ್ಟಮ್‌ನಲ್ಲಿ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕಾಗಿರತಕ್ಕಂಥ ಒಳ್ಳೆ ಕೆಲಸ ಕೂಡ ಆಗಿದೆ. ಆದರೆ ಇಂತಹ ಯೋಜನೆಗೆ ಸಾಲವನ್ನು ಬೇರೆ ಕಡೆಯಿಂದ ತೆಗೆದುಕೊಂಡು ಬರುವಾಗ ಚೆನ್ನಾಗಿ ಇರುತ್ತದೆ. ಇವತ್ತು ನಿಮ್ಮ ಇಲಾಖೆಗೆ ಸುಮಾರು 580 ಕೋಟಿ ರೂಪಾಯಿಗಳ ವ್ಯವಸ್ಥೆ ಕರ್ನಾಟಕ ಹೆಲ್ತ್ ಸಿಸ್ಟಮ್‌ನಲ್ಲಿ ಬಂದಿದೆ. ಒಂದು ಸಾವಿರ ಕೋಟಿ ರೂಪಾಯಿಗಳನ್ನು ವರ್ಲ್ಡ್‌ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಬಂದು ರಾಜ್ಯದ ಹೆಲ್ತ್ ಸಿಸ್ಟಮ್ ವ್ಯವಸ್ಥೆಯನ್ನು ಸರಿಮಾಡುತ್ತಿದ್ದೇವೆ ಎಂಬುದು ಒಂದು ಭಾಗ ಇದ್ದರೆ, ಇನ್ನೊಂದು ಭಾಗದಲ್ಲಿ ಆ ಸಾಲವನ್ನು ತೀರಿಸುವಂಥ ವ್ಯವಸ್ಥೆ ಮುಂದೆ ಯಾವುದೇ ಸರ್ಕಾರ ಬರಲಿ ಇದರ ಸದುಪಯೋಗವಾಗಿ ಜನಸಾಮಾನ್ಯರಿಗೆ ಅನುಕೂಲ ಮಾಡಿದಾಗ ಮಾತ್ರ ಅದರ ಉಪಯೋಗ ಆಗುತ್ತದೆಯೇ ಹೊರತು ಇಲ್ಲದೇ ಹೋದರೆ ಮುಂದೆ ಬರುವಂಥ ಸರ್ಕಾರ ಆ ಸಾಲವನ್ನು ತೀರಿಸುವಂಥ ಸಮಯದಲ್ಲಿ ಈ ಸರ್ಕಾರದ ಬಗ್ಗೆ ಶಾಪವನ್ನು ಹಾಕುವಂಥ ವ್ಯವಸ್ಥೆ ಜನಸಾಮಾನ್ಯರಿಂದ ಕೂಡ ಆಗುತ್ತದೆ. ಈ ವ್ಯವಸ್ಥೆಯಲ್ಲಿ 580 ಕೋಟಿ ರೂಪಾಯಿಗಳನ್ನು ಕರ್ನಾಟಕ ಹೆಲ್ತ್ ಸಿಸ್ಟಮ್‌ನ ಅಡಿಯಲ್ಲಿ ತಾವು ಕಟ್ಟಡಗಳಿಗೆ, ಇನ್‌ಫ್ರಾಸ್ಟ್ರಕ್ಚರ್‌ಗಳಿಗೆ, ಎಕ್ವಿಪ್‌ಮೆಂಟ್ಸ್ ಪರ್ಚೇಸ್ ಮಾಡಲಿಕ್ಕೆ ಹೀಗೆ ಎಲ್ಲ ವ್ಯವಸ್ಥೆಗೂ ಕೂಡ ತಾವು ಹಣ ಇಟ್ಟಿದ್ದೀರಿ. ಇದಕ್ಕೆ ಒಂದು ಸ್ಕ್ರೀನಿಂಗ್ ಕಮಿಟಿಯನ್ನು ಕೂಡ ತಾವು ಮಾಡಿದ್ದೀರಿ. ಇದರಲ್ಲಿ ಕೆಲವು ಜನ ಒಳ್ಳೆಯ ಅಧಿಕಾರಿಗಳು ಕೂಡ ಇದ್ದಾರೆ. ಅದರ ಬಗ್ಗೆ ಯಾವುದೇ ವಿಚಾರ ಇಲ್ಲ. ಆದರೆ ಪ್ರಮುಖವಾಗಿ ಇಲ್ಲಿ ಆಗಿರುವ ವ್ಯವಸ್ಥೆಯನ್ನು ಒಂದು ಅವಲೋಕನ ಮಾಡಬೇಕೆಂದು ಸನ್ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ. ತಾವು ಈ ಸಿಸ್ಟಮ್ ಅಡಿಯಲ್ಲಿ ಸುಮಾರು 60 ಕೋಟಿ ರೂಪಾಯಿಗಳ ಎಕ್ವಿಪ್‌ಮೆಂಟ್ಸ್‌ನ್ನು ಪರ್ಚೇಸ್

ಮಾಡಿದ್ದೀರಿ. ಇದಕ್ಕೆ ಸಂಬಂಧಪಟ್ಟಹಾಗೆ ಎಕ್ಸರೇ ಮೆಶಿನ್ಸ್ ಇರಬಹುದು, ಅಲ್ಟ್ರಾಸೌಂಡ್ ಮೆಶಿನ್ಸ್ ಇರಬಹುದು, ವೆಂಟಿಲೇಟರ್ಸ್ ಇರಬಹುದು, ಐ.ಸಿ.ಯು.ಗೆ ಸಂಬಂಧಪಟ್ಟಂಥ ಉಪಕರಣಗಳು ಇರಬಹುದು, ಹೀಗೆ ಬೇರೆ ಮೆಶಿನರಿಗಳನ್ನು ತಾವು ತೆಗೆದುಕೊಳ್ಳುವ ಸಮಯದಲ್ಲಿ ಪರ್ಚೇಸ್ ಮಾಡುವಾಗ ಆ ರೇಟ್ ಕಾಂಟ್ರಾಕ್ಟ್ ಏನಿದೆ, ಇದರ ಬಗ್ಗೆ ಮಾರ್ಕೆಟ್ ವ್ಯಾಲ್ಯು ಏನಿದೆ ಅದಕ್ಕಿಂತ ಹೆಚ್ಚಿನ ವ್ಯಾಲ್ಯುವನ್ನು ಕೊಟ್ಟಿರುವಂಥ ವ್ಯವಸ್ಥೆ ಏಕೆ ಬಂತು? ಉದಾಹರಣೆಗೆ ಒಬ್ಬ ನರ್ಸಿಂಗ್ ಹೋಮ್‌ನವರು ಕೇವಲ ಒಂದು ಉಪಕರಣವನ್ನು ತರಿಸಿಕೊಂಡರೆ ಅವರಿಗೆ ಏನು ಚಾರ್ಜ್ ಮಾಡುತ್ತಾರೋ, ಹಾಗೆ 20-25-75-80 - ಈ ರೀತಿಯಲ್ಲಿ ನೂರಾರು ಎಕ್ವಿಪ್‌ಮೆಂಟ್ಸ್‌ನ್ನು ಪಡೆಯುವಂಥ ಸಂದರ್ಭದಲ್ಲಿ ಕೂಡ ತಮ್ಮಿಂದ ಆಗಿರುವ ಚಾರ್ಜಸ್‌ನ ಒಂದು ಪಟ್ಟಿಯನ್ನು ನೋಡಿದಾಗ ನಮಗಾದರೂ ಅನ್ನಿಸುತ್ತದೆ. ಈ ಕೋಟ್ಯಾಂತರ ರೂಪಾಯಿ ಹಗರಣದಲ್ಲಿ ಯಾರ್‍ಯಾರು ಭಾಗಿಗಳಾಗಿದ್ದಾರೆ ಎನ್ನುವುದನ್ನು ಸನ್ಮಾನ್ಯ ಮಂತ್ರಿಗಳು ಹೇಳಬೇಕಾಗಿ ನಾನು ಕೇಳುತ್ತೇನೆ. ಉದಾಹರಣೆಗೆ ಆಟೋಕ್ಲೇವ್ಸ್ 77 ತೆಗೆದುಕೊಂಡಿದ್ದೀರಿ. ಒಂದು ಲಕ್ಷ 19 ಸಾವಿರದ 550 ರೂಪಾಯಿಗಳ ರೇಟ್‌ನಲ್ಲಿ 77 ಆಟೋಕ್ಲೇವ್ಸ್‌ನ್ನು ತಾವು ಪಡೆದಿರಿ. ಇವತ್ತು ಮಾರ್ಕೆಟ್‌ನಲ್ಲಿ ಯಾವ ಕಂಪನಿಯಿಂದ ತೆಗೆದುಕೊಂಡಿದ್ದೀರಿ, ಅದಕ್ಕೆ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ಕೂಡ, ಇದರ ನಂತರ ತಾವು ಏನಾದರೂ ಎನ್‌ಕ್ವೈರಿ ಮಾಡುವುದಾದರೆ ಸಂಬಂಧಪಟ್ಟ ಎಲ್ಲ ವಿಚಾರಗಳನ್ನು ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. 60 ಸಾವಿರ ರೂಪಾಯಿ ಮೌಲ್ಯದ ಆಟೋಕ್ಲೇವ್ಸ್‌ನ್ನು ಒಂದು ಲಕ್ಷ, 19 ಸಾವಿರ 550 ರೂಪಾಯಿಗಳಂತೆ 77 ಯಂತ್ರಗಳನ್ನು ಪಡೆಯುವಂಥ ವ್ಯವಸ್ಥೆ ತಮ್ಮಿಂದ ಆಗಿದೆ. ಹಾಗೆಯೇ ಅಲ್ಟ್ರಾಸೌಂಡ್ ಮೆಶಿನ್‌ಗಳನ್ನು ಕರ್ನಾಟಕ ಹೆಲ್ತ್ ಸಿಸ್ಟಮ್ ಅಡಿಯಲ್ಲಿ ತಾವು ಪ್ರತಿಯೊಂದು ಅಲ್ಟ್ರಾಸೌಂಡ್ ಯಂತ್ರಕ್ಕೆ 6 ಲಕ್ಷ ರೂಪಾಯಿ ಎಂದು ಹೇಳಿ ಖರೀದಿ ಮಾಡಿದ್ದೀರಿ. ಆದರೆ ಯಾವ ಕಂಪನಿಯಲ್ಲಿ ಖರೀದಿ ಮಾಡಿದ್ದೀರೋ ಅಲ್ಲಿ 4 ಲಕ್ಷ 80 ಸಾವಿರ ರೂಪಾಯಿಗಳಿಗೆ ದೊರೆಯುವಂತಹ ಮೆಶಿನ್‌ಗೆ ತಾವು 6 ಲಕ್ಷ ರೂಪಾಯಿಗಳ ಚಾರ್ಜಸ್‌ನ್ನು ತಾವು ಕೊಟ್ಟಿದ್ದೀರಿ. ಅದೇ ರೀತಿ ಇವತ್ತು 40 ಎಕ್ಸರೇ ಮೆಶಿನ್ಸ್‌ನ್ನು ತಾವು ತೆಗೆದುಕೊಂಡಿದ್ದೀರಿ. ಅದಕ್ಕೆ ಚಾರ್ಜ್ ಆಗಿರತಕ್ಕಂಥಾದ್ದು ಒಂದು ಲಕ್ಷದ ಹತ್ತು ಸಾವಿರ ರೂಪಾಯಿಗಳು. ಸಾಮಾನ್ಯ ಒಬ್ಬ ವ್ಯಕ್ತಿ, ಅದರ ಅರಿವು ಇಲ್ಲದೇ ಇರುವಂಥವನು, ಒಬ್ಬ ನರ್ಸಿಂಗ್ ಹೋಮ್ ಪ್ರಾರಂಭ ಮಾಡುವಂಥ ಒಬ್ಬ ಪರ್ಚೇಸ್ ಆಫೀಸರ್ ಹೋದರೂ ಕೂಡ ಕೇವಲ ಒಂದು ಮೆಶಿನ್‌ಗೆ ಯಾವ ಕಂಪನಿಯಲ್ಲಿ ತಾವು ತೆಗೆದುಕೊಂಡಿದ್ದೀರಿ, ಅಲ್ಲಿ ಅದಕ್ಕೆ 70 ಸಾವಿರ ರೂಪಾಯಿಗಳಿಗೆ ಅದನ್ನು ಕೊಡುತ್ತಾರೆ.

4.30 ಪಿ.ಎಂ

ಅದನ್ನು ಒಂದು ಲಕ್ಷದ ಹತ್ತು ಸಾವಿರ ರೂಪಾಯಿಗಳಿಗೆ ತಾವು ಇವತ್ತು ಪರ್ಚೇಸ್

ಮಾಡುವಂಥ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೀರಿ. ಹೀಗೆ ಹತ್ತಾರು, ಸುಮಾರು 24 ಐಟಂಗಳನ್ನು ತಾವು ಪರ್ಚೇಸ್ ಮಾಡಿದ್ದೀರಿ. 60 ಕೋಟಿ ರೂಪಾಯಿಗಳ ಈ ಒಂದು ಪರ್ಚೇಸ್ ವ್ಯವಸ್ಥೆಗೆ, ಇದಕ್ಕೆ ಸಂಬಂಧಪಟ್ಟಹಾಗೆ ಯಾರು ಯಾರು ಸರ್ಟಿಫೈ ಮಾಡಿದ್ದಾರೆ, ರೇಟ್ ಕಾಂಟ್ರಾಕ್ಟ್ ಮಾಡಿಕೊಳ್ಳುವಂಥ ಸಮಯದಲ್ಲಿ, ಆಗಲೇ ಹೇಳಿದ ಹಾಗೆ ಸ್ಕ್ರೀನಿಂಗ್ ಕಮಿಟಿ ಮುಂದೆ ಅದು ಬಂದಿತ್ತೆ? ಒಂದು ವೇಳೆ ಬಂದಿದ್ದರೆ ಯಾವಾಗ ಇದನ್ನು ಅಪ್ರೂವಲ್ ಮಾಡಿದರು? ಈ ರೀತಿಯಾದಂಥ ಟೆಂಡರ್‌ನ್ನು ತಾವು ಕರೆದಂಥ ಸಮಯದಲ್ಲಿ, ಯಾರು ಯಾರು ಆ ಟೆಂಡರುಗಳನ್ನು ಕೋಟ್ ಮಾಡಿದ್ದರು? ಆದರೆ, ಅದೇ ಟೆಂಟರ್, ಯಾವ ಕಂಪನಿಯವರು ಕೊಟ್ಟಿದ್ದಾರೆ, ಅದೇ ಕಂಪನಿಯವರು ಬೇರೆ ಸಂಬಂಧಪಟ್ಟಂಥ ಕೇವಲ ಒಂದೊಂದು ಮಿಷನ್ ಪರ್ಚೇಸ್ ಮಾಡಿದವರಿಗೆ ಆ ರೇಟ್ ಹಾಕಿ, ಈ ಟೆಂಡರ್ ಕೊಡಲಿಕ್ಕೆ ವ್ಯವಸ್ಥೆ ಹೇಗಾಯಿತು? ಎನ್ನುವಂಥ ವಿಚಾರವನ್ನು ಜನಸಾಮಾನ್ಯರ ಮುಂದೆ ಇಟ್ಟರೆ, ಇವತ್ತು ವಿಶೇಷವಾಗಿ ಮಹದೇವಪ್ಪನವರು ಆರೋಗ್ಯ ಇಲಾಖೆಯಲ್ಲಿ ಒಳ್ಳೆಯ ಹಸ್ತ ಇಟ್ಟುಕೊಂಡಿದ್ದಾರೆ ಎಂಬ ವಿಚಾರ ಏನಿದೆ, ಅದು ಇವತ್ತು ಉಳಿದುಕೊಳ್ಳುವಂಥ ವ್ಯವಸ್ಥೆಯಾಗುತ್ತೆ. ದಯಮಾಡಿ ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕೆಂಬ ವಿಚಾರವನ್ನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯದು, ಇವತ್ತು ಕಳೆದ 4 ವರ್ಷಗಳ ಕಾಲದಿಂದಲೂ ಕೂಡ, ತಾಲ್ಲೂಕು ಕೇಂದ್ರಗಳಲ್ಲಿ, ಜಿಲ್ಲಾ ಆಸ್ಪತ್ರೆಗಳಲ್ಲಿ ಎಕ್ಸ್‌ರೇ ಮಿಷಿನ್‌ಗಳು, ಅದಕ್ಕೆ ಸಂಬಂಧಪಟ್ಟಹಾಗೆ ಮಿಷಿನ್‌ಗಳು ಕೆಟ್ಟಿವೆ. ನಮ್ಮ ಆಸ್ಪತ್ರೆಯಲ್ಲಿ ದುರಸ್ತಿಯಾಗಬೇಕು. ಈ ವ್ಯವಸ್ಥೆಯನ್ನು ಬಹುತೇಕ ಎಲ್ಲಾ ಪಕ್ಷಗಳ ಶಾಸಕರು ಈ ಸದನದಲ್ಲಿ ಹೇಳಿದಂಥ ಮಾತುಗಳು ಇವೆ. ಯಾವ ಕರ್ನಾಟಕ ಹೆಲ್ತ್ ಸಿಸ್ಟಂನಲ್ಲಿ ತಾವು ಸ್ಕೀಮ್‌ಗಳನ್ನು ತೆಗೆದುಕೊಂಡಿರಿ, ಅದರಲ್ಲಿ ವರ್ಲ್ಡ್‌ಬ್ಯಾಂಕ್ ಸಾಲವನ್ನು ತಂದಂಥ ಸಮಯದಲ್ಲಿ ಕನ್‌ಸ್ಟ್ರಕ್ಟೀವ್ ವರ್ಕ್‌ಗಳಿಗಿಂತಲೂ ಕೂಡ ಬರುವಂತಹ ದಿನನಿತ್ಯದ, ಪ್ರತಿವರ್ಷದ ಬಜೆಟ್‌ನಲ್ಲಿ ಆ ಹಣವನ್ನು ತಾವು ರಿಪೇರಿಗೆ ಇಟ್ಟುಕೊಳ್ಳಬಹುದಿತ್ತು. ಆದರೂ ಈ ಸಿಸ್ಟಂ ಅಡಿಯಲ್ಲಿ ತಾವು ರಿಪೇರಿಗೋಸ್ಕರವಾಗಿ 10 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೀರಿ. ಈ 10 ಕೋಟಿ ರೂಪಾಯಿಗಳಲ್ಲಿ, ತಮ್ಮ ಅಧಿಕಾರಿಗಳು ಕೊಟ್ಟಿರುವಂಥ ದಾಖಲೆಗಳ ಪ್ರಕಾರದಲ್ಲೇ ತಾವು ಟೆಂಡರ್‌ನ್ನು ಕೋಟ್ ಮಾಡಿದಿರಿ. ಏರಿಯಾ ಟೆಂಡರ್ ಕಂಡೀಷನ್ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿರುವಂತಹ ಎಕ್ವಿಪ್‌ಮೆಂಟ್ಸ್‌ನ್ನು ಒನ್ ಟೈಮ್ ರಿಪೈರ್ಸ್ ಅಂದರೆ, ಯಾರು ಟೆಂಟರ್‌ನ್ನು ತೆಗೆದುಕೊಂಡಿದ್ದಾನೋ, ಅವನು ಹೋಗಿ ಅಲ್ಲಿ ಅಟೆಂಡ್ ಮಾಡಿ, ರಿಪೇರಿ ಮಾಡಿ ಬಂದರೆ ನಾಳೆ ದಿವಸ ಅದು ಕೆಟ್ಟುಹೋದರೂ ಅವನು ಜವಾಬ್ದಾರಿ ಅಲ್ಲ. ನಿಮ್ಮ ಟೆಂಡರ್ ಕಾಂಟ್ರಾಕ್ಟ್ ಪ್ರಕಾರದಲ್ಲಿ ಇವತ್ತು ಹೋಗಿ ಒಂದು ಸಲ ಅಟೆಂಡ್ ಮಾಡಿ ಬಂದರೆ ಸಾಕು ಅವು ಒಂದು ದಿವಸ ರಿಪೇರಿಯಾಗಿದ್ದು, ಮೂರನೇ ದಿವಸ ಕೆಟ್ಟುಹೋದರೂ ಅವನು ಜವಾಬ್ದಾರ ಅಲ್ಲ ಅನ್ನುವಂಥ ರೀತಿಯಲ್ಲಿ, ಒನ್ ಟೈಮ್ ರಿಪೇರಿಗೋಸ್ಕರ 10 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೀರಿ. ಈಗಾಗಲೇ

ಶೇಕಡ 50 ಭಾಗ ಹಣ ಅಂದರೆ 5 ಕೋಟಿ ರೂಪಾಯಿಗಳಷ್ಟು ಹಣ ವಿನಿಯೋಗವಾಗಿದೆ. ಆದರೆ, ಒಂದು ಬಾರಿ ದಯಮಾಡಿ ಮಂತ್ರಿಗಳು, ತಮ್ಮ ಅಧಿಕಾರಿಗಳನ್ನು, ಬೇರೆ ಇಲಾಖೆಯಲ್ಲಿರುವಂಥ ಅಧಿಕಾರಿಗಳನ್ನು ಒಂದುಸಾರಿ ಜಿಲ್ಲಾ ಆಸ್ಪತ್ರೆಗಳಿಗೆ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಕಳುಹಿಸಿ ಈಗಾಗಲೇ ರಿಪೇರಿಯಾಗಿರುವಂಥ ಮಿಷನ್‌ನಲ್ಲಿ, ಎಷ್ಟು ಮಿಷನ್‌ಗಳು ಮತ್ತೆ ಕೆಟ್ಟಿದೆ, ಕೇವಲ ರಿಪೇರಿ ಮಾಡುವಂಥ ವಿಚಾರವನ್ನು ಇಟ್ಟುಕೊಂಡು, ಕೇವಲ ವಿಸಿಟ್ ಮಾಡಿ ಬಂದು 5 ಕೋಟಿ ರೂಪಾಯಿಗಳನ್ನು ಪಡೆದಿರುವಂಥ ಸಂಸ್ಥೆ ಯಾವುದು? ಇವತ್ತು ತಾವು ವಿಪ್ರೋ ಜಿ ಕಂಪನಿಗೆ ಕೊಟ್ಟಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಈ ರೀತಿ ಕೊಟ್ಟ ನಂತರ 5 ಕೋಟಿ ರೂಪಾಯಿಗಳನ್ನು ಡ್ರಾ ಮಾಡಿದ ನಂತರದಲ್ಲಿ ಯಾವ ಯಾವ ಜಿಲ್ಲಾ ಕೇಂದ್ರಗಳಿಗೆ ಹೋಗಿ, ಯಾವ ಯಾವ ಎಕ್ವಿಪ್‌ಮೆಂಟ್ಸ್‌ನ್ನು ಅವರು ಹಾಕಿದ್ದಾರೆ. ಎಲ್ಲೆಲ್ಲಿ ರಿಪೇರಿ ಮಾಡಿದ್ದಾರೆ ಎಂಬ ವಿಚಾರವನ್ನು ತಾವು ನೋಡಿದಾಗ ಶೇಕಡ 50 ಭಾಗ ಮಿಷನರಿಗಳು ಒಂದು ವಾರದಲ್ಲೇ ಮತ್ತೆ ಕೆಟ್ಟುನಿಂತಿವೆ. ಅಂದರೆ 5 ಕೋಟಿ ರೂಪಾಯಿಗಳನ್ನು ಏತಕ್ಕೋಸ್ಕರ ಕೊಟ್ಟಿದ್ದೇವೆ. ಇದರಲ್ಲಿ 10 ಕೋಟಿ ರೂಪಾಯಿಗಳನ್ನು ಏತಕ್ಕೋಸ್ಕರ ತೆಗೆದಿಟ್ಟಿದ್ದೇವೆ. ಇದರ ವ್ಯವಸ್ಥೆ ಏನು ಎನ್ನುವಂತಾದ್ದನ್ನು ಸನ್ಮಾನ್ಯ ಮಂತ್ರಿಗಳು ಸದನದ ಮುಂದೆ ಇಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಹಾಗೆಯೇ ಪ್ರಮುಖವಾಗಿ ತಾವು ರಾಜ್ಯದಲ್ಲಿ ಆರೋಗ್ಯವನ್ನು ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಕೊಡಬೇಕು. ಅಂದರೆ ಅರ್ಥ ಕೇವಲ ಡಾಕ್ಟರುಗಳನ್ನು ನೇಮಕ ಮಾಡಿದರೆ, ಕೇವಲ ನರ್ಸ್‌ಗಳನ್ನು ನೇಮಕಾತಿ ಮಾಡಿದರೆ, ಆಸ್ಪತ್ರೆಗಳಿಗೆ ಕಟ್ಟಡವನ್ನು ಕೊಟ್ಟರೆ ಸಾಕಾಗುವುದಿಲ್ಲವೆಂದು ಜನಸಾಮಾನ್ಯರಿಗೂ ಗೊತ್ತು. ಆದರೆ, ತಮ್ಮ ಸರ್ಕಾರ ಬಂದನಂತರ, ರಾಜ್ಯದಲ್ಲಿ ತಾವು ಎಷ್ಟೋ ಬಾರಿ ಆ ವಿಚಾರವನ್ನು ಒಪ್ಪಿದ್ದೀರಿ. ಇನ್ನೂ ಒಪ್ಪಿಕೊಳ್ಳುತ್ತೀರಿ ಎಂದು ನನಗನಿಸುತ್ತದೆ. ವಿಶೇಷವಾಗಿ ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಎಂದು, ಒಂದು ಡಿಪಾರ್ಟ್‌ಮೆಂಟ್ ಇದೆ. ಅದನ್ನು ಪ್ರತ್ಯೇಕ ಇಲಾಖೆ ಎಂದು ತಾವು ಮಾಡಿದ್ದೀರಿ. ರಾಜ್ಯದಲ್ಲಿ 12,747 ಲೈಸೆನ್ಸ್‌ಗಳನ್ನು ತಾವು ಕೊಟ್ಟಿದ್ದೀರಿ. ಯಾರು ಫಾರ್ಮಾಸಿಸ್ಟ್‌ಗಳಿಗೆ ಔಷಧಿಗಳನ್ನು ವಿತರಣೆ ಮಾಡುವುದಕ್ಕಾಗಿ ಕೊಟ್ಟಂಥ ಆ ಲೈಸೆನ್ಸ್‌ಗಳು. ಕಳೆದ ಸಾಲಿನ ವರದಿ ಪ್ರಕಾರ, ಪ್ರತಿ ವರ್ಷ ನಮ್ಮ ರಾಜ್ಯದಲ್ಲಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ಔಷಧ ವ್ಯಾಪಾರ ಆಗುತ್ತಾ ಇದೆ. ಹೀಗಿದ್ದರೂ ಕೂಡ, ಇದರ ಜೊತೆಯಲ್ಲಿ ಪ್ರಮುಖವಾಗಿ ತಮ್ಮ ಅವಧಿಯಲ್ಲೇ ಸುಮಾರು 1099 ಔಷಧಗಳನ್ನು ಸ್ಯಾಂಪಲ್ ಸರ್ವೆ ಎಂದು ತಾವು ತೆಗೆದು ಟೆಸ್ಟಿಂಗ್‌ಗೆ ಕೊಟ್ಟಂಥ ಸಮಯದಲ್ಲಿ 111 ಔಷಧಗಳು ನಕಲಿ ಎನ್ನುವಂಥ ವಿಚಾರ ಬಂದಿದೆ. ಆದರೂ ನಮಗೆ ಆಶ್ಚರ್ಯ ಏನಾಗುತ್ತದೆಂದರೆ, ತಮ್ಮ ರಿಪೋರ್ಟ್‌ನ ಪ್ರಕಾರ, ಕೇವಲ ಒಂದೇ ಒಂದು ಇಲಾಖೆ ಇದೆ. ತಮಗೆ ಒಂದೇ ಒಂದು ಸೆಂಟರ್ ಇದೆ. ಈ ಔಷಧಗಳ ನಕಲುಗಳು ಜಾಸ್ತಿಯಾಗುತ್ತಿದ್ದರೂ ಕೂಡ, ಆ ಸಂಖ್ಯೆಯನ್ನು ಪತ್ತೆ ಮಾಡುವಂಥ

ವ್ಯವಸ್ಥೆ ಸಾಧ್ಯವಾಗುತ್ತಾ ಇಲ್ಲ. ಏಕೆಂದರೆ, ಇವತ್ತು ಔಷಧಗಳ, ಕಂಪನಿಗಳ ಸಂಖ್ಯೆ ಕೂಡ ದಿನೇದಿನೇ ಜಾಸ್ತಿಯಾಗುತ್ತಿದೆ. ಆದರೆ, ನಿಮ್ಮಲ್ಲಿರುವಂಥ ಪ್ರಯೋಗಾಲಯದಲ್ಲಿ ಒಂದು ವರ್ಷಕ್ಕೆ ತಾವು ಟೆಸ್ಟ್ ಮಾಡಲಿಕ್ಕೆ ಅವಕಾಶವಿರುವಂತಾದ್ದು 1800 ಸ್ಯಾಂಪಲ್‌ಗಳನ್ನು ಮಾತ್ರ ತಾವು ಸರ್ವೆ ಮಾಡಬಹುದು. ಆ ಒಂದು ರಿಪೋರ್ಟನ್ನು ತಾವು ಕೊಡಬಹುದು. ಆದರೆ, ಪ್ರತಿ ವರ್ಷ 3 ಸಾವಿರದಿಂದ 4 ಸಾವಿರ ಹೊಸ ಕಂಪನಿಗಳು, ಹೊಸ ಔಷಧಿಗಳನ್ನು ಮಾರ್ಕೆಟ್ಟಿಗೆ ಬಿಡುತ್ತಿರುವಂಥ ಸಂದರ್ಭದಲ್ಲಿ, ಇದನ್ನು ಸ್ಪೂರಿಯಸ್ ಎಂದು ಹೇಳುವಂಥ ವ್ಯವಸ್ಥೆಗೆ ಅಥವಾ ಇದು ಒಳ್ಳೆಯ ಔಷಧಿ ಎಂದು ಹೇಳಲಿಕ್ಕೆ ನಮ್ಮಲ್ಲಿ ಇವತ್ತಿನವರೆಗೂ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಂಡು ಬಂದಿಲ್ಲ. ಕಳೆದ 4 ವರ್ಷಗಳ ಕಾಲದಿಂದ ಈ ವಿಚಾರ ಚರ್ಚೆಗೆ ಬಂದರೂ ಕೂಡ ಇವತ್ತಿನವರೆಗೆ ಈ ಇಲಾಖೆಯ ವಿಚಾರದಲ್ಲಿ ತಾವು ಗಮನವನ್ನು ಕೊಟ್ಟಿಲ್ಲವೆಂದು ಹೇಳುವುದು ಬಹಳ ನೋವಿನ ವಿಚಾರ. ಹಳೆಯ ಪ್ರಯೋಗ ಶಾಲೆ ಏನಿದೆ, ಅದೇ ಪ್ರಯೋಗ ಶಾಲೆಯಲ್ಲಿಯೇ ಪರೀಕ್ಷೆ ಮಾಡತಕ್ಕ ಸಾಧನಗಳೇನಿವೆ, ಅದರಲ್ಲೇ ಇವತ್ತು ಕೂಡ ನಾವು ಆ ಕೆಲಸವನ್ನು ಮಾಡುತ್ತಾ ಬಂದಿದ್ದೇವೆ. ಇನ್ನೊಂದು ನಮಗೆ ತಿಳಿದ ಪ್ರಕಾರದಲ್ಲಿ ಅಲ್ಲಿರುವಂಥ ಸೀನಿಯರ್ ಕೆಮಿಸ್ಟರ್, ಸಾಮಾನ್ಯ ಹುದ್ದೆಗಳು, ತುಂಬ ಅವಶ್ಯಕವಾದ ಹುದ್ದೆಗಳು. ಇಂತಹ ಸೀನಿಯರ್ ಕೆಮಿಸ್ಟರಂಥ 8 ಹುದ್ದೆಗಳನ್ನು ತಾವು ಭರ್ತಿ ಮಾಡಿಲ್ಲ. ಕಿರಿಯ ಕೆಮಿಸ್ಟರ 40 ಹುದ್ದೆಗಳು ಹಾಗೆಯೇ ಖಾಲಿ ಇವೆ. ಪ್ರಯೋಗ ಶಾಲೆಗೆ ಲ್ಯಾಬೊರೇಟರೀಸ್‌ಗಳಲ್ಲಿ ಕೆಲಸ ಮಾಡುವಂಥ ಸಾಮಾನ್ಯ ತಜ್ಞರ ಹುದ್ದೆಗಳು 40 ಖಾಲಿ ಇವೆ. ಇಂತಹ ಹುದ್ದೆಗಳನ್ನು ಕೂಡ ನೇಮಕ ಮಾಡದೇ ಒಂದು ಕಡೆ ಪ್ರತಿ ವರ್ಷ ಕೊಟ್ಟಂಥ ಬಜೆಟ್ ಅಲೋಕೇಷನ್‌ನ್ನು ಕೂಡ ಉಪಯೋಗಿಸಿಕೊಳ್ಳದೇ ಉಳಿದುಕೊಂಡರೆ, ನಿಷ್ಕ್ರಿಯವಾಗಿದೆ ಆ ಇಲಾಖೆ. ಅಥವಾ ಯಾವ ಉದ್ದೇಶದಿಂದ ಆ ಹಣವನ್ನು ಉಪಯೋಗಿಸದೇ ಹಾಗೆಯೇ ಬಿಟ್ಟರು? ಒಂದು ಕಡೆ ನೇಮಕಾತಿಯನ್ನೂ ಮಾಡದೇ ಹಾಗೆಯೇ ಏಕೆ ಉಳಿಸಿಕೊಂಡಿದ್ದಾರೆ ಎಂಬ ವಿಚಾರವನ್ನು ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದರ ಜೊತೆಯಲ್ಲಿ ತಮ್ಮ ಇಲಾಖೆಯಲ್ಲಿ ಕೇವಲ ಒಂದು ಉದಾಹರಣೆಯನ್ನು ನಾನು ಏತಕ್ಕೋಸ್ಕರ ಕೊಡುತ್ತೇವೆಂದರೆ, ಇನ್ನೂ ಹತ್ತಾರು ಉದಾಹರಣೆಗಳು ನಮ್ಮ ಮುಂದೆ ಇದ್ದರೂ ಕೂಡ, ಒಂದು ಔಷಧ ತಮ್ಮ ಲ್ಯಾಬೊರೇಟರಿಗೆ ಬಂದ ಸಮಯದಲ್ಲಿ ಸುಮಾರು 7-8 ತಿಂಗಳ ಕಾಲದವರೆಗೂ ಕೂಡ ಅದರ ರಿಪೋರ್ಟ್ ಕೊಡುವುದಿಲ್ಲ. 7 ತಿಂಗಳ ನಂತರ ಒಂದು ರಿಪೋರ್ಟ್ ಬರುತ್ತೆ. "Sample is not of standard quality as it does not contain trammy katin. Sample was considered spurious under section 17(b). (d)of the drugs cosmetics Act and rules. "ಆ ರಿಪೋರ್ಟ್ ಬರುವುದಕ್ಕೂ ಮುಂಚೆ, ಆ ಔಷಧದ ಕಂಪನಿಯಿಂದ ನಿಮ್ಮ ಅಧಿಕಾರಿಗಳಿಂದ 64,481 ಟ್ಯೂಬ್‌ಗಳನ್ನು ಆಗಲೇ

ಪರ್ಚೇಸ್ ಮಾಡಲಾಗಿತ್ತು. ನಮ್ಮ ವ್ಯವಸ್ಥೆ ಹೇಗಿದೆ ಎಂದರೆ, ಸ್ಯಾಂಪಲನ್ನು ಕಳುಹಿಸಿಕೊಟ್ಟ ನಂತರದಲ್ಲಿ, ರಿಪೋರ್ಟ್ ಬರುವುದಕ್ಕೂ ಮುಂಚೆಯೇ 8-9 ತಿಂಗಳುಗಳ ಕಾಲ ಉದ್ದೇಶಪೂರ್ವಕವಾಗಿಯೋ, ಅಲ್ಲಿ ಇರುವಂಥ ವ್ಯವಸ್ಥೆಯ ದೃಷ್ಟಿಯಿಂದಲೋ, ಒಂದು ವರ್ಷದವರೆಗೆ ರಿಪೋರ್ಟ್ ಬರುವುದಿಲ್ಲ. ಆ ಸ್ಯಾಂಪಲ್ಲಿನ ಆಧಾರದ ಮೇಲೆ ತಮ್ಮವರು ಅದನ್ನು ಪರ್ಚೇಸ್ ಮಾಡುತ್ತಾರೆ. ಹೀಗೆ ಕಳೆದ 3-4 ವರ್ಷಗಳಿಂದ ಬೇರೆ ಬೇರೆ ಕಂಪನಿಗಳಲ್ಲಿ ಆಗಿರುವಂಥ ಪ್ರಕರಣಗಳೂ ಕೂಡ ನಮ್ಮ ಮುಂದೆ ಇವೆ. ಯಾವ ಉದ್ದೇಶದಿಂದ ಇಂತಹ ಕಳಪೆ ಔಷಧಗಳು ಮಾರಾಟವಾಗುವಂಥ ಒಂದು ದೊಡ್ಡ ಜಾಲ ಏನಿದೆ, ಇವತ್ತು ಅಂತಹ ಜಾಲದ ವಿರುದ್ಧವಾಗಿ ತಮ್ಮ ಇಲಾಖೆ ಪ್ರಾಮಾಣಿಕವಾದ ರೀತಿಯಲ್ಲಿ ಕ್ರಮವನ್ನು ಏನು ಕೈಗೊಂಡಿದೆ? ಎನ್ನುವಂಥ ವಿಚಾರವನ್ನು ಕೇಳುತ್ತಾ ಇಂತಹ ಔಷಧಿಗಳ ಮಾರಾಟ ದಿನೇದಿನೇ ಜಾಸ್ತಿಯಾಗುತ್ತಿದ್ದರೂ ಕೂಡ, ಸೆಂಟ್ರಲ್ ಆಕ್ಟ್ ಇದೆ, ಸ್ಟೇಟ್ ಆಕ್ಟ್ ಇದೆ, ಎಲ್ಲಾ ಆಕ್ಟ್‌ಗಳಿದ್ದರೂ ಕೂಡ, ಒಂದು ನನಗೆ ಆಶ್ಚರ್ಯವಾಗುತ್ತದೆ. ಇವತ್ತಿನವರೆಗೆ ತಾವು ಎಷ್ಟು ಕೇಸುಗಳನ್ನು ತಾವು ದಾಖಲಾತಿ ಮಾಡಿದ್ದೀರಿ, ಎನ್ನುವಂಥ ವಿಚಾರವನ್ನು ಕೇಳಿದಾಗ ತಮ್ಮ ಇಲಾಖೆಯಲ್ಲಿ ಹೇಳುತ್ತೀರಿ. ಇವತ್ತಿನವರೆಗೂ ಆಗಿರುವಂತಹ ಕೇಸ್‌ಗಳು 163. ಕಳೆದ 4 ವರ್ಷಗಳಿಂದ ಆಗಿರುವಂತಾದ್ದು ಎಲ್ಲಾ ಸೇರಿ 187 ಕೇಸ್‌ಗಳನ್ನು ದಾಖಲಾತಿ ಮಾಡಿದ್ದೀರಿ. ಆದರೆ ಇತ್ಯರ್ಥವಾಗಿರುವುದು ಎಷ್ಟು? ಕೇವಲ ಎರಡೇ ಎರಡು. ಅಂದರೆ ಅದರ ಅರ್ಥ ಇಬ್ಬರಿಗೆ ಮಾತ್ರ ಇದುವರೆಗೂ ಶಿಕ್ಷೆಯಾಗಿದೆ. ಇದಕ್ಕೆ ವ್ಯವಸ್ಥಿತವಾದ ರೀತಿಯಲ್ಲಿ ಯಾವ ಒಂದು ಔಷಧ ಜಾಲ ಇದೆ ಅದರ ಒಂದು ನಿಯಂತ್ರಣವನ್ನು ಅವರ ನಿಯಂತ್ರಣವನ್ನು ಔಷಧದ ವಿಶೇಷವಾಗಿ ಮಾರಾಟ ಮಾಡುವಂತಹ ಈ ನಕಲಿ ಔಷಧಿಯ ವಿರುದ್ಧವಾದಂತಹ ಕ್ರಮವನ್ನು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವಂತಾದ್ದನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ತಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಇವತ್ತು ತರಬೇತಿ ಕಾರ್ಯಕ್ರಮ ಪ್ರಕಾರ ತಮ್ಮ ಇಲಾಖೆಯಿಂದ 1997-98, 1998-99ರಲ್ಲಿ 6 ಮಂದಿ ಎಂ.ಡಿ. ತಜ್ಞರುಗಳನ್ನು ಕಳುಹಿಸಿದಿರಿ. 11 ಜನ ಎಂ.ಎಸ್. ತಜ್ಞರುಗಳನ್ನು ಬೇರೆ ಬೇರೆ ದೇಶಕ್ಕೆ ತರಬೇತಿಗೆ ಕಳುಹಿಸಿದಿರಿ. ನಮ್ಮ ದೇಶದಿಂದ ಹೊರದೇಶಕ್ಕೂ ಕಳುಹಿಸಿದಿರಿ. ಅವರ ಸರ್ವೀಸ್ ಇವತ್ತು ಏನಾಗಿದೆ? ಅವರನ್ನು ಯಾವ ನಿರ್ದಿಷ್ಟವಾದ ಹುದ್ದೆಗೆ ನೇಮಕ ಮಾಡಬೇಕೆನ್ನುವ ವಿಚಾರವನ್ನು ಇಟ್ಟುಕೊಂಡಿದ್ದಿರೋ ಅದರ ಉದ್ದೇಶವನ್ನು ಪಾಲನೆ ಮಾಡದೇ ಹೋದ ಸಂದರ್ಭದಲ್ಲಿ ಅದಕ್ಕೆ ಖರ್ಚು ಮಾಡಿದಂತಹ ಹಣದ ಲಾಭ ಏನು. ಸರ್ಕಾರದ ಖಜಾನೆಗೆ ಎಷ್ಟು ಹಣ ಖರ್ಚಾಗಿದೆ. ಅದರ ಉಪಯೋಗ ಜನಸಾಮಾನ್ಯನಿಗೆ ಆಗಿದೆಯೇ ಇಲ್ಲವೇ ಎನ್ನುವಂತಹ ವಿಚಾರವನ್ನು ಕೂಡ ತಾವು ಹೇಳಬೇಕು. ಇನ್ನೊಂದು ತಮ್ಮ ಇಲಾಖೆಯಲ್ಲಿರುವ ಆಂಬ್ಯುಲೆನ್ಸ್ ರಿಪೇರಿ ಬಗ್ಗೆ ನಾನು ಮಾತನಾಡುವುದಾದರೆ ತಾವು ತಮ್ಮ ಜಾಹೀರಾತುಗಳಲ್ಲಿ 1998-99 ನೇ ಸಾಲಿನ ವಾರ್ಷಿಕ ವರದಿ ಎಂದು ಹೇಳಿ, ದೊಡ್ಡ

ದೊಡ್ಡ ಜಾಹೀರಾತುಗಳನ್ನು ತಾವು ನೀಡಿದ್ದೀರಿ. ಆ ಜಾಹೀರಾತುಗಳಲ್ಲಿ ತಾವು ಹೇಳುವಂತಹ ಸಮಯದಲ್ಲಿ, ಸುಮಾರು 118 ವಾಹನಗಳನ್ನು ನಾವು ಖರೀದಿಸಿದ್ದೇವೆ. ವಾಹನಗಳ ರಿಪೇರಿ ಕೆಲಸವನ್ನು ಮಾಡುವುದಕ್ಕೋಸ್ಕರವಾಗಿ ಜಿಲ್ಲಾ ಮಟ್ಟದಲ್ಲಿ ಒಂದು ವೈದ್ಯಕೀಯ ಉಸ್ತುವಾರಿ ಕೇಂದ್ರವನ್ನು ತೆರೆಯಲಾಗಿದೆ. ಅಂದರೆ ಇದರ ಅರ್ಥ ಈಗಿರುವ ರಿಪೇರಿ ವ್ಯವಸ್ಥೆಯನ್ನು ಕೇಂದ್ರದಿಂದ ಮಾಡಲಿಕ್ಕೆ ಆಗದೆ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಬೇರೆ ಬೇರೆ ಕಡೆ ಕೂಡ ತಿಂಗಳಾನುಗಟ್ಟಲೆ ರಿಪೇರಿಯಾಗದೇ ಇವೆ ಎನ್ನುವ ಮಾತನ್ನು ಮಾನ್ಯ ಸದಸ್ಯರುಗಳು ಇಲ್ಲಿ ಮಾತನಾಡುವ ಸಂದರ್ಭದಲ್ಲಿ ಹೇಳಿದರು. ರಿಪೇರಿ ವ್ಯವಸ್ಥೆಯೇ ಇಲ್ಲದೇ ಇರುವಾಗ ಆ ರಿಪೇರಿಯ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೋಸ್ಕರವಾಗಿ, ಜಿಲ್ಲಾ ಮಟ್ಟದಲ್ಲಿ ಒಂದು ಸಲಹಾ ಕೇಂದ್ರ, ಅಂದರೆ ಉಸ್ತುವಾರಿ ಕೇಂದ್ರ ಇದೆ. ಅದಕ್ಕೆ ಒಬ್ಬ ಅಧಿಕಾರಿ. ಅದನ್ನು ನೋಡಿಕೊಳ್ಳುವಂತಹ ವ್ಯವಸ್ಥೆಗಳು. ಕೇವಲ ಅವರನ್ನು ನೋಡಿಕೊಳ್ಳುವಂತಹ ವ್ಯವಸ್ಥೆಗಳು ಆರೋಗ್ಯ ಇಲಾಖೆಯಲ್ಲಿದೆಯೇ ಹೊರತು, ರಿಪೇರಿ ಮಾಡುವಂತಾದ್ದು ಅಲ್ಲ. ಇಂತಹ ಅನಾವಶ್ಯಕ ಹುದ್ದೆಗಳನ್ನು ನಿರ್ಮಾಣ ಮಾಡುವ ಬದಲು ರಿಪೇರಿಯ ವ್ಯವಸ್ಥೆಗೋಸ್ಕರವಾಗಿ, ತಾವು ಪ್ರಮುಖವಾಗಿ ಕೊಟ್ಟಿರುವಂತಹ ಹೆಜ್ಜೆ ಏನು ಎಂದು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ತಾವು ಸುಮಾರು 118 ಆಂಬ್ಯುಲೆನ್ಸ್‌ಗಳನ್ನು ಹೊಸದಾಗಿ ತೆಗೆದುಕೊಂಡಿದ್ದೀರಿ. ಅದರ ಜೊತೆಗೆ ಸುಮಾರು 162 ಆಂಬ್ಯುಲೆನ್ಸ್‌ಗಳು ವಾಹನ ಚಾಲಕರು ಇಲ್ಲದೆ ನಿಂತಿದ್ದಾವೆ. ಇಡೀ ರಾಜ್ಯದಲ್ಲಿ ಸುಮಾರು 162 ಆಂಬ್ಯುಲೆನ್ಸ್‌ಗಳು ವಾಹನ ಚಾಲಕರು ಇಲ್ಲದೇ ನಿಂತಿವೆ ಎಂದು ತಮ್ಮ ಸರ್ಕಾರವೇ ಈ ಸದನದಲ್ಲಿ ವರದಿಯನ್ನು ಕೊಡುವಂತಹ ಸಂದರ್ಭದಲ್ಲಿ ಕೊಟ್ಟಿದ್ದೀರಿ. ಇವತ್ತು ತಾವು ಅಂತಹ ಹುದ್ದೆಗಳನ್ನು ನೇಮಕ ಮಾಡುವಂತಹ ವಿಚಾರದಲ್ಲಿ ತೆಗೆದುಕೊಂಡಂತಹ ಕ್ರಮ ಏನು? ಕೇವಲ ವಾಹನ ಚಾಲಕರು ಇಲ್ಲ ಎಂದು ಆಂಬ್ಯುಲೆನ್ಸ್ ನಿಲ್ಲುವುದು, ಎಲ್ಲಿ ವಾಹನ ಚಾಲಕರು ಇರುತ್ತಾರೋ ಅಲ್ಲಿ ಆಂಬ್ಯುಲೆನ್ಸ್ ಕೆಟ್ಟಿರುತ್ತದೆ. ಎಲ್ಲಿ ವಾಹನ ಚಾಲಕರು ಇಲ್ಲ ಅಲ್ಲಿ ಆಂಬ್ಯುಲೆನ್ಸ್ ಇದೆ ಎನ್ನುವ ತೃಪ್ತಿ ಮಾತ್ರ ನಮಗೆ ಇದೆ, ಆ ಆಂಬ್ಯುಲೆನ್ಸ್‌ಗೆ ವಾಹನ ಚಾಲಕರು ಬಂದಾಗ ಮಾತ್ರ ನಮಗೆ ಗೊತ್ತಾಗುವುದು, ಆ ಆಂಬ್ಯುಲೆನ್ಸ್ ಏನಾಗಿದೆ ಎಂದು. ಈ ವ್ಯವಸ್ಥೆಯಲ್ಲಿ ಹೊಸ ಆಂಬ್ಯುಲೆನ್ಸ್‌ಗಳನ್ನು ತೆಗೆದುಕೊಳ್ಳುವುದು ಒಂದು ಭಾಗವಾದರೆ, ಇರುವಂತಹ ಆಂಬ್ಯುಲೆನ್ಸ್‌ಗಳು ಸಾಮಾನ್ಯ ವ್ಯಕ್ತಿಗೆ ಅವಶ್ಯಕವಾಗಿ ಬೇಕಾಗುವಂತಹ ಉಪಕರಣಗಳು. ಇದರ ಬಗ್ಗೆ ನಮ್ಮ ಪರಿಜ್ಞಾನ ಯಾವ ರೀತಿ ಹೋಗಿದೆ ಎನ್ನುವುದನ್ನು ನೋಡಬೇಕು. ದೊಡ್ಡ ದೊಡ್ಡ ಕಟ್ಟಡಗಳನ್ನು ತಾವು ಕಟ್ಟುವಂಥಾದ್ದು ಅದರ ಶಂಕುಸ್ಥಾಪನೆಗೆ ಶಾಸಕರುಗಳನ್ನು ಮಂತ್ರಿಗಳನ್ನು ಕರೆಯುವಂಥಾದ್ದು, ಅದೆಲ್ಲಾ ಬೇರೆ ವಿಚಾರಗಳು. ಆದರೆ ಪ್ರಮುಖವಾಗಿ ಕಟ್ಟಡಗಳಿಗಿಂತ ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಬೇಕಾಗಿರುವಂಥಾದ್ದು ಇಂತಹ ವಿಚಾರದಲ್ಲಿ 4 ವರ್ಷಗಳಿಂದ ಇರುವ ಆಂಬ್ಯುಲೆನ್ಸ್‌ಗಳು ರಿಪೇರಿಯಾಗದೇ ಉಳಿದಿವೆ ಅಂದರೆ ಇಂತಹ ದುರ್ದೈವ ನಮಗೆ

ಬೇರೆ ಇಲ್ಲ ಎಂದು ಅನಿಸುತ್ತದೆ. ಇನ್ನೊಂದು ನಾವು ನಮ್ಮ ಕರ್ನಾಟಕ ಹೆಲ್ತ್ ಸಿಸ್ಟಂನಲ್ಲಿ ಹೇಳಿದ್ದೇವೆ. ಎಲ್ಲಾ ತಾಲ್ಲೂಕು ಘಟಕಗಳಿಗೆ, ದಂತವೈದ್ಯರುಗಳನ್ನು ನೇಮಕ ಮಾಡುತ್ತಿದ್ದೇವೆಂದು ಎಲ್ಲಾ ಅಂತಹ ಆಸ್ಪತ್ರೆಗಳಿಗೆ, ಅಂತಹ ವೈದ್ಯರುಗಳನ್ನು ನೇಮಕ ಮಾಡುವಂತಹ ವಿಚಾರ ಇದೆ ಎಂದು. ಆದರೆ ತಮ್ಮ ಇಲಾಖೆಯಿಂದ ಕೊಟ್ಟಂತಹ ಉತ್ತರದಲ್ಲಿಯೇ ತಾಲ್ಲೂಕು ಮಟ್ಟದಲ್ಲಿ ನಾವು ಇಂತಹ ವೈದ್ಯರುಗಳನ್ನು ನೇಮಕ ಮಾಡುವಂತಹ ವಿಚಾರ ಇದೆ ಆದರೆ ಇವತ್ತು ಇದರಲ್ಲಿ 4 ವರ್ಷಗಳ ನಂತರದಲ್ಲಿಯೂ ಕೂಡ ಸುಮಾರು 115 ಸಹಾಯಕ ದಂತ ಶಸ್ತ್ರ ಚಿಕಿತ್ಸಕರ ಹುದ್ದೆಗಳನ್ನು ಆಯ್ಕೆ ಮಾಡಲಿಕ್ಕೆ ಸಮಿತಿಯನ್ನು ರಚಿಸಲಾಗುತ್ತಿದೆ ಹೇಳಿದ್ದೀರಿ. ಅಂದರೆ ಇನ್ನೂ ಸಮಿತಿಯನ್ನು ರಚನೆ ಮಾಡಿ, ಆ ನಂತರದಲ್ಲಿ ವೈದ್ಯರುಗಳನ್ನು ನೇಮಕ ಮಾಡುವಂತಹ ವ್ಯವಸ್ಥೆ ಇರುವಾಗ ತಾವು ಹೇಗೆ ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯವನ್ನು ಕೊಡುತ್ತೇವೆಂದು ಹೇಳುತ್ತೀರಿ? ಇಂತಹ ಒಂದು ಪ್ರಮುಖವಾದ ವಿಚಾರವನ್ನು ತಾವು ಹೇಳುವಾಗ ತಮ್ಮ ಜಾಹೀರಾತಿನಲ್ಲಿ ತಾವು ಹೇಳಿದಿರಿ. ಸ್ಥಳೀಯ ತರಬೇತಿಗಳನ್ನು ನಾವು ನೀಡಿದ್ದೇವೆ. ತಾವು ಒಂದು ದೊಡ್ಡ ಪಟ್ಟಿಯನ್ನು ಕೊಟ್ಟು ಎಷ್ಟೆಷ್ಟು ಜನರಿಗೆ ಯಾವ ಯಾವ ಕಡೆಯಲ್ಲಿ ಈ ಯೋಜನೆ ಅಡಿಯಲ್ಲಿ ಹಣವನ್ನು ಖರ್ಚು ಮಾಡಿದ್ದೀರಿ, ಎನ್ನುವುದನ್ನು ಹೇಳಿದ್ದೀರಿ. ಆದರೆ ನಾನು ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ತಾವು ಯಾರಿಗೆ ತರಬೇತಿಯನ್ನು ಕೊಟ್ಟು ಕಳುಹಿಸಿದ್ದೀರಿ, ಅಂತಹವರ ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ತಾವು ಮೈಸೂರಿನಲ್ಲಿ ಒಂದು ದೊಡ್ಡ ಕಟ್ಟಡವನ್ನು ಕಟ್ಟಿದಿರಿ. ಅದು ಆರಂಭವಾಯಿತು. ಅಲ್ಲಿ ಬರ್ನಿಂಗ್ ವಾರ್ಡ್ ಎಂದು ಹೇಳಿ ಒಂದು ದೊಡ್ಡ ವಾರ್ಡನ್ನು ಮಾಡಿದಿರಿ. ಇವತ್ತಿನವರೆಗೂ ಕೂಡ ಆ ಬರ್ನಿಂಗ್ ವಾರ್ಡ್ ಪ್ರಾರಂಭವಾಗಿ ಕೆಲಸ ಮಾಡುತ್ತಿಲ್ಲ. ಮೈಸೂರಿನಂತಹ ಒಂದು ದೊಡ್ಡ ನಗರದಲ್ಲಿ ವೈದ್ಯರನ್ನು ತಾವು ವಿದೇಶಕ್ಕೆ ಕಳುಹಿಸಿ ಅವರಿಗೆ ತರಬೇತಿಯನ್ನು ಕೊಡಿಸಿ ಕರೆದುಕೊಂಡು ಬಂದಿದ್ದೀರಿ. ಅಂತಹ ಒಬ್ಬ ವೈದ್ಯ ಪ್ಲಾಸ್ಟಿಕ್ ಸರ್ಜರಿ ಮಾಡಿರುವಂತಹ ಒಬ್ಬ ವೈದ್ಯರನ್ನು ಬೆಂಗಳೂರಿನಿಂದ ಮೈಸೂರಿಗೆ ನಿಯೋಜನೆ ಮಾಡಿದಿರಿ, ಅವರು ನಿಮ್ಮ ಆಜ್ಞೆಯ ವಿರುದ್ಧವಾಗಿ ಒಂದು ವರ್ಷದಿಂದ ಇವತ್ತಿನವರೆಗೂ ಎಲ್ಲಿಯೂ ರಿಪೋರ್ಟ್ ಮಾಡಿಕೊಂಡಿಲ್ಲ. ಇದು ಕೇವಲ ಒಂದು ಉದಾಹರಣೆ ಮಾತ್ರ, ಅಂದರೆ ವೈದ್ಯರ ಮೇಲೂ ಸಹ ಸರ್ಕಾರದ ಕಂಟ್ರೋಲ್ ಇಲ್ಲವೇ, ಮೈಸೂರಿನಲ್ಲಿರುವ ಆಸ್ಪತ್ರೆಯಲ್ಲಿ ಬರ್ನಿಂಗ್ ವಾರ್ಡ್ ಕೇವಲ ಒಂದು ಕಟ್ಟಡವಾಗಿಯೇ ಉಳಿದಿದೆಯೇ ಹೊರತು ಆ ವಾರ್ಡ್ ಇವತ್ತಿನವರೆಗೂ ಕೆಲಸ ಮಾಡುತ್ತಿಲ್ಲ. ಹೀಗೆ ಹತ್ತಾರು ಸಣ್ಣಪುಟ್ಟ ವಿಚಾರಗಳು ಇದ್ದರೂ ಕೂಡ ಜನಸಾಮಾನ್ಯನಿಗೆ ಸಿಗಬೇಕಾದಂತಹ ನಿಜವಾದಂತಹ ವ್ಯವಸ್ಥೆ ಏನಾಗುತ್ತಿದೆ ಅದು ನಮ್ಮಲ್ಲಿ ಸಿಗುತ್ತಿಲ್ಲ. ಕಳೆದ ಮೂರು ವರ್ಷಗಳಿಂದ ಮಾನ್ಯ ಮಂತ್ರಿಗಳು ಹೋದ ಕಡೆಗಳಲ್ಲಿ ಎಲ್ಲಾ ಈ ವಿಚಾರವನ್ನು ಹೇಳುತ್ತಿದ್ದೀರಿ. ಸರ್ಕಾರಿ ವೈದ್ಯರುಗಳು ಖಾಸಗಿ ಆಸ್ಪತ್ರೆಗಳಲ್ಲಿ ಏನು ಪ್ರಾಕ್ಟೀಸ್ ಮಾಡುತ್ತಿದ್ದಾರೆ ಅದರ ವಿರುದ್ಧವಾದ ಕಾನೂನು

ತರುತ್ತೇವೆ ಎಂದು. ಎಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರಿ ವೈದ್ಯರುಗಳು ಕೆಲಸ ಮಾಡುತ್ತಿರುತ್ತಾರೋ ಅವರ ಮೇಲೂ ಕ್ರಮ ತೆಗೆದುಕೊಳ್ಳುತ್ತೇವೆ, ಯಾವ ಖಾಸಗಿ ನರ್ಸಿಂಗ್ ಹೋಮ್‌ಗಳು ಇವೆ ಅವರ ಮೇಲೂ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ತಾವು ಹೇಳಿರುವುದು ಹತ್ತಾರು ಸಲ ಪತ್ರಿಕೆಗಳಲ್ಲಿ ಬಂತು. ಆದರೆ ಇವತ್ತಿನವರೆಗೂ ತಾವು ಏಕೆ ಆ ಕಾನೂನು ತಂದಿಲ್ಲ ಏಕೆ ತಂದಿಲ್ಲವೆಂದರೆ ತಾವು ಇವತ್ತು ಕರ್ನಾಟಕ ಹೆಲ್ತ್ ಸಿಸ್ಟಂನಲ್ಲಿ ಯಾವ ಖಾಸಗಿ ನರ್ಸಿಂಗ್‌ಹೋಮ್‌ಗಳ ಕಂಟ್ರೋಲ್ ಇದೆ ಅದರಿಂದ ಹೊರ ಬರುವುದಕ್ಕೆ ಸರ್ಕಾರಕ್ಕೆ ಆಗಲಿಲ್ಲವೇ? ಅಥವಾ ಸರ್ಕಾರಿ ವೈದ್ಯರುಗಳ ನಿಯಂತ್ರಣ ಏನು ಇದೆ ಅದು ಇಲಾಖೆ ಮೇಲೆ ಎಲ್ಲರಿಗಿಂತ ಕೂಡ ಹೆಚ್ಚು ನಿಯಂತ್ರಣ ಅವರದ್ದೇ ಇದೆಯೇ? ಈ ಸರ್ಕಾರ ಕೇವಲ ಎರಡು ತಿಂಗಳುಗಳು ಇರುವಂತಹ ಸಮಯದಲ್ಲಿಯೂ ಕೂಡ 4 ವರ್ಷಗಳಿಂದ ಹೇಳಿರುವಂತಹ ಒಂದು ಆಜ್ಞೆಯನ್ನು ತರಲಿಕ್ಕೆ ಆಗದೇ ಕೇವಲ ಘೋಷಣೆಯಾಗಿಯೇ ಏಕೆ ಉಳಿದಿದೆ. ಇದಕ್ಕೆ ಇರುವ ಹಿನ್ನೆಲೆ ಏನು ಎನ್ನುವಂತಹ ವಿಚಾರವನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ಇವತ್ತು ಇಡೀ ದೇಶದಲ್ಲಿ ಒಂದು ಸಮಸ್ಯೆಯಾಗಿರುವಂತಾದ್ದು, ತ್ಯಾಜ್ಯ ವಸ್ತುಗಳ ವಿಲೇವಾರಿ ನಿಯಮ. ನಾನು ಒಂದು ಉದಾಹರಣೆಯನ್ನು ಕೊಟ್ಟೆ. ಮೈಸೂರಿನ ಟಿ.ಬಿ. ಆಸ್ಪತ್ರೆಯಲ್ಲಿ ಯಾವ ಕಾಫ್ ಕಪ್‌ಗಳು ಬರುತ್ತಿದ್ದವು ಪ್ರತಿ ದಿವಸ ಒಬ್ಬ ರೋಗಿಗೆ ಒಂದೊಂದು ಕಾಫ್ ಕಪ್‌ಗಳನ್ನು ಕೊಡುತ್ತಾರೆ. ಅದರ ಬೆಲೆ ಸುಮಾರು 50-60 ಪೈಸೆ. ಆ ಆಸ್ಪತ್ರೆಯಲ್ಲಿರುವಂತಹ ಎಲ್ಲಾ ರೋಗಿಗಳಿಗೂ ದಿನಕ್ಕೆ ಒಂದರಂತೆ ಆ ಕಾಫ್ ಕಪ್‌ಗಳನ್ನು ಕೊಟ್ಟಾಗ ಆ ಕಾಫ್‌ಕಪ್‌ಗಳು ಉಪಯೋಗ ಮಾಡಿದ ನಂತರ ಆ ಕಾಫ್ ಕಪ್‌ಗಳನ್ನು ತೆಗೆದುಕೊಂಡು ಬಂದು ಬಿಸಾಡುತ್ತಾರೆ. ಆ ತ್ಯಾಜ್ಯ ವಸ್ತುಗಳ ವಿಲೇವಾರಿಯಾಗದೆ ಅದನ್ನು ತೆಗೆದುಕೊಂಡು ಹೋಗಿ ಯಾವುದೋ ಒಂದು ಡಸ್ಟ್‌ಬಿನ್‌ನಲ್ಲಿ ಹಾಕುತ್ತಾರೆ. ಅದೇ ಕಾಫ್‌ಕಪ್‌ಗಳನ್ನು ಅಲ್ಲಿರುವಂತಹ ಹುಡುಗರು ಪ್ರತಿನಿತ್ಯ ತೆಗೆದು ತೊಳೆದು ಐಸ್‌ಕ್ರೀಮ್ ಅಂಗಡಿಗಳಿಗೆ ತಂದು ಕೊಡುವಂತಹ ಪ್ರಕರಣವನ್ನು ನಾನು ತಮ್ಮ ಮುಂದೆ ಇಟ್ಟೆ. ನಾನು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದಾಗ ಇಡೀಸದನ ಆಶ್ಚರ್ಯವನ್ನು ವ್ಯಕ್ತಪಡಿಸಿತು. ಯಾವ ಟಿ.ಬಿ.ಪೇಷಂಟ್ಸ್‌ಗೆ ಕೊಡುವಂತಹ ಕಾಫ್ ಕಪ್ ಇದೆ ಅದು ಮತ್ತೆ ಐಸ್‌ಕ್ರೀಮ್ ಅಂಗಡಿಗಳಿಗೆ ಬರುವಂತಾದ್ದು ತಪ್ಪು ಎಂದು ಆಯಿತು. ಆದರೆ ತಾವು ಜಿಲ್ಲಾ ಮಂತ್ರಿಗಳು ಇದ್ದೀರಿ. ಇವತ್ತಿಗೂ ಕೂಡ ಆ ಆಸ್ಪತ್ರೆಯ ಹೊರಗಡೆ 3-4 ಜನ ಹುಡುಗರು ಅದೇ ಕೆಲಸವನ್ನು ಪ್ರತಿನಿತ್ಯ ಜೀವನಕ್ಕೋಸ್ಕರ ಮಾಡುತ್ತಿದ್ದಾರೆ. ಅಂದರೆ ತಾವು ಯಾವ ರೀತಿಯಲ್ಲಿ ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯವನ್ನು ಕೊಡುತ್ತೀರಿ ಎಂದು ಹೇಳುತ್ತೀರಿ. ತಾವು ಇದುವರೆಗೂ ಈ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಏಕೆ ಒಂದು ನಿಯಮವನ್ನು ಮಾಡಿಲ್ಲ? ಯಾವ ಪ್ಲಾಸ್ಟಿಕ್ ಕಂಪನಿಗಳು ತಮ್ಮ ಮೇಲೆ ಒತ್ತಡವನ್ನು ತಂದಿವೆ? ಇಂತಹ ಕಪ್‌ಗಳನ್ನು ಉಪಯೋಗಿಸಬಾರದು ಎಂದಾಗ ಅಂತಹ ಕಂಪನಿಗಳಿಗೆ ದೊಡ್ಡ

ಏಟು ಬೀಳುವಂತಾದ್ದು ಇರುತ್ತದೆ. ಇದುವರೆಗೂ ತಾವು ಏಕೆ ಅದನ್ನು ತರುವಂತಹ ವ್ಯವಸ್ಥೆ ಮಾಡಿಲ್ಲ. ತಾವು ಕರ್ನಾಟಕ ಹೆಲ್ತ್ ಸಿಸ್ಟಂನಲ್ಲಿ ರಕ್ತನಿಧಿಯ ಬಗ್ಗೆ ಒಂದು ವಿಚಾರವನ್ನು ಹೇಳಿದ್ದೀರಿ. ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಜಿಲ್ಲಾಕೇಂದ್ರಗಳಲ್ಲಿ ಇರುವಂಥ ಆಸ್ಪತ್ರೆಗಳಲ್ಲಿ ರಕ್ತ ನಿಧಿಯನ್ನು ಮಾಡುವಂಥ ವ್ಯವಸ್ಥೆಯು ತಮ್ಮ ಇಲಾಖೆಯಲ್ಲಿ ನಡೆಯುತ್ತಿದೆಯೇ? ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ಒಂದು ಸರ್‌ಪ್ರೈಸ್‌ವಿಸಿಟ್‌ಗೆ ನಾನು ಹೋದಂಥ ಸಂದರ್ಭದಲ್ಲಿ ಸುಮಾರು ಆರುತಿಂಗಳುಗಳಿಂದ ಇಟ್ಟುಕೊಂಡಿದ್ದ ಸುಮಾರು 47 ಬಾಟಲ್‌ಗಳಷ್ಟು ಬ್ಲಡ್‌ನ್ನು ಅದರಲ್ಲಿಯೂ ದಾನಿಗಳು ಕೊಟ್ಟಂಥ ರಕ್ತವನ್ನು ಉಪಯೋಗಿಸದೆಯೇ ಹಾಗೆಯೇ ಬಿಸಾಕಿದುದನ್ನು ನಾವು ಗಮನಿಸಿದ್ದೇವೆ ಮತ್ತು ಅದು ಪತ್ರಿಕೆಗಳಲ್ಲಿಯೂ ಬಂದಿದೆ. ಇನ್ನೊಂದು ಉದಾಹರಣೆ ಮಾತ್ರ. ಖಾಸಗಿಯಾಗಿ ರಕ್ತ ಶೇಖರಣೆ ಮಾಡಬಾರದು ಎಂದು ನಾವು ನಿಲ್ಲಿಸಿದ್ದೇವೆ. ಅದೇ ರೀತಿಯಲ್ಲಿ ನಮ್ಮ ಸರಕಾರದಲ್ಲಿಯೂ ಈ ಬಗ್ಗೆ ಸೂಕ್ತ ವ್ಯವಸ್ಥೆಯು ಇಲ್ಲ. ಹೀಗಾಗಿ ಜನಸಾಮಾನ್ಯ ಪಡುತ್ತಿರುವಂಥ ಒಂದು ಕಷ್ಟವನ್ನು ಅರಿತು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥಾದ್ದು ಮತ್ತು ಕರ್ನಾಟಕ ಹೆಲ್ತ್ ಸಿಸ್ಟಂಗಾಗಿ 580 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥಾದ್ದರಲ್ಲಿ ಒಂದು ಸಣ್ಣ ಭಾಗವನ್ನಾದರೂ ರಕ್ತನಿಧಿ ವ್ಯವಸ್ಥೆಗಾಗಿ ಇಡುವ ವ್ಯವಸ್ಥೆಯನ್ನು ಮಾಡಬೇಕು. ಇನ್ನು ವೈದ್ಯಕೀಯ ಶಿಕ್ಷಣದ ಬಗ್ಗೆ ಹೇಳುವುದಾದರೆ ಈ ಸರಕಾರ ಬಂದ ಮೇಲೆ ವೈದ್ಯಕೀಯ ಶಿಕ್ಷಣದ ಲ್ಲಿಯೂ ಕೂಡ ಇಷ್ಟೊಂದು ಫಲವತ್ತಾದಂಥ ವ್ಯವಸ್ಥೆ ಇದೆಯೇ? ಎಂಬುದು ಈಗ ಗೊತ್ತಾಗಿದೆ. ಹಿಂದಿನ ಮಂತ್ರಿಗಳಾಗಿದ್ದಂಥ ಡಾ: ಮಲಕರೆಡ್ಡಿಯವರು ಕೂಡ ಅಲ್ಲಿ ಕೆಲಸ ಮಾಡಿದಂಥವರು. ಅಲ್ಲಿ ಯಾವ ಯೋಜನೆಗಳು ಇದ್ದುವು, ಯಾವ ರೀತಿಯಲ್ಲಿ ನಡೆಯುತ್ತಿದ್ದವು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಈ ಸರಕಾರವು ಬಂದನಂತರವೇ ಪುಷ್ಕಳವಾದ ಒಂದು ವೈದ್ಯಕೀಯ ಶಿಕ್ಷಣ ಇಲಾಖೆಯು ಇದೆ ಎಂದು ಗೊತ್ತಾಯಿತು. ಕಾನೂನಿನ ಚೌಕಟ್ಟನ್ನು ಮೀರಿ ಕೂಡ ಹೇಗೆ ಕಾರ್ಯನಿರ್ವಹಿಸಿದ್ದೇವೆ ಎಂಬುದನ್ನು ಕೂಡ ಇದೇ ಇಲಾಖೆಯು ತೋರಿಸಿಕೊಟ್ಟಿದೆ ಎಂಬುದನ್ನು ನಾನು ಹೇಳಲು ಇಚ್ಛೆಪಡುತ್ತೇನೆ. ನಮಗೆ ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಎರಡು ಇಲಾಖೆಗಳು ಇರುವುದರಿಂದ ಸಮಸ್ಯೆಯು ಬರುತ್ತದೆ. ವಿಶೇಷತಃ ನಗರಪ್ರದೇಶಗಳಲ್ಲಿ ನಮಗೆ ಈ ಸಮಸ್ಯೆ ಬರುತ್ತಿದೆ. ಯಾವುದು ಟೀಚಿಂಗ್ ಹಾಸ್ಪಿಟಲ್ ಎಂದು ಬರುತ್ತದೋ ಅದು ವೈದ್ಯಕೀಯ ಶಿಕ್ಷಣ ಸಚಿವರಿಗೆ ಬರುತ್ತದೆ. ಅಲ್ಲಿಗೆ ಆರೋಗ್ಯ ಸಚಿವರ ಖಾತೆಯಿಂದ ಯಾವುದೇ ಹಣವನ್ನು ಕೊಡಲು ಬರುವುದಿಲ್ಲ. ಕರ್ನಾಟಕ ಹೆಲ್ತ್ ಸಿಸ್ಟಂನ ಅಡಿಯಲ್ಲಿ ನಮಗೆ ಯಾವ ಹಣವು ಬಂದಿದೆ, ಅದನ್ನು ಯಾವುದೇ ಕಾರಣಕ್ಕೂ ಕೂಡ ಟೀಚಿಂಗ್ ಹಾಸ್ಪಿಟಲ್‌ಗಳಿಗೆ ಕೊಡಲು ಸಾಧ್ಯವಿಲ್ಲ. ಈ ಸಮಸ್ಯೆಗಳನ್ನು ನಾವು ಎದುರಿಸುತ್ತಾ ಇದ್ದೇವೆ. ಉದಾಹರಣೆಗೆ ಮೈಸೂರಿನ ಕೆ.ಆರ್.ಎಸ್, ಬೆಂಗಳೂರಿನ ವಿಕ್ಟೋರಿಯ, ಬಳ್ಳಾರಿಯ ಆಸ್ಪತ್ರೆ, ಹುಬ್ಬಳ್ಳಿಯ ಕಿಮ್ಸ್, ಹೀಗೆ ಇಂಥ ಟೀಚಿಂಗ್ ಹಾಸ್ಪಿಟಲ್‌ಗಳಲ್ಲಿ

ಇಂಥ ನ್ಯೂನ್ಯತೆಗಳನ್ನು ನಾವು ಕಾಣುತ್ತಿದ್ದೇವೆ. ಈ ಆಸ್ಪತ್ರೆಗಳಲ್ಲಿ ಹೊಲಸಾದ ವ್ಯವಸ್ಥೆಯನ್ನುನಾವು ಕಾಣುತ್ತಿದ್ದೇವೆ. ಇಂಥ ಹತ್ತಾರು ಸಮಸ್ಯೆಗಳನ್ನು ಟೀಚಿಂಗ್ ಆಸ್ಪತ್ರೆಗಳಲ್ಲಿ ಎದುರಿಸುತ್ತಾ ಇದ್ದೇವೆ. 1999-2000ನೇ ಇಸವಿಯಲ್ಲಿ ಕಳೆದ ಬಾರಿ ಸನ್ಮಾನ್ಯ ಅಧ್ಯಕ್ಷರು ಒಂದು ಆದೇಶವನ್ನು ಮಾಡಿದ್ದರು. ಕಳೆದ ಮೂರು ವರ್ಷಗಳಲ್ಲಿ ಎಂಡಿ, ಎಂಎಸ್‌ಸೀಟುಗಳಲ್ಲಿ ಎಷ್ಟು ಅವ್ಯವಹಾರವಾಗಿದೆ ಎಂಬ ಬಗ್ಗೆ ಒಂದು ತನಿಖೆ ನಡೆಯಿತು. ಕರ್ನಾಟಕ ಹೈಕೋರ್ಟ್‌ನಲ್ಲಿ ಭರೂಕರವರ ಮುಂದೆ ಒಂದು ಜಡ್ಜ್‌ಮೆಂಟ್ ಆಯಿತು. ಸರಕಾರದ ವಿರುದ್ಧವಾದಂಥ ಜಡ್ಜ್‌ಮೆಂಟ್ ಬಂತು. ಅದರ ವಿರುದ್ಧ ರಾಜ್ಯ ಸರಕಾರವು ಸುಪ್ರೀಂಕೋರ್ಟ್‌ಗೆ ಅಪೀಲ್ ಹೋಯಿತು. ಸುಪ್ರೀಂ ಕೋರ್ಟ್‌ನಲ್ಲಿಯೂ ಕೂಡ ಯಾವ ಅಧಿಕಾರ ಇಲ್ಲದೇ ಹೋದರೂ ಕೂಡ ಎಂಡಿ, ಎಂ ಎಸ್ ಸೀಟುಗಳಲ್ಲಿ ಅವ್ಯವಹಾರವನ್ನು ರಾಜ್ಯಸರಕಾರದವರು ಮಾಡಿದ್ದಾರೆ ಎಂಬುದು ಸಾಬೀತು ಆಗಿದೆ. ಇವೆಲ್ಲದರ ನಡುವೆಯೂ ಪ್ರಸ್ತುತ ಸಾಲಿನಲ್ಲಿಯೂ ಕೂಡ ಡಿಪ್ಲೊಮಾ ಪೋಸ್ಟ್‌ಗ್ರಾಜ್ಯುಯೇಟ್, ಮುಂತಾಗಿ ಇದಕ್ಕೆ ಸಂಬಂಧ ಪಟ್ಟ ಹಾಗೆ, ಇವರು ಎಂಟ್ರೆನ್ಸ್ ಎಕ್ಸಾಮಿನೇಶನ್‌ಗೆ ಕರೆದಿದ್ದಾರೆ. ಇವರು ಕೊಟ್ಟಿರತಕ್ಕಂಥ ಅರ್ಜಿಯಲ್ಲಿ ಮತ್ತು ಬ್ರೋಚರ್ಸ್‌ನಲ್ಲಿ ಯಾವ ಯಾವ ಕಾಲೇಜುಗಳಲ್ಲಿ ಎಷ್ಟೆಷ್ಟು ಹುದ್ದೆಗಳಿವೆ, ಎಷ್ಟೆಷ್ಟು ಸೀಟ್‌ಗಳಿವೆ, ಎಂಬಿತ್ಯಾದಿ ವಿವರಗಳನ್ನು ಯಾವುದನ್ನೂ ಅದರಲ್ಲಿ ಕೊಟ್ಟಿಲ್ಲ. ಕಳೆದ ಸಾರಿ ಬೆಂಗಳೂರಿನ ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ 18 ಹೆಚ್ಚುವರಿ ಸೀಟುಗಳನ್ನು ಕೊಟ್ಟ ವಿಚಾರದಲ್ಲಿ ಒಂದು ಪ್ರಸ್ತಾಪ ಬಂತು. ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ತನಿಖಾ ಆಯೋಗವನ್ನು ಸರಕಾರವು ರಚನೆ ಮಾಡಿತು. ಆದರೆ, ಒಂದು ತಿಂಗಳೊಳಗಾಗಿ ವರದಿಯನ್ನು ಕೊಡುತ್ತೇವೆಂದು ಹೇಳಿದ್ದರೂ ಇದುವರೆಗೂ ಯಾವುದೇ ವರದಿಯನ್ನು ಸರಕಾರದವರು ಕೊಟ್ಟಿಲ್ಲ. ಹಾಗಾದರೆ ವರದಿಯನ್ನು ಇನ್ನೂ ಏಕೆ ಕೊಟ್ಟಿಲ್ಲ? ಅದಕ್ಕೆ ಕಾರಣ ಏನು? ಅದರ ಹಿಂದೆ ಇರುವ ವ್ಯಕ್ತಿಗಳು ಯಾರ‍್ಯಾರು? ಹಿಂದೆ ಇರುವ ಶಕ್ತಿಗಳು ಯಾವುವು? ಒಂದು ತಿಂಗಳೊಳಗಾಗಿ ವರದಿಯನ್ನು ಸಲ್ಲಿಸುತ್ತೇವೆಂದು ಸದನಲ್ಲಿ ಹೇಳಿದ ಮೇಲೆ ಸಲ್ಲಿಸದೇ ಇರುವುದರಿಂದ ಸದನದ ಗೌರವಕ್ಕೆ ಧಕ್ಕೆ ಬಂದಂತೆ ಆಗಿಲ್ಲವೆ? ಇದು ಸದನದ ಗೌರವದ ಪ್ರಶ್ನೆ ಅಲ್ಲವೆ? ಇದನ್ನು ಸಲ್ಲಿಸುವಲ್ಲಿ ಯಾರ‍್ಯಾರು ತಡೆ ಒಡ್ಡಿದರು ಎಂಬ ವಿಚಾರವನ್ನು ಮಾನ್ಯ ಸಚಿವರು ಹೇಳಬೇಕು. ಇವೊತ್ತು ಎಂಬಿಬಿಎಸ್ ಮತ್ತು ಎಂ ಡಿ ಮತ್ತು ಎಂಎಸ್ ಶಿಕ್ಷಣದ ಬಗ್ಗೆ ಜನಸಾಮಾನ್ಯರಿಗೆ ಅರಿವು ಉಂಟಾಗಿದೆ. ವೈದ್ಯಕೀಯ ಶಿಕ್ಷಣದ ಬಗ್ಗೆ ವಿಶೇಷತಃ ಉತ್ತರ ಕರ್ನಾಟಕದವರಿಗೆ ಅನ್ಯಾಯವಾಗಿದೆ ಎಂದು ಯಾರು ಹೇಳುತ್ತಿದ್ದಾರೋ ಅವರ ಗಮನಕ್ಕೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್‌ಗಳಿಗೆ ಸಂಬಂಧಪಟ್ಟ ಹಾಗ ಒಂದೇ ಒಂದು ಕಾನೂನನ್ನು ಕೂಡ ಮಾಡಿಲ್ಲ. ಬಿಎಸ್‌ಸಿಫಾರ್ಮಸಿ, ಬಿಎಸ್‌ಸಿ ನರ್ಸಿಂಗ್ ಬಿಎಸ್‌ಸಿ, ಡಿಪಿಟಿ, ಬಿಎಸ್‌ಸಿ ರೇಡಿಯಾಲಜಿ, ಬಿಎಎಂಎಸ್, ಹೋಮಿಯೋಪಥಿ, ಬಿಎಸ್ ಲ್ಯಾಬ್‌ಟೆಕ್ನಿಶಿಯನ್, ಮುಂತಾದ ಕೋರ್ಸ್‌ಗಳಿಗೆ ಪ್ರತಿವರ್ಷವೂ ಸುಮಾರು

ಒಂದು ಲಕ್ಷದಷ್ಟು ಸೀಟುಗಳನ್ನು ನೀವು ತೆಗೆದುಕೊಳ್ಳುತ್ತಾ ಇದ್ದೀರಿ. ಇದು ಸುಮಾರು 200ರಷ್ಟು ಖಾಸಗಿ ಕಾಲೇಜುಗಳ ಮೂಲಕ ಭರ್ತಿಯಾಗುತ್ತಿದೆ. ಇದಕ್ಕೆ ಯಾವ ಪ್ರವೇಶ ನಿಯಮಗಳನ್ನು ನಿಗದಿಪಡಿಸಿದ್ದೀರಿ? ಇದಕ್ಕೆ ಸಿಇಟಿ ಪರೀಕ್ಷೆಯನ್ನು ಮಾಡಿದ್ದೀರಾ? ಸುಪ್ರೀಂ ಕೋರ್ಟ್‌ನ ಒಂದು ಆದೇಶದ ಪ್ರಕಾರ 80 ಪರ್‌ಸೆಂಟ್‌ನ್ನು ರಾಜ್ಯ ಸರಕಾರಕ್ಕೆ ಕೊಟ್ಟು 20 ಪರ್‌ಸೆಂಟ್‌ನಷ್ಟನ್ನು ಮೇನೇಜ್‌ಮೆಂಟ್‌ನವರಿಗೆ ಕೊಡಬೇಕೆಂದು ಇದೆ. ಇದು ಕೇವಲ ವೈದ್ಯಕೀಯ ಶಿಕ್ಷಣಕ್ಕೆ ಮಾತ್ರವಲ್ಲ ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೂ ಕೂಡ ಅನ್ವಯವಾಗುತ್ತದೆ. ಇದರಲ್ಲಿಯೂ ರಾಜ್ಯಸರಕಾರವು ಎಂಟ್ರೆನ್ಸ್ ಎಕ್ಸಾಮಿನೇಶನ್ ಮೂಲಕ ಭರ್ತಿ ಮಾಡಬೇಕೆಂದು ಹೇಳಿದೆ. ತಾವುಗಳು ನಾಲ್ಕು ವರ್ಷಗಳಿಂದ ಉತ್ತರ ಕರ್ನಾಟಕದ ವಿದ್ಯಾರ್ಥಿಗಳಿಗೆ ಸಿಇಟಿ ಮೂಲಕ ಅಡ್ಮಿಶನ್ಸ್ ಕೊಡುತ್ತಿದ್ದೀರಿ. ಆದರೆ ಪ್ಯಾರಾಮೆಡಿಕಲ್ ಶಿಕ್ಷಣದಲ್ಲಿ ಮೇನೇಜ್‌ಮೆಂಟ್‌ನವರು ನೂರಕ್ಕೆ ನೂರರಷ್ಟು ತಮಗೆ ಇಷ್ಟ ಬಂದ ಹಾಗೆ ಕೇರಳ, ತಮಿಳುನಾಡು, ರಾಜಸ್ಥಾನ, ಮುಂತಾದ ಕಡೆಗಳಿಂದ ಬಂದಂಥವರಿಗೆ ಅಡ್ಮಿಷನ್ ಕೊಡಲು ರಾಜ್ಯ ಸರಕಾರದವರು ಹೇಗೆ ಪರವಾನಿಗೆಯನ್ನು ಕೊಟ್ಟಿದ್ದೀರಿ? ರಾಜ್ಯದ ನಮ್ಮ ಮಕ್ಕಳಿಗೆ ಪ್ಯಾರಾಮೆಡಿಕಲ್ ಶಿಕ್ಷಣ ಸಂಸ್ಥೆಗಳಲ್ಲಿ ನ್ಯಾಯಯುತವಾಗಿ ಮೆರಿಟ್ ಆಧಾರದ ಮೇಲೆ ಶಿಕ್ಷಣ ಪಡೆದುಕೊಳ್ಳುವ ಹಕ್ಕನ್ನು ಸರಕಾರದವರು ರಕ್ಷಣೆ ಮಾಡಿದ್ದಾರೆಯೇ? ಇಂಥ 200 ಕಾಲೇಜುಗಳಲ್ಲಿ ಯಾವುದೇ ನಿಯಮಗಳನ್ನು ಪಾಲಿಸದೆ ಅನ್ಯರಾಜ್ಯದವರಿಗೆ ಅನುಕೂಲಮಾಡಿ ಕೊಟ್ಟು ನಮ್ಮವರಿಗೆ ಅನ್ಯಾಯ ಮಾಡಿಕೊಡುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದಲೂ ಈ ವಿಚಾರದಲ್ಲಿ ಒಂದು ನಿಗದಿತ ಕಾನೂನನ್ನು ಮಾಡುವ ವ್ಯವಸ್ಥೆಯನ್ನು ಯಾಕೆ ಮಾಡಿಲ್ಲ? ಈ ಕುರಿತು ಸ್ಪಷ್ಟನೆ ನೀಡಬೇಕೆಂದು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇವೊತ್ತು ಕೂಡ ಇನ್‌ಟೇಕ್ ತೆಗೆದುಕೊಳ್ಳುವಾಗ ಎಂಡಿ ಆಯುರ್ವೇದ ಇರಬಹುದು, ಎಂಎಸ್‌ಸ್ ನರ್ಸಿಂಗ್ ಇರಬಹುದು, ಯಾವುದೇ ಪಿಜಿ ಕೋರ್ಸ್‌ಗಳು ಇರಬಹುದು. ಇದಕ್ಕೆ ಸಂಬಂಧಪಟ್ಟ ಹಾಗೆ ಆಲ್ ಇಂಡಿಯಾ ಎಂಟ್ರೆನ್ಸ್, ಸ್ಟೇಟ್ ಎಂಟ್ರೆನ್ಸ್, ಮುಂತಾಗಿ ವ್ಯವಸ್ಥೆ ಇರುವಾಗ ನಮ್ಮಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಿಗೆ ಮೇನೇಜ್‌ಮೆಂಟ್‌ನವರೇ ನೂರಕ್ಕೆ ನೂರರಷ್ಟು ಸೀಟುಗಳನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ಯಾಕೆ ಇಟ್ಟಿದ್ದೀರಿ? ಹೀಗಾದರೆ ಮೆರಿಟ್‌ನಲ್ಲಿ ಬಂದಂಥ ವಿದ್ಯಾರ್ಥಿಗಳ ಪರಿಸ್ಥಿತಿಯು ಏನಾಗಬೇಕು? ಇವೊತ್ತು ಒಬ್ಬ ಬಿಎಸ್‌ಸಿ, ಎಂಎಸ್‌ಸಿ, ನರ್ಸಿಂಗ್‌ಗೆ ಹೋಗುವಂಥವರು ಎಂಎಸ್‌ಸಿ ಲ್ಯಾಬ್ ಟೆಕ್ನಿಶಿಯನ್ ಕೋರ್ಸ್‌ಗೆ ಹೋಗುವಂಥವರು ಒಂದರಿಂದ ಎರಡು ಲಕ್ಷ ರೂಪಾಯಿಗಳವರೆಗೆ ಡೊನೇಶನ್ ಕೊಡುತ್ತಾರೆ.

5.0 ಪಿ.ಎಂ

ಹೀಗೆ ಒಂದು ಲಕ್ಷ ವಿದ್ಯಾರ್ಥಿಗಳಿಗೆ ತಾವು ಅವಕಾಶವನ್ನು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರಿಗೆ ಮಾಡಿಕೊಟ್ಟಿರುವುದರ ಹಿಂದಿನ ವ್ಯವಸ್ಥೆಯೇನು ಎಂದು

ನಾನು ತಿಳಿದುಕೊಳ್ಳಬಯಸುತ್ತೇನೆ. ಇವತ್ತು ವಿಶೇಷವಾಗಿ ರಾಜೀವಗಾಂಧಿ ವಿಶ್ವ ವಿದ್ಯಾಲಯ. ಒಬ್ಬ ಪ್ಯೂನ್ ನೇಮಕ ಮಾಡಬೇಕಾದರೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ನೇಮಿಸುತ್ತೀರಿ. ಅಥವಾ ನೋಟಿಫೈ ಮಾಡಿ ಮಾಡುತ್ತೀರಿ. ಆದರೆ ಇಡೀ ರಾಜ್ಯವನ್ನು ಕಂಟ್ರೋಲ್ ಮಾಡುವ ರಾಜೀವಗಾಂಧಿ ಹೆಲ್ತ್ ಯೂನಿವರ್ಸಿಟಿಯಲ್ಲಿ ಒಬ್ಬ ಪ್ರೊಫೆಸರನ್ನು ನೇಮಕ ಮಾಡುವುದಕ್ಕೆ ಒಬ್ಬ ಲೆಕ್ಚರರ್ ಅಥವಾ ಕಾರಕೂನನನ್ನು ನೇಮಕ ಮಾಡಲಿಕ್ಕೆ ನಿಮ್ಮಲ್ಲಿ ಯಾವುದೇ ಕಾನೂನಿಲ್ಲವೆ? ಅಲ್ಲಿ ಎಷ್ಟು ಹುದ್ದೆಗಳನ್ನು ಇವತ್ತು ನೇಮಕ ಮಾಡಿದ್ದೀರಿ? ಯಾವ ನೋಟಿಫಿಕೇಶನ್ ಮೂಲಕ ಮಾಡಿದ್ದೀರಿ? ಇವತ್ತಿನವರೆಗೆ ಒಂದೇ ಒಂದು ಜಾಹಿರಾತು ಕೊಡದೆ ತಮಗಿಚ್ಛೆಬಂದ ರೀತಿ ಸರ್ಕಾರದಲ್ಲಿ ಯಾರ್‍ಯಾರಿದ್ದಾರೋ ಅವರ ಶಿಫಾರಸಿನ ಮೇಲೆ ನೇಮಕ ಮಾಡಿದ್ದೀರಿ. ಯಾವ ಕಾನೂನಡಿ ಮಾಡಿದ್ದೀರಿ? ಇಲ್ಲಿ ಪ್ರತಿ ಸಲ ಮಾತನಾಡುವಾಗ ಪರಿಶಿಷ್ಟ ಜಾತಿ ವರ್ಗಕ್ಕೆ ಸಂಬಂಧಿಸಿ ದೊಡ್ಡದೊಡ್ಡ ಮಾತುಗಳನ್ನು ಹೇಳುತ್ತಿದ್ದೇವೆ ಎಷ್ಟು ಜನರಿಗೆ ರೋಸ್ಟರ್ ಸಿಸ್ಟಮ್ ಪಾಲಿಸಿದ್ದೀರಿ? ಮನಸ್ಸಿಗೆ ಇಚ್ಛೆ ಬಂದ ರೀತಿ ತೆಗೆದುಕೊಂಡಿದ್ದೀರಿ. ಯಾಕೆ? ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನ ಶೆಲ್ಟರ್ ತೆಗೆದುಕೊಂಡಿದ್ದೀರಿ. ಯಾರು 240 ದಿವಸಗಳ ಕಾಲ ನಿರಂತರ ಕೆಲಸ ಮಾಡುತ್ತಾರೋ ಅವರನ್ನು ತೆಗೆಯುವಂತಿಲ್ಲವೆಂದು ಒಂದೇ ನೆವ ಇಟ್ಟುಕೊಂಡು ಬೇರೆ ಬೇರೆ ನೇಮಕ ಮಾಡಿದ್ದೀರಿ. ದಯಮಾಡಿ ಸದನದ ಮುಂದಿಡಬೇಕು. ಯಾರ್‍ಯಾರ ನೇಮಕ ಮಾಡುವಾಗ ಯಾರ್‍ಯಾರ ಶಿಫಾರಸ್ ಪತ್ರಗಳಿವೆ. ಮೆರಿಟ್ ಇಲ್ಲದೇ ಹೋದರೂ ಯಾವರೀತಿ ಸಂದರ್ಶನ ಮಾಡಿದಿರಿ? ಈ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿ ನಡೆದಿರುವ ನೇಮಕಾತಿ ದುರ್ವ್ಯವಹಾರಗಳಿಗೆ ಯಾರು ಜವಾಬ್ದಾರರು ಅನ್ನುವುದನ್ನು ಸಹ ಕೇಳಲಿಕ್ಕೆ ಇಷ್ಟಪಡುತ್ತೇನೆ. ಹಾಗೇ ಕೊನೆಯ ಮಾತು. ಡೆಂಟಲ್‌ಕಾಲೇಜುಗಳದು. ಡೆಂಟಲ್‌ಕಾಲೇಜಿನ ಬಗ್ಗೆ ಹೇಳಬೇಕಾದರೆ ತುಂಬಾ ನೋವಾಗುತ್ತದೆ. ಮಾನ್ಯ ಸುರೇಶ್‌ಕುಮಾರ್ ಅವರು ಮೂರು ವರ್ಷಗಳ ಕಾಲದಿಂದ ಡೆಂಟಲ್ ಕಾಲೇಜೊಂದರ ಬಗ್ಗೆ ಹೋರಾಟ ಮಾಡಿದರು. ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು ಹೋಗಿ ಅವರು ಪ್ರಾಣ ಕೊಡುವ ವ್ಯವಸ್ಥೆ ಸಹ ಸರ್ಕಾರದ ಮಧ್ಯೆ ಆಗಿತ್ತು. ಕೇವಲ ಒಂದೇಒಂದು ಕಾಲೇಜಿನ ಬಗ್ಗೆ ನಾನು ಹೇಳುತ್ತಿದ್ದೇನೆ. ಕಳೆದ ನಾಲ್ಕು ದಿನಗಳಿಂದ ರಾಜೀವಗಾಂಧಿ ಡೆಂಟಲ್ ಕಾಲೇಜಿನಲ್ಲಿ ಸ್ಟ್ರೈಕ್ ನಡೆಯುತ್ತಿದೆ. ಮೂರು ದಿವಸಗಳ ಹಿಂದೆ ಕರ್ನಾಟಕ ಹೈಕೋರ್ಟಿನಲ್ಲಿ ಒಂದು ದಾವೆ ಹಾಕಿದ್ದಾರೆ. ಅಲ್ಲಿ ಒಬ್ಬ ವಿದ್ಯಾರ್ಥಿನಿ ಸತ್ತಳು. ಏತಕ್ಕೋಸ್ಕರ? ರಾಜ್ಯಸರ್ಕಾರದ ನಿಯಂತ್ರಣವಿಲ್ಲದೆ ಡೆಂಟಲ್ ಕಾಲೇಜು ಯಾವ ಫೀಸು ಫಿಕ್ಸ್ ಮಾಡಲಾಗಿತ್ತು ಅದರ ಎರಡರಷ್ಟು ಫೀಸನ್ನು ಕೇಳಿದ ನಿದರ್ಶನ ಬಂದಿತಲ್ಲ ಅಂಥವರ ಮೇಲೆ ಕ್ರಮ ಇವತ್ತು ತೆಗೆದುಕೊಂಡಿದ್ದೀರಿ. ಇಷ್ಟು ಮಾತ್ರವಲ್ಲ, ಕೇವಲ ಒಂದು ಉದಾಹರಣೆ ಕೊಟ್ಟರೆ, ವಿಶೇಷವಾಗಿ ಡೆಂಟಲ್ ಕಾಲೇಜುಗಳ ಬಗ್ಗೆ ಯಾತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ ಜಗಜೀವನರಾಂ ಡೆಂಟಲ್ ಕಾಲೇಜು ನಡೆಯುತ್ತಿದೆ. ವಿದ್ಯಾರ್ಥಿಗಳು ಸಿಇಟಿಯಲ್ಲಿ ಪರೀಕ್ಷೆ

ಬರೆಯುತ್ತಾರೆ. ವಿದ್ಯಾರ್ಥಿಗಳಿಗೆ ಯಾವ ಕಾಲೇಜು ಹೇಗಿದೆ ಎಂದು ಯಾರಿಗೂ ಗೊತ್ತಿರುವುದಿಲ್ಲ. ಫೆಸಿಲಿಟಿ ಇಲ್ಲದ, ಮ್ಯಾನೇಜ್‌ಮೆಂಟಿನಲ್ಲಿ ಸಮಸ್ಯೆ ಇರುವಂಥ ಕಾಲೇಜುಗಳಿಗೆ ನೀವು ಮೆರಿಟ್ ಸ್ಟೂಡೆಂಟ್ಸನ್ನು ಕಳಿಸಿ ಕೊಡುತ್ತೀರಿ. ಆ ವಿದ್ಯಾರ್ಥಿಗಳು ಆ ಕಾಲೇಜಿಗೆ ಹೋದ ನಂತರ ಅಲ್ಲಿ ಅನುಭವಿಸುತ್ತಿರುವ ನೋವಿನ ಬಗ್ಗೆ ಕಿಂಚಿತ್ ಸಚಿವರಿಗೆ ಯೋಚನೆ ಇಲ್ಲವಾ? ಸಚಿವರು ಯಾವ್ಯಾವ ಡೆಂಟಲ್ ಕಾಲೇಜುಗಳಿಗೆ ಒಂದು ಸಲ ಭೇಟಿ ಕೊಟ್ಟಿದ್ದಾರೆ ಎಂದು ಹೇಳಲಿ, ಅಲ್ಲಿನ ನ್ಯೂನತೆಗಳನ್ನು ಯಾರು ಕೇಳಿದ್ದಾರೆ ಎಂದು ಹೇಳಲಿ. ಜಗಜೀವನರಾಂ ಡೆಂಟಲ್ ಕಾಲೇಜಿನಲ್ಲಿ ಇವತ್ತು ಪಾಠ ಹೇಳುವ ಲೆಕ್ಚರರ್ಸ್ ಇಲ್ಲ, ಯಾವ ಕ್ಲಿನಿಕಲ್ ಫೆಸಿಲಿಟೀಸಿಲ್ಲ, ಏನೂ ಇಲ್ಲದೇನೆ ಅಲ್ಲಿಗೆ ವಿದ್ಯಾರ್ಥಿಗಳನ್ನು ಕೊಟ್ಟು ಅವರಿಗೆ ನಲವತ್ತು ಸಾವಿರ ಎಕ್ಸೆಸ್ ಫೀಸು ಕೇಳುತ್ತಿದ್ದಾರೆ. ಇಲ್ಲದೇ ಹೋದರೆ ಅಡ್ಮಿಶನ್‌ಟಿಕೆಟ್ ಕೊಡುವುದಿಲ್ಲ. ಇಂಥ ವ್ಯವಸ್ಥೆಗಳ ಮೇಲೆ ನಿಯಂತ್ರಣ ರಾಜ್ಯ ಸರ್ಕಾರಕ್ಕೆ ಇಲ್ಲದೆ ಹೋದಮೇಲೆ ಇಂಥ ಡೆಂಟಲ್ ಕಾಲೇಜುಗಳಿಗೆ ಯಾಕೆ ಪರವಾನಗಿ ಕೊಡುತ್ತೀರಿ? ಹೀಗೆ ಇಡೀ ರಾಜ್ಯದಲ್ಲಿ ಡೆಂಟಲ್ ಕಾಲೇಜುಗಳ ವಿದ್ಯಾರ್ಥಿಗಳು ನೋವಿನಲ್ಲಿ ಬಳಲುತ್ತಿದ್ದಾರೆ. ಇನ್ನೊಂದು ಆಶ್ಚರ್ಯ, ಅಧ್ಯಕ್ಷರೇ, ಜಗಜೀವನರಾಂ ಕಾಲೇಜಿದೆಯೆಯಲ್ಲ ಅಲ್ಲಿಗೆ ಸಿಇಟಿಯವರು ಮೆರಿಟ್ ವಿದ್ಯಾರ್ಥಿಗಳನ್ನು ಕಳಿಸಿದ್ದಾರೆ, ಆದರೆ ಕಾಲೇಜ್ ಮಾನ್ಯತೆ ಹೊಂದಿಲ್ಲ ಇಂಥವು ಸುಮಾರು 8 ಕಾಲೇಜುಗಳಿವೆ ರಾಜ್ಯದೊಳಗೆ. ಮಾನ್ಯತೆ ಇರದ ಕಾಲೇಜುಗಳಿಗೆ ಸಿಇಟಿಯಿಂದ ವಿದ್ಯಾರ್ಥಿಗಳನ್ನು ಕಳಿಸಿದ್ದೀರಿ, ಅವರು ಮೂರು ವರ್ಷಗಳ ಕಾಲ ಪ್ರಾಕ್ಟೀಸ್ ಮಾಡಿದ್ದಾರೆ. ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾದವರು ಒಂದು ಪತ್ರ ಬರೆದು, ಆ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ದೇಶದ ಯಾವುದೇ ಭಾಗದಲ್ಲಿ ಪ್ರಾಕ್ಟೀಸ್ ಮಾಡಲು ಅವಕಾಶ ಕೊಡುವುದಿಲ್ಲ ಎಂದು. ಇದಕ್ಕೆ ಯಾರು ಜವಾಬ್ದಾರರು? ಯಾವ ಸಚಿವರು ಜವಾಬ್ದಾರರು? ಯಾವ ಸರ್ಕಾರ ಜವಾಬ್ದಾರಿ? ನೂರಾರು ವಿದ್ಯಾರ್ಥಿಗಳು ಇವತ್ತು ರಸ್ತೆಯಲ್ಲಿ ನಿಲ್ಲುವಂಥ ಪರಿಸ್ಥಿತಿ ನಿರ್ಮಾಣ ಮಾಡಿರುವಂತಹ ವ್ಯವಸ್ಥೆ ಯಾಕೆ ಸರ್ಕಾರದಲ್ಲಿ ಆಗಿದೆ ಎಂದು ಕೇಳುತ್ತಾ ಇವತ್ತು ಕರ್ನಾಟಕದಲ್ಲಿ ಪ್ರಮುಖವಾಗಿ 2000 ಇಸವಿ ಒಳಗೆ ಎಲ್ಲರಿಗೂ ಆರೋಗ್ಯ ಎಂದು ಹೇಳಿ, ಡಾಕ್ಟರ್‌ಗಳನ್ನು ಇಡೀ ದೇಶದಲ್ಲೇ ಹೆಚ್ಚಾಗಿ ಪ್ರೊಡ್ಯೂಸ್ ಮಾಡಿದೆವು ಎಂಬ ಹೆಗ್ಗಳಿಕೆಯನ್ನು ದಯಮಾಡಿ ತೆಗೆದುಕೊಳ್ಳಬೇಡಿ. ಹೆಚ್ಚು ಡಾಕ್ಟರ್‌ಗಳಿಗಿಂತ ಒಳ್ಳೆಯ ಡಾಕ್ಟರ್‌ಗಳನ್ನು ಕೊಟ್ಟಂತಹ ರಾಜ್ಯ ನಮ್ಮದಾಗಬೇಕು. ನಮ್ಮ ಶಿಕ್ಷಣ ಪದ್ಧತಿ ಅಂಥ ರೀತಿಯಲ್ಲಿ ಬರಬೇಕು. ಇಂತಹ ವ್ಯವಸ್ಥೆಗಳು ಮೆಡಿಕಲ್ ಎಜುಕೇಶನ್‌ನಲ್ಲಿ ಆಗಬೇಕಾಗಿದೆ. ಪ್ಯಾರ ಮೆಡಿಕಲ್ ಬಗ್ಗೆ ಮತ್ತೊಮ್ಮೆ ನಾನು ಯಾಕೆ ಹೇಳುತ್ತಿದ್ದೇನೆಂದರೆ 200 ಕಾಲೇಜುಗಳಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳಿಗೆ ಆಗಿರುವಂತಹ, ಅದರಲ್ಲೂ ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ನೂರಕ್ಕೆ ನೂರು ಸೀಟುಗಳನ್ನು ಅವರೇ ಕೊಟ್ಟುಕೊಂಡು ತೆಗೆದುಕೊಳ್ಳುತ್ತಿರುವ ಹಣದ ದಾಂಧಲೆ ಏನು ನಡೆಯುತ್ತಿದೆ ಅದಕ್ಕೆ ಯಾರು ಶಾಮಿಲಾಗಿದ್ದಾರೆ ಎಂದು ಕೇಳುತ್ತಾ ಯಾವ

ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಅಂಥವರಿಗೆ ಸರ್ಕಾರದಿಂದ ಪರಿಹಾರವೇನು ಎಂದು ಕೇಳುತ್ತಾ ವೈದ್ಯಶಿಕ್ಷಣ ಮತ್ತು ಆರೋಗ್ಯ ಇಲಾಖೆಯಲ್ಲಿ ನಾಲ್ಕು ವರ್ಷಗಳಿಂದ ಕೊಟ್ಟಂತಹ ಹಣವನ್ನು ಉಪಯೋಗಿಸಿಕೊಳ್ಳದೇನೆ ಇರುವಂತಹ ವ್ಯವಸ್ಥೆಯನ್ನು ಸರಿ ಮಾಡಲಿಕ್ಕಾಗದೇನೆ ಇರುವಂತಹ ಈ ಬೇಡಿಕೆಯನ್ನು ನಾನು ವಿರೋಧಿಸಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ವಿಚಾರದಲ್ಲಿ ನಮ್ಮ ಮಲಕರೆಡ್ಡಿಯವರು ತುಂಬಾ ವಿಸ್ತಾರವಾಗಿ ತುಂಬಾ ಅರ್ಥಗರ್ಭಿತವಾಗಿ ಮಾತನಾಡಿದ್ದಾರೆ. ಅವರು ಕೆಲವು ಪ್ರಮುಖವಾದ ಪ್ರಶ್ನೆ ನಿಮಗೆ ಹಾಕಿದ್ದಾರೆ. ಹಿಂದಿನ ವರ್ಷವೂ ನಾನು ಮಾತನಾಡಿದ್ದೆ. ಇವರೆಡೂ ಚರ್ಚೆಯನ್ನು ನಾವು ವಿಶ್ಲೇಷಣೆ ಮಾಡಿ ನೋಡಿದರೆ ನಿಮಗೆ ಬರಬೇಕಾದ ವಿಲ್ ಇನ್ನೂ ಬಂದಿಲ್ಲವೇನೋ ಎಂಬ ಸಂಶಯ ಬರುತ್ತದೆ. ಮಾಡುತ್ತೇನೆ ಎನ್ನುವ ಕೆಚ್ಚು ಬಂದಿಲ್ಲ ಯಾಕೆಂದರೆ ಅವರು ಹೇಳುವಾಗ ಹೇಳಿದರು, ಎಲ್ಲ ಇಲಾಖೆಗಿಂತ ನಿಮ್ಮ ಇಲಾಖೆಗೆ ವಿಶೇಷವಾದ ರಿಯಾಯ್ತಿ ಇದೆ. ನೇಮಕಮಾಡುವಾಗ ಎಕಾನಮಿ ಏನೂ ಇಲ್ಲ. ಶ್ರೀ ಮೊಯ್ಲಿಯವರ ಕಾಲದಿಂದ ಅದನ್ನು ರಿಲ್ಯಾಕ್ಸ್ ಮಾಡಿಕೊಂಡು ಬಂದಿದ್ದೇವೆ. ಆವಾಗಲೂ ಸ್ವಲ್ಪ ನೇಮಕ ಮಾಡುವುದಿತ್ತು, ಇನ್ನೂ ಉಳಿದಿದೆ. ಮೊನ್ನೆ ನೀವು ಕೊಟ್ಟಿರುವ ವರದಿ ನೋಡಿದರೆ ಸುಮಾರು 12 ಸಾವಿರ ನೇಮಕಗಳಿವೆ, 'ಡಿ' ಗ್ರೂಪಿನಿಂದ ಹಿಡಿದು ಮೇಲಿನವರೆಗೆ. ಇದರ ಬಗ್ಗೆ ಸ್ವಲ್ಪ ಬಹಳ ವಿಳಂಬ ಮಾಡಿದರೆ ಆಗುವುದಿಲ್ಲ. ನಾಲ್ಕು ತಿಂಗಳು ಕಳೆದುಹೋದರೆ ನೀವು ಬರುತ್ತೀರೋ ಇಲ್ಲವೋ ಗೊತ್ತಿಲ್ಲ. ಮಾಡುವ ಕೆಲಸವನ್ನು ನಾಳೆ ಮಾಡುವುದನ್ನು ಇವತ್ತೇ ಮಾಡಿ ಹೋಗಿಬಿಡಬೇಕು. ಅದಕ್ಕೆ ನಾನು ಆಸ್ಪತ್ರೆ ಮತ್ತು ನಮ್ಮ ಜನರಿಗೆ ಆಸ್ಪತ್ರೆಗಳಿಂದ ಕೊಡುವ ಸೇವೆ ಬಗ್ಗೆ ಮಠಮಾನ್ಯ ಕಟ್ಟಿ ಸೇವೆ ಮಾಡುವುದಕ್ಕಿಂತ ಇದು ದೊಡ್ಡ ಸೇವೆ ಮಾಡಿದಂತಾಗುತ್ತದೆ. ಮಠಮಾನ್ಯಗಳನ್ನು ಕಟ್ಟಿ ಸೇವೆ ಮಾಡುವುದಕ್ಕಿಂತ ಈ ಆರೋಗ್ಯ ಇಲಾಖೆಯಿಂದ ಸೇವೆ ಮಾಡುವುದು ಇದೆಯಲ್ಲ, ಇದು ನಿಜವಾದ ಸೇವೆ. ನೀವು ಮಾಡಿಬಿಟ್ಟು ಹೋದ ಕೆಲಸವನ್ನು ಜನರು ಸ್ಮರಣೆ ಮಾಡಿಕೊಳ್ಳುತ್ತಾರೆ. ಆ ರೀತಿ ಮಾಡಬೇಕು. ಈಗ ವಿಶ್ವಬ್ಯಾಂಕ್‌ನ ನೆರವಿನಿಂದ ಭಾರಿ ದೊಡ್ಡ ಪ್ರಮಾಣದಲ್ಲಿ ಇವತ್ತೇನೊ ಕೆಲಸವನ್ನು ಪ್ರಾರಂಭ ಮಾಡಿದ್ದೀರಿ. ಕೆಲಸವೂ ನಡೆಯುತ್ತಿದೆ. ದುಡ್ಡು ಈಗ ಸಿಕ್ಕಿದೆ. ನಮ್ಮ ಅಧಿಕಾರಿಗಳೇನು ಕೊಳ್ಳುವುದಕ್ಕೆ ಹಿಂದುಮುಂದು ನೋಡುವುದಿಲ್ಲ. ಯಾವ ಆಸ್ಪತ್ರೆಯಲ್ಲೂ ಇಡುವುದಕ್ಕೆ ಜಾಗವಿಲ್ಲ, ಅಷ್ಟು ಸಾಮಾನನ್ನು ಇವತ್ತು ಕೊಳ್ಳುತ್ತಿದ್ದಾರೆ. ಕೊಳ್ಳಲಿ ಒಟ್ಟು ಅವು ಉಪಯೋಗಕ್ಕಾದರೂ ಬರಬೇಕಲ್ಲ. ಆ ಕೆಲಸ ಮಾಡಿ. ಜೊತೆಗೆ ನಾನು ಏಕೆ ಹೇಳುತ್ತೇನೆ ಎಂದರೆ ಈಗ ನಮ್ಮಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಆರೋಗ್ಯ ಘಟಕಗಳು, ಮತ್ತು ಉಪ ಕೇಂದ್ರಗಳು ಇವತ್ತು ನಮ್ಮಲ್ಲಿವೆ. ಅವೆಲ್ಲಾ ಹಳ್ಳಿಗಾಡಿನಲ್ಲೇ ಇರತಕ್ಕಂಥದ್ದು

ಅಥವಾ ಸಣ್ಣಪುಟ್ಟ ಪಟ್ಟಣದಲ್ಲಿರುತ್ತವೆ. ಇವುಗಳ ರಿಪೇರಿ ಏನಾಗಿದೆ ಎಂದು ನೋಡಿದರೆ ಇದನ್ನು ಜಿಲ್ಲಾಪಂಚಾಯಿತಿಯವರು ನೋಡಬೇಕು. ಜಿಲ್ಲಾ ಪಂಚಾಯಿತಿಯವರು ಆ ಕೆಲಸವನ್ನು ಮಾಡಬೇಕಲ್ಲ. ಇವತ್ತು 1400-1600 ಕೇಂದ್ರಗಳಿವೆ, ಇವತ್ತು ಅದೇ ರೀತಿ ಉಪಕೇಂದ್ರಗಳೂ ಇವೆ, ಇವುಗಳ ದುರಸ್ತಿ ಏನಾಗಿವೆ, ಸುಣ್ಣಬಣ್ಣವನ್ನು ಬಳಿದಿದ್ದಾರೋ, ಹೆಂಚು ಕಿತ್ತುಹೋಗಿದ್ದರೆ ಅದನ್ನು ಹಾಕಿದ್ದಾರೋ, ಕದ ಕಿಟಕಿಗಳೇನಾದರೂ ಕಿತ್ತುಹೋಗಿದ್ದರೆ ಅದನ್ನು ಹಾಕುವುದಕ್ಕೆ ದುಡ್ಡು ಇದೆಯೇ ಎಂದು ನೋಡಿಕೊಂಡಿದ್ದೀರಾ? ಎಂದಾದರೂ ಜಿಲ್ಲಾಚೀಫ್ ಎಕ್ಸಿಕ್ಯೂಟೀವ್ ಆಫೀಸರ್‌ಗಳನ್ನೆಲ್ಲಾ ಕರೆಸಿಕೊಂಡು ಇವುಗಳ ಸ್ಥಿತಿಗತಿಗಳೇನು ಇವೆ, ಡಿ.ಹೆಚ್.ಓ. ಕರೆಸಿ ಏನು ಇದೆ ಎಂದು ನೋಡಿದ್ದೀರಾ? ನಾನು ಇದನ್ನು ಏಕೆ ಹೇಳುತ್ತೇನೆಂದರೆ ನಮ್ಮೂರಿನಲ್ಲಿ ಒಂದು ಆಸ್ಪತ್ರೆ ಇದೆ. ವೈದ್ಯಾಧಿಕಾರಿಗಳ ಕ್ವಾರ್ಟರ್ಸ್ ಬೀಳುತ್ತಿದೆ. ನರ್ಸ್‌ಗಳ ಕ್ವಾಟರ್ಸ್ ಅದೇ ಸ್ಥಿತಿ ಇದೆ. ಹೋದವರ್ಷ ರಿಪೇರಿ ಮಾಡೋಣ ಎಂದು ಎಸ್ಟಿಮೇಟ್ ಎಲ್ಲಾ ಮುಂಚಿತವಾಗಿ ಮಾಡಿಬಿಡೋಣ, ಡಾಕ್ಟರ್ ಏನೊ ಬಂದಿದ್ದಾರೆ, ಅವರು ವಾಸಕ್ಕೆ ಬೇಕೆಂದು ಮಾಡಿದರೆ 60 ಸಾವಿರ ಕೆಲಸ ಮಾಡಿದರೆ 20 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಇನ್ನು ನರ್ಸ್ ಕ್ವಾರ್ಟರ್ಸ್‌ಗೆ ದುಡ್ಡೇ ಇಲ್ಲ. ಹಾಗಾಗಿ ಎಲ್ಲಾ ನೋಡಿದರೆ ಇದರ ಕಡೆ ನೀವೇನು ಲಕ್ಷ್ಯಹರಿಸಿದಿರಿ? ಹೊಸ ಆಸ್ಪತ್ರೆ ಕಟ್ಟುವುದು, ಜೀಪ್ ಕೊಳ್ಳುವುದು, ಎಕ್ಸ್‌ರೇ ಕೊಳ್ಳುವುದು, ಯಂತ್ರ ಕೊಳ್ಳುವುದು ಅದೊಂದು ಕಡೆ ಇರಲಿ. ಇದ್ದುದನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವ ಬುದ್ಧಿವಂತಿಕೆ ನಮಗಿಲ್ಲದೇ ಹೋದರೆ ನಾವು ವ್ಯವಹಾರ ನಡೆಸುವ ಬುದ್ಧಿವಂತರೇ? ಅಥವಾ ನಮ್ಮ ಆಡಳಿತದ ಅನುಭವವೇ? ಇದಕ್ಕೆ ನೀವು ಸರಿಯಾದ ಉತ್ತರವನ್ನು ಹೇಳಬೇಕು. ಎಷ್ಟು ಹಣವನ್ನು ನೀವು ಇವತ್ತು ಆನ್ಯುಯಲ್ ರಿಪೇರಿಗೆ ಎಷ್ಟು ಹಣ ಬೇಕಾಗಿದೆ? ಎಷ್ಟು ಹಣವನ್ನು ನೀವು ಜಿಲ್ಲಾ ಪಂಚಾಯಿತಿಯಿಂದ ಇಟ್ಟಿದ್ದೀರಿ? ಎಷ್ಟು ಖರ್ಚಾಗಿದೆ, ಅದರ ಬಗ್ಗೆ ದಯವಿಟ್ಟು ಲೆಕ್ಕ ಕೊಟ್ಟರೆ ಒಳ್ಳೆಯದು. ಒಂದು ಸಂಕಟವೇನೆಂದರೆ ನೀವೆಲ್ಲಾ ಬಹಳ ಅದೃಷ್ಟವಂತರು. ಈ ಬೇಡಿಕೆ ಮೇಲೆ ಚರ್ಚೆ ಇದ್ದಿದ್ದರೆ ನಿಮ್ಮನ್ನೆಲ್ಲಾ ಚಿಂದಿ ಚಿಂದಿ ಮಾಡಿಬಿಡುತ್ತಾರೆ ಒಂದೊಂದು ಬೇಡಿಕೆ ಮೇಲೆ. ನೀವು ಬಹಳ ಸುಖವಾಗಿ ಪಾಸ್ ಮಾಡಿಕೊಂಡು ಹೋಗುತ್ತಿದ್ದೀರಿ. ಅಂಥದ್ದರಲ್ಲಿ ಇವತ್ತು ಸ್ವಲ್ಪ ಉತ್ತರ ಕೊಡಬೇಕಾದರೆ ಇವುಗಳ ಬಗ್ಗೆ ಗಮನವನ್ನು ಕೊಡಿ. ನಮ್ಮ ನಿಂಗಯ್ಯನವರು ಹೊರಗಡೆ ಹೋಗಿಬಿಟ್ಟರೊ ಏನೊ ಗೊತ್ತಾಗಲಿಲ್ಲ. ಎಂಥ ಕೆಲಸ ಇರುತ್ತೋ, ಏನು ಕತೆಯೋ ದೇವರೇ ಕಾಪಾಡಬೇಕಪ್ಪ. ಕಳೆದ ವರ್ಷದ 1998-99ನೇ ಸಾಲಿನ ಔಷಧಿಯನ್ನು ರೇಟ್ ಕಂಟ್ರಾಕ್ಟ್ ಒಪ್ಪಂದ ಮಾಡದೆ ನಮ್ಮ ಜಾಯಿಂಟ್ ಮೆಡಿಕಲ್ ಸ್ಟೋರ್‌ನಿಂದ ಶೇಕಡ 60ರಷ್ಟು ಕೊಡಬೇಕಾಗಿತ್ತಲ್ಲ, ಹೋದವರ್ಷ ನೀವುಕೊಟ್ಟೇ ಇಲ್ಲ. ಏಕೆ? ರೇಟ್ ಕಂಟ್ರಾಕ್ಟ್ ವರ್ಷ ಪೂರ್ತಿಯಾಗುವುದರೊಳಗೆ ಏಕೆ ಒಪ್ಪಂದವಾಗಿಲ್ಲ? ಆ ವರ್ಷ ಆಯವ್ಯಯದಲ್ಲಿ ನಿಗದಿಪಡಿಸಿದ ಹಣವನ್ನು ಖರ್ಚು ಮಾಡಿ ನಮ್ಮ ಔಷಧಿಗಳನ್ನು 1998-99ನೇ ಸಾಲಿಗೆ

ಏಕೆ ನಿಮಗೆ ಕೊಟ್ಟಿಲ್ಲ? ಇದಕ್ಕೆ ನಮಗೆ ಉತ್ತರ ಬೇಕು. ಯಾರು ಹೊಣೆ? ಇಲ್ಲಾ ನಿಮ್ಮ ಹತ್ತಿರ ಫೈಲ್ ಇತ್ತೋ, ಮುಖ್ಯಮಂತ್ರಿಗಳ ಹತ್ತಿರ ಫೈಲ್ ಇತ್ತೋ ಸಿದ್ದರಾಮಯ್ಯನವರ ಹತ್ತಿರ ಫೈಲ್ ಇತ್ತೋ? ಇದು ಸಣ್ಣ ಕೆಲಸವಲ್ಲ. ಏಕೆಂದರೆ ನಾವು ಔಷಧಿ ಕೊಡುವುದು ಗ್ರಾಮಾಂತರ ಪ್ರದೇಶದಲ್ಲಿರುವ ಆಸ್ಪತ್ರೆಗಳಿಗೆ. ಆ ಬಡವರು ಆ ಆಸ್ಪತ್ರೆಗೆ ಹೋಗಿ ಏನೂ ಔಷಧಿ ಇಲ್ಲದೆ ವಾಪಸ್ ಹೋಗಿದ್ದಾರಲ್ಲ, ನಿಮಗೆ ಶಾಪ ತಟ್ಟುವುದಿಲ್ಲವೇ? ಇಡೀ ವರ್ಷದ್ದು ಆ ಯೋಜನೆಗೆ ಖರ್ಚು ಮಾಡದೆ ಸುಮ್ಮನೆ ವ್ಯರ್ಥ ಮಾಡಿದ್ದೀರಲ್ಲ, ಇದಕ್ಕೆ ಯಾರು ಕಾರಣ? ನಾನು ಕೇಳಿದೆ ಮುಖ್ಯಮಂತ್ರಿಗಳ ಕಛೇರಿಯಲ್ಲಿ ಎರಡು ತಿಂಗಳಿಂದ ಹಾಗೆ ಬಿದ್ದಿತ್ತು? ಏಕೆ ಬಿದ್ದಿತ್ತು? ನೀವು ಏಕೆ ನೋಡಲಿಲ್ಲ, ಅದಕ್ಕೆ ಖಚಿತವಾದ ಉತ್ತರವನ್ನು ತಾವು ಹೇಳಬೇಕಾಗುತ್ತದೆ. ನಿಮಗೊಂದು ಪತ್ರವನ್ನು ಕೂಡ ನಾನು ಬರೆದಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೇ, ಗ್ರಾಮಾಂಥರ ಪ್ರದೇಶಗಳಲ್ಲಿ ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಆಸ್ಪತ್ರೆ ಇರುತ್ತದೆ. ಮೆಡಿಕಲ್ ಷಾಪ್ ಹತ್ತಿರ ಕುಳಿತುಕೊಂಡರೆ ನಿಮಗೆ ಕರೆಕ್ಟ್ ಆಗಿ ಗೊತ್ತಾಗುತ್ತದೆ. ಹೇಗೆಂದರೆ ಡಾಕ್ಟರ್ 20 ಮಾತ್ರೆ ಬರೆದು ಕೊಟ್ಟಿರುತ್ತಾನೆ. ಆ ದುಡ್ಡಿನಲ್ಲಿ ಕೇವಲ ಅವರು ಮೂರನೇ ಒಂದು ಭಾಗ ಮಾತ್ರ ಇದ್ದರೆ ಕೊಡು ನನ್ನ ಹತ್ತಿರ ದುಡ್ಡು ಇರುವುದು ಇಷ್ಟೇ ಎಂದು ಹೇಳುತ್ತಾರೆ. ಅವರು ಹೇಳುತ್ತಾರೆ ನೀವು 20 ಮಾತ್ರೆ ನುಂಗಿದರೆ ಮಾತ್ರ ನಿನ್ನ ಖಾಯಿಲೆ ವಾಸಿಯಾಗುತ್ತೆ ಎಂದು ಅವರು ಕೊಡುವುದು. ಮೂರನೇ ಒಂದು ಭಾಗ ನನ್ನ ಹತ್ತಿರ ದುಡ್ಡು ಇರುವುದು ಎಂದು ಹೇಳಿ 15 ರೂಪಾಯಿಗೆ ಆಗುವಷ್ಟು ಮಾತ್ರೆ ಕೊಡು ಎನ್ನುತ್ತಾರೆ. ಇದನ್ನು ಯಾವ ರೀತಿ ಫುಲ್‌ಫಿಲ್ ಮಾಡುವುದಕ್ಕೆ ಸಾಧ್ಯ? ನಾವು ಗ್ಯಾಟ್‌ಗೆ ಸಹಿ ಮಾಡಿದಮೇಲೆ ಔಷಧಿಯ ಬೆಲೆ ಸಿಕ್ಕಾಪಟ್ಟೆ 3, 4, 5, 10 ಪಟ್ಟು ಜಾಸ್ತಿಯಾಗಿದೆ. ಬಡತನ ರೇಖೆಯಲ್ಲಿರುವ ಜನ ಔಷಧಿಯನ್ನು ಕೊಂಡು ಖಾಯಿಲೆಯನ್ನು ವಾಸಿ ಮಾಡಿಕೊಳ್ಳುವ ಪರಿಸ್ಥಿತಿ ಸಾಧ್ಯವೇ? ಇದರ ಬಗ್ಗೆ ತಾವು ಏನಾದರೂ ಆಲೋಚನೆ ಮಾಡಬೇಕು. ಇಲ್ಲದಿದ್ದರೆ ಇದು ಕೇವಲ ಚೀಟಿಯಾಗುತ್ತದೆ, ಡಾಕ್ಟರ್ ನೋಡುತ್ತಾರೆ, ಅವನು ಸಾಯುತ್ತಾನೊ ಬದುಕುತ್ತಾನೊ ಇಲ್ಲ ಪುನಃ ವಾಪಸ್ ಮತ್ತೆ ಆಸ್ಪತ್ರೆಗೆ ಬರುತ್ತಾನೋ ಗೊತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಆಮೇಲೆ ಎಲ್ಲಾ ಆಸ್ಪತ್ರೆಗೆ ಆಗಿದೆಯೋ ಅಥವಾ ನಮ್ಮ ಆಸ್ಪತ್ರೆಗೆ ಆಗಿದೆಯೋ ನನಗೆ ಗೊತ್ತಿಲ್ಲ. ನಮ್ಮ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯರು ನಮ್ಮ ಸುರೇಶ್‌ಕುಮಾರ್‌ರವರೇ ಪಶುಸಂಗೋಪನಾ ಇಲಾಖೆಯಲ್ಲಿ ಕಳೆದ ವರ್ಷ ಮಾರ್ಚಿಕೊನೆಗೆ ಪ್ರೊಫಾರ್ಮ ಇನ್‌ವಾಯ್ಸ್ ಮೇಲೆ 8 ಕೋಟಿ ರೂಪಾಯಿಯನ್ನು ಔಷಧಿಕೊಳ್ಳುವ ವಿಚಾರದಲ್ಲಿ ನಮ್ಮ ಸಮಿತಿಗೆ ಬಂದಿತ್ತು. ನಾವು ಅದನ್ನು ಚರ್ಚೆ ಮಾಡಿದ್ದೇವೆ. ಪ್ರತಿಯೊಂದು ರುಜುವಾತು ಮಾಡಿಕೊಟ್ಟಿದ್ದೇವೆ. ಬಹಳ ವಿವರವಾಗಿ ಮಾಡಿದ್ದೇವೆ. ಔಷಧಿ ಬೆಲೆ ಏನು? ಎಷ್ಟುಕೊಟ್ಟರು? ಹೇಗೆ

ಕೊಟ್ಟರು? ಹೇಗೆ ತೆಗೆದುಕೊಂಡರು? ಅವರು ಅಕ್ರಮವಾಗಿ ಮಾಡಿದ್ದಾರೆ. ಮಾನ್ಯ ನಿಂಗಯ್ಯನವರು ಎಲ್ಲಿ ಹೋಗಿಬಿಟ್ಟರೋ ಗೊತ್ತಿಲ್ಲ. ನಾವು ವರದಿ ಕೊಟ್ಟಿದ್ದೇವೆ. ಹೈಪವರ್ ಕಮಿಟಿ ಏನು ತಪ್ಪು ಮಾಡಿತ್ತು, ಎಲ್ಲಾ ಕೊಟ್ಟಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಏನೂ ನಮಗೆ ಉತ್ತರ ಬಂದಿಲ್ಲ. ಈ ಸದನಕ್ಕೂ ಬಂದಿಲ್ಲ. ಇಷ್ಟೊತ್ತಿಗೆ ಇಡಬೇಕಾಗಿತ್ತು. ಏಕೆಂದರೆ ಇನ್ನು 4 ದಿವಸದಲ್ಲಿ ಈ ಸದನ ಮುಗಿದುಹೋಗುತ್ತದೆ. ಇಷ್ಟೊತ್ತಿಗೆ ಅದನ್ನು ಸರ್ಕಾರ ಅಂಗೀಕಾರ ಮಾಡಿ ಏನು ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿ ಇಲ್ಲಿ ಇಡಬೇಕಾಗಿತ್ತು. ಇಲ್ಲಿ ಇಡಲಿಲ್ಲ. ಇಡದಿದ್ದರೂ ಕೂಡ ಕಣ್ಣು ತೆರಸುವ ಒಂದು ಕೆಲಸವನ್ನು ಸಮಿತಿಯು ಮಾಡಿದೆ. ಸರ್ಕಾರ ಎಷ್ಟು ಜಾಗ್ರತವಾಗಿರಬೇಕು, ಹುಷಾರಾಗಿರಬೇಕು, ಹಿರಿಯ ಅಧಿಕಾರಿಗಳು ಎಷ್ಟು ಹುಷಾರ್ ಆಗಿರಬೇಕು? ಕಾನೂನು ನಿಯಮಗಳನ್ನು ಅವರು ಪರಿಪಾಲನೆ ಮಾಡಬೇಕು ಮತ್ತು ಮಂತ್ರಿಗಳ ಗಮನಕ್ಕೆ ಅದನ್ನು ಹೇಗೆ ತರಬೇಕು ಎನ್ನುವ ಬಗ್ಗೆ ನಾವು ವಿವರವಾಗಿ ಆ ವರದಿಯಲ್ಲಿ ವಿವರಿಸಿ ಹೇಳಿದ್ದೇವೆ. ನಮ್ಮ ಮಾನ್ಯ ನಿಂಗಯ್ಯನವರು ಅದೇನು ಓದಿದ್ದಾರೋ, ಓದಿಲ್ಲವೋ ಗೊತ್ತಿಲ್ಲ. ಔಷಧಿ ಖರೀದಿ ವಿಚಾರ. ಆದ್ದರಿಂದ, ಇದನ್ನು ಇದುವರೆಗೂ ಮಾಡಲಿಲ್ಲ. ಇದನ್ನು ಈ ಸದನದಲ್ಲಿ ಚರ್ಚೆ ಮಾಡಿ, ಸಮಿತಿಯಲ್ಲಿ ಚರ್ಚೆ ಮಾಡಿ ಒಂದು ವರದಿ ಕೊಟ್ಟ ಮೇಲೆ ನಿಮ್ಮ ಇಲಾಖೆ ಮತ್ತೆ ಅದೇ ಕೆಲಸವನ್ನು ಮಾರ್ಚಿಯಲ್ಲಿ ಮಾಡಿದ್ದೀರಲ್ಲ, ಇದು ಸರಿಯೇ? ನನಗೆ ಇದು ಗೊತ್ತಿರುವುದು. ನಾನು ಆಕಸ್ಮಾತ್ತಾಗಿ ಊರಿನಲ್ಲಿ ಇದ್ದೆ. ಆ ಸಂದರ್ಶನ ಸಮಿತಿಯ ಮೀಟಿಂಗನ್ನು ಕರೆದಿದ್ದೆವು. ಅವತ್ತು ನಮ್ಮ ಸದಸ್ಯರೊಬ್ಬರು ಅದನ್ನು ನನ್ನ ಗಮನಕ್ಕೆ ತಂದರು. ನಿಮಗೂ ತಂದಿದ್ದೇನೆ. ಎಲ್ಲವನ್ನೂ ತಂದಿದ್ದೇನೆ. ಏನೆಂದರೆ 16 ಲಕ್ಷ ರೂಪಾಯಿಗಳನ್ನು 31ನೇ ತಾರೀಖು ಸರ್ಕಾರ ಆಜ್ಞೆ ಹೊರಡಿಸಿ ಬಿಡುಗಡೆ ಮಾಡಿದೆ. 31ನೇ ತಾರೀಖಿನ ದಿವಸವೇ ನಮ್ಮ ಡೈರೆಕ್ಟರ್ ಆಫ್ ಹೆಲ್ತ್ ಇದ್ದಾರಲ್ಲ, ಅವರು ಕೂಡ ಒಂದು ಆರ್ಡರ್‌ನ್ನು ಕಳುಹಿಸುತ್ತಾರೆ. ಅದೇ ದಿವಸ ಜಂಟಿ ನಿರ್ದೇಶಕರು ಒಂದು ಸುತ್ತೋಲೆಯನ್ನು ಔಷಧಿ ಖರೀದಿ ಮಾಡುವುದಕ್ಕೆ ಕಳುಹಿಸುತ್ತಾರೆ. ಅದೇ ದಿವಸ 13 ಲಕ್ಷ ರೂಪಾಯಿ ಬೆಲೆಬಾಳುವ ಔಷಧಿಯನ್ನು ತಿಪಟೂರ್ ತಾಲ್ಲೂಕಿನಲ್ಲಿರುವ ಖರೀದಿದಾರರು ಮತ್ತು ಬೆಂಗಳೂರಿನಲ್ಲಿರುವವರು ಅವತ್ತಿನ ದಿವಸವೇ ಬಿಲ್ ಸಬ್‌ಮಿಟ್ ಮಾಡುತ್ತಾರೆ. ಅವತ್ತಿನ ದಿವಸವೇ 31ನೇ ತಾರೀಖಿನಂದೇ ಸಾಗರದಲ್ಲಿ ಔಷಧಿ ಬಂದಿದೆ ಎಂದು ಹೇಳಿ ಆ ವೈದ್ಯಾಧಿಕಾರಿಗಳು ಷರಾವನ್ನು ಬರೆಯುತ್ತಾರೆ. ಅವತ್ತಿನ ದಿವಸವೇ ಈ ಟ್ರೆಜರಿಗೆ ಎನ್‌ಕ್ಯಾಷ್ ಮಾಡುವುದಕ್ಕೆ ಬಿಲ್ ಹಾಜರಾಗುತ್ತದೆ. ಇದು ಹೇಗಿದೆ ಟ್ರಾನ್ಸ್‌ಫರೆನ್ಸಿ? ಸಾಗರದಲ್ಲಿರುವ ವೈದ್ಯರು, ಇಲ್ಲಿರುವವರು ಹೇಗೆ ಜೊತೆಯಾಗಿದ್ದಾರೆ? ನಾನು ಏಪ್ರಿಲ್ 8ನೇ ತಾರೀಖು ಮೀಟಿಂಗ್‌ಗೆ ಕುಳಿತಿದ್ದೇನೆ. ಸಾಮಾನುಗಳು ಬಂದು ಅವತ್ತು ಅದನ್ನು ಇಳಿಸುತ್ತಿದ್ದಾರೆ. ಅಂದರೆ ಇದು ನಮ್ಮ ಸಾಗರದ ಆಸ್ಪತ್ರೆಗೆ ಆಗಿದೆಯೋ ಬೇರೆ ಆಗಿದೆಯೋ? ಏನೂ ದುಡ್ಡು ಬಂತು, ಒಂದಿಷ್ಟು ಔಷಧಿ ಬಂತು ಎಂದು

ಸಮಾಧಾನವಾಗುತ್ತದೆ. ಬೇಕಾದ ಸಾಮಾನನ್ನು ತೆಗೆದುಕೊಳ್ಳಿ. ಆಸ್ಪತ್ರೆಗೆ ಏನು ಬೇಕೊ ಅದನ್ನು ತೆಗೆದುಕೊಳ್ಳುವುದಾಗಲಿ, ಕೊಳ್ಳುವಾಗ ಎಲ್ಲಿ ನಮಗೆ ಒಳ್ಳೆಯ ರೀಸನಬಲ್ ರೇಟ್ ಎಂದು ಹೇಳುತ್ತೇವಲ್ಲ, ಅದನ್ನು ತೆಗೆದುಕೊಳ್ಳುವುದಾದರೆ ನಾವು ಬಡವರಿಗೆ ಸಹಾಯ ಮಾಡಿದಂತಾಗುತ್ತದೆ. ಇಲ್ಲಿ ಯಾರು ಸಪ್ಲೈ ಮಾಡುವವನು ಇದ್ದಾನೋ ಅವನ ಕೈಯಲ್ಲಿ ಏನೇನು ಇವೆ, ಅವನ್ನೆಲ್ಲಾ ತೆಗೆದುಕೊಂಡು ಬಂದು ಅಲ್ಲಿ ಬಿಸಾಕುವುದು. ಡಂಪ್ ಮಾಡುವುದು. ಅದಕ್ಕೆ ನಾವು ಇದೇ ಬೇಕು ಎಂದು ಹೇಳಿದ್ದೇವೆ ಎಂದು ಹೇಳಿ ಅವನಿಂದ ಬರೆಸಿಕೊಳ್ಳುವುದು. ಈ ವ್ಯವಹಾರದ ಬಗ್ಗೆ ಸಮಿತಿ ಮಾಡಿದ ಕೆಲಸ ಏನಾಯಿತು? ಈ ಸದನದಲ್ಲಿ ಚರ್ಚೆಯಾಗಿದ್ದು ಏನಾಯಿತು? ಇವತ್ತು ಅದೇ ಕೆಲಸವನ್ನು ಮತ್ತೆ ಇವರು ರಿಪಿಟೆಷನ್ ಈ ಇಲಾಖೆಯಲ್ಲಿ ಮಾಡಿದ್ದಾರೆ ಎಂದರೆ ಈ ಸಮಿತಿ ಹೆದರಿಕೆ ಇವರಿಗೆ ಇದೆಯಾ? ಸದನದ ಹೆದರಿಕೆ ಇದೆಯಾ? ಶಾಸಕರ ಹೆದರಿಕೆ ಇದೆಯಾ? ಏನಪ್ಪ ಎಂದು ಮಾನ್ಯ ಮಹದೇವಪ್ಪನವರು ನನಗೆ ಉತ್ತರ ಕೊಡಬೇಕು. ಮತ್ತೆ 31ನೇ ತಾರೀಖಿನ ಆರ್ಡರ್ ಇದೆಯಲ್ಲಾ ಅದು ನಮ್ಮ ರಾಜ್ಯದ ಎಷ್ಟು ಆಸ್ಪತ್ರೆಗೆ ಹಣ ಬಿಡುಗಡೆ ಮಾಡಿದ್ದೀರಿ? ಆ ಬಿಡುಗಡೆ ಮಾಡಿದ್ದೆಲ್ಲಾ ಇದೇ ತರಹ ವ್ಯವಹಾರ ನಡೆದಿದೆಯೋ ಅಥವಾ ಸಾಗರ ಒಂದು ಆಸ್ಪತ್ರೆಗೆ ಮಾತ್ರ ನಡೆದಿದ್ದು ಉಳಿದುದೆಲ್ಲಾ ಸರಿಯಾಗಿ ನಡೆದಿದೆ ಎನ್ನುವುದನ್ನು ನನಗೆ ಕರಾರುವಾಕ್ಕಾಗಿ ಹೇಳಬೇಕು. ನಾನು ಎಲ್ಲವನ್ನೂ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಒಂದು ಉದಾಹರಣೆ ಹೇಳುತ್ತೇನೆ. ಈ ಒಂದು ಉದಾಹರಣೆಯಿಂದ ಎಲ್ಲಾ ಇದೇ ತರಹ ಇರಬಹುದು. ಅದಕ್ಕೋಸ್ಕರ ಎಲ್ಲ ವಿವರ ತರಿಸಿ. ಅವತ್ತಿನ ಆರ್ಡರ್ ಇದೆ. ಇವತ್ತು ಸಿಗುವುದಿಲ್ಲ ಎಂದು ಬಿಟ್ಟು ಬಂದಿದ್ದೇನೆ. ಇಲ್ಲ ಎಂದರೆ ಎಲ್ಲವನ್ನೂ ತರುತ್ತಿದ್ದೆ. ಆದ್ದರಿಂದ ದಯವಿಟ್ಟು ಆ ವಿಚಾರದಲ್ಲಿ ಹೇಳಿ. ಮೇಲಾಗಿ ಮೇಲು ನೋಟಕ್ಕೆ ಇದು ತಪ್ಪಾಗಿದೆ ಎಂದು ಕಂಡರೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೊನೆಯಪಕ್ಷ ಆ ಜಾಗದಿಂದ ತೆಗೆಯಬೇಕು. ವೈದ್ಯಾಧಿಕಾರಿಯೇ ತಪ್ಪು ಮಾಡಿದ್ದಾರೆ ಎಂದು ನಾನು ಹೇಳುತ್ತೇನೆ. ಅವರನ್ನು ಕೂರಿಸಿಕೊಂಡು ನಾನು ಮೀಟಿಂಗ್ ಹೇಗೆ ಮಾಡಲಿ? ಸಂದರ್ಶಕರ ಸಮಿತಿ ನಾನು ಹೇಗೆ ಮಾಡಲಿ? ಆದ್ದರಿಂದ ದಯವಿಟ್ಟು ಈ ವ್ಯವಹಾರದ ಹಿಂದೆ ಯಾರಿದ್ದಾರೆ ಮತ್ತು ಯಾರಿಂದ ಆಗಿದೆ ಎನ್ನುವುದನ್ನು ತಾವು ವಿವರವಾಗಿ ಉತ್ತರ ಕೊಡುವಾಗ ಹೇಳಬೇಕು. ಆಮೇಲೆ ನಮ್ಮ ವೈದ್ಯಾಧಿಕಾರಿ ವಿಚಾರ ಏಕೆ ಹೇಳುತ್ತೇನೆ ಅಂದರೆ ನಾವು ಇನ್ನೂ 21ನೇ ಶತಮಾನಕ್ಕೆ ಹೋಗುತ್ತಿದ್ದೇವೆ. ಆದರೆ ಏನು ತೆಗೆದುಕೊಂಡು ಹೋಗುತ್ತಿದ್ದೇವೆ ಎನ್ನುವುದು ಮುಖ್ಯ ಅಲ್ಲ. ಈ ಆಸ್ಪತ್ರೆ ಎಂದಾದ ಮೇಲೆ ಅದಕ್ಕೆ ಒಬ್ಬ ವೈದ್ಯಾಧಿಕಾರಿ ಮತ್ತು ಒಬ್ಬ ಕಾಂಪೌಂಡರ್ ಇಷ್ಟೇ ಸಾಕು. ಮತ್ತೇನೂ ಬೇಡ. ಸಾಧ್ಯವಾದರೆ ಕಸ ಗುಡಿಸುವುದಕ್ಕೆ ಒಬ್ಬ ಜವಾನ್ ಕೊಟ್ಟರೆ ಸಾಕು. ಇಷ್ಟನ್ನು ಕೊಡಿಸತಕ್ಕ ಕೆಲಸವನ್ನು ನೀವು ದಯವಿಟ್ಟು ಮಾಡಿ. ಬೇರೆ ಏನೇನೂ ಬೇಡ. ಏಕೆಂದು ಹೇಳಿದರೆ ಇದೊಂದು ಸಣ್ಣ ವಿಷಯ ದೊಡ್ಡ ವಿಷಯ ಅಲ್ಲ. ಇದರ ಬಗ್ಗೆ ಬಹಳ ಚರ್ಚೆ ಮಾಡಬೇಕಾದ್ದೂ ಇಲ್ಲ. ನಾವು ಒಂದು ಆಸ್ಪತ್ರೆ ಎಂದು

ಮಾಡಿಕೊಂಡ ಮೇಲೆ ಆ ಆಸ್ಪತ್ರೆಗೆ ಒಬ್ಬ ಡಾಕ್ಟರ್ ಅನ್ನು ಏನೇ ಕಷ್ಟ ಆದರೂ ಕೂಡ ಅಲ್ಲಿ ನೇಮಿಸಬೇಕು. ಅವರು ಇರುವಂತೆ ಮಾಡಬೇಕು. ಕೆಲಸ ಮಾಡಬೇಕು ಎಂದು ಮಾಡಬೇಕು. ಅವನಿಂದ ಜನರಿಗೆ ಸ್ವಲ್ಪಮಟ್ಟಿಗೆ ಸೇವೆ ಮಾಡಿಸಬೇಕು. ಇಷ್ಟಕ್ಕೆ ನೀವು ದಯವಿಟ್ಟು ಇನ್ನುಳಿದಿರತಕ್ಕ ಒಂದು ತಿಂಗಳಲ್ಲಿ ಬೇರೆ ಏನೂ ಕೆಲಸ ಮಾಡದಿದ್ದರೂ ಪರವಾಗಿಲ್ಲ. ಜಿಲ್ಲೆ ಜಿಲ್ಲೆಗೆ ಹೋಗಿ ಕುಳಿತುಕೊಂಡು ಏನೇನು ಕೆಲಸ ಆಗಿದೆ ಎಂದು ನೋಡಿ. ಒಂದು ಏಳೆಂಟು ದಿವಸದ ಕೆಲಸ. ಒಂದು ದಿವಸಕ್ಕೆ ಎರಡು ಜಿಲ್ಲೆ ಮಾಡಬಹುದು. ನೀವು ಮಾಡಿಕೊಂಡು ಬಂದು ಒಳ್ಳೆಯ ಕೆಲಸ ಮಾಡಿ. ಏಕೆಂದರೆ ನನಗೆ ಒಂದು ಸಾರಿ ಆ ಡಾಕ್ಟರಿಗೆ ಕಾಲಿಗೆ ಬೀಳುವುದು ಒಂದು ಬಾಕಿ ಇದೆ. ನಮ್ಮ ಆಸ್ಪತ್ರೆಗೆ ನಾಲ್ಕು ವರ್ಷ ಆಯಿತು. ಒಬ್ಬ ಸರ್ಜನ್ ಇಲ್ಲದೇ ಆ ದೊಡ್ಡ ಆಸ್ಪತ್ರೆಯ ಕಥೆ ಏನಾಗಿರಬೇಕು. ಒಂದು ಸಣ್ಣಗಾಯ ಕಟ್ ಮಾಡಬೇಕು ಎಂದರೆ ಶಿವಮೊಗ್ಗಕ್ಕೆ ಬರಬೇಕು. ಒಬ್ಬರು ನಾವೇ ಬರುತ್ತೇವೆ ಎಂದು ಹೇಳಿದಂತಹ ಗಂಡ ಹೆಂಡತಿಯನ್ನು ವರ್ಗ ಮಾಡಿಸಿದರೆ ಮತ್ತೆ ಇವರನ್ನು ಹಿಡಿದುಕೊಂಡು ಒಂದು ವರ್ಷದೊಳಗೆ ಶಿವಮೊಗ್ಗಕ್ಕೆ ವಾಪಸ್ ಬರಬೇಕಾ? ಬೇರೆ ಎಲ್ಲಾ ಕಡೆಗೂ ಇದೇ ಆಗಿದೆ. ಅದಕ್ಕೆ ನಾವು ಸಾರ್ವಜನಿಕರ ಪರವಾಗಿ ಹೇಳುತ್ತಿದ್ದೇವೆ. ಕೆಲವು ಕಡೆ ಡಾಕ್ಟರ್ ಇದ್ದಾರೆ. ಅವರು ವಾರಕ್ಕೆ ಎರಡು ಸಾರಿ ಹೋಗುತ್ತಾರೆ. ಹಾಜರಿ ಹಾಕುವುದು ವಾಪಸ್ ಬರುವುದು. ಹೋಗುವುದೇ ಇಲ್ಲ. ಸಧ್ಯಕ್ಕೆ ನೀನು ಮುಖ ತೋರಿಸುತ್ತೀಯಲ್ಲಾ ಮಾರಾಯ ಇದ್ದಾದರೂ ಇರು ಎಂದು ಅವರಿಗೆ ಕೈ ಮುಗಿಯುವ ಸ್ಥಿತಿಗೆ ಬಂದುಬಿಟ್ಟಿದೆ. ನೀನು ಔಷಧಿ ಕೊಡುತ್ತಿಯೋ ಅಥವಾ ನೀರು ಕೊಟ್ಟರೂ ಸಾಕು, ಸಧ್ಯ ಬಾಗಿಲು ತೆಗೆದರೆ ಸಾಕಪ್ಪಾ ಎಂದು ಹೇಳುವಂತಹ ಸ್ಥಿತಿ ಬಂದಿದೆ. ಈ ಸ್ಥಿತಿಗೆ ಶಾಸಕರನ್ನು ಸಾರ್ವಜನಿಕರನ್ನು ಇಳಿಸಬೇಡಿ. ಅವರಿಗೆ ನಾವು ದಾಸರಲ್ಲ. ನಾವು ದಾಸರಲ್ಲ. ಜನರು ದಾಸರಲ್ಲ. ಚುನಾಯಿತ ಪ್ರತಿನಿಧಿಗಳು ದಾಸರಲ್ಲ. ಈ ಅನಿವಾರ್ಯ ಪರಿಸ್ಥಿತಿಯ ನಿರ್ಮಾಣ ಕಾರಣದಿಂದಾಗಿ ಇವತ್ತು ಅವರಿಗೆ ಡಗ್ ಸಲಾಮ್ ಹೊಡೆಯತಕ್ಕ ಸ್ಥಿತಿ ನಮಗೆ ಬಂದಿದೆ ಎಂದರೆ ನಾವೆಲ್ಲ ತಲೆ ತಗ್ಗಿಸುವಂತಹ ಸಂದರ್ಭ ಬಂದಿದೆ. ಅದಕ್ಕೆ ನೀವು ಒಬ್ಬ ವೈದ್ಯರನ್ನು ಕೊಡಬೇಕು. ನಿಮಗೆ ಇದರ ಅರಿವು ಇದೆ. ಸಮಾಜದ ದುರ್ಬಲ ವರ್ಗದಿಂದ ಬಂದಂತಹವರು. ಸಮಾಜಕ್ಕೆ ಆರೋಗ್ಯ ಸೇವೆ ಕೊಡತಕ್ಕಂಥ ವಿಚಾರದಲ್ಲಿ ನಿಮಗೆ ಒಂದು ಅವಕಾಶ ಸಿಕ್ಕಾಗ ಎಷ್ಟು ಸಮರ್ಥನೀಯವಾಗಿ ಎಷ್ಟು ಪ್ರಾಮಾಣಿಕವಾಗಿ ಮಾಡಬೇಕು ಎನ್ನುವುದನ್ನು ನೀವು ಆತ್ಮಾವಲೋಕನ ಮಾಡತಕ್ಕಂಥ ಅವಕಾಶ ಇದೆ. ದಯವಿಟ್ಟು ನೀವು ಇದಕ್ಕೆ ಅವಕಾಶ ಕೊಡದೇ ಮುಂದಿನ ಚುನಾವಣೆಗೆ ಹೋಗುವುದು ಬೇಡ. ಜುಲೈ ತಿಂಗಳಲ್ಲಿ ದಯವಿಟ್ಟು ನೀವು ಯಾವ ಕೆಲಸ ಬಿಟ್ಟರೂ ಪರವಾಗಿಲ್ಲ. ಸಿದ್ಧರಾಮಯ್ಯನವರು ಊರಿಗೆ ಹೋಗುತ್ತಾರೆ. ಅವರು ಊರಿಗೆ ಹೋದ ಕೂಡಲೇ ನೀವೂ ಅವರ ಹಿಂದೆ ವಾಕ್ ಹೋಗಬೇಡಿ. ಅವರನ್ನು ಆರೋಗ್ಯ ಸಚಿವರು ಬಿಟ್ಟಿರುವುದಕ್ಕೆ ಆಗುವುದಿಲ್ಲ. ಅದಕ್ಕೆ ನೀವು ಊರಿಗೆ ಹೋಗುವುದಾದರೆ ಹೋಗಿ ಬನ್ನಿ, ನಾನು ಈ ಕಡೆಗೆ

ರಾಜ್ಯವನ್ನೆಲ್ಲಾ ತಿರುಗಿಕೊಂಡು ಬರುತ್ತೇನೆ ಎಂದು ಹೇಳಿ ಸ್ವಲ್ಪ ಈ ಕೆಲಸ ಮಾಡಿ. ನೀವು ಸ್ವಲ್ಪ ತಿರುಗುವುದಕ್ಕೆ ಹೊರಡಿ. ಆದ್ದರಿಂದ ದಯವಿಟ್ಟು ಪ್ರತಿ ಆಸ್ಪತ್ರೆಗೆ ವೈದ್ಯರನ್ನು ನೇಮಕ ಮಾಡುವುದು ತತ್‌ಕ್ಷಣ ಆಗಬೇಕು.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಡಾಕ್ಟರ್ ಅವರನ್ನು ಹಾಕುತ್ತಾರೆ. ನನ್ನ ತೀರ್ಥಹಳ್ಳಿಯ ಆಸ್ಪತ್ರೆಗೆ ಐದು ಜನ ಗೈನಿಕಾಲಜಿಸ್ಟ್ ಅವರನ್ನು ಹಾಕಿದರು. ಒಬ್ಬರೂ ಬರುವುದಿಲ್ಲ. ಇವರೇ ಮಾಡಿಫಿಕೇಶನ್ ಆರ್ಡರ್ ಅನ್ನು ಮಾಡಿಕೊಡುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳ ಕ್ಷೇತ್ರವಾದ ಚನ್ನಗಿರಿಯಲ್ಲಿ ಕಳೆದ ವರ್ಷ ಇವರು ಒಬ್ಬ ಲೇಡಿ ಡಾಕ್ಟರ್ ಅನ್ನು ಪೋಸ್ಟ್ ಮಾಡಿದರು. ಒಂದು ವರ್ಷ ಆಕೆ ಹೋಗಲಿಲ್ಲ. ಏನಾಗುತ್ತದೋ ನೋಡೋಣ ಎಂದು ಅವರು ಶೆಡ್ ಹೊಡೆದರು. ಅವರಿಗೆ ಮಾಡಿಫಿಕೇಶನ್ ಅನ್ನು ಶಿವಮೊಗ್ಗದ ಮೆಗಾನ್ ಆಸ್ಪತ್ರೆಗೆ. ಈ ರೀತಿ ಮಾಡಿದ್ದಾರೆ. ಇವರು ಮಾಡಿದ ಆರ್ಡರನ್ನು ಇವರೇ ಮಾಡಿಫಿಕೇಶನ್ ಮಾಡಿದರು. ಹಳ್ಳಿಗೆ ಯಾರೂ ಡಾಕ್ಟರ್ ಹೋಗಬಾರದು. ಎಲ್ಲಾ ಜಿಲ್ಲಾ ಆಸ್ಪತ್ರೆಗೆ ಬೆಂಗಳೂರಿಗೆ ಹೋಗಬೇಕು. ಇಲ್ಲೇ ಇದ್ದು ಬಿಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸಚಿವರಾದಂತಹ ನಿಂಗಯ್ಯನವರು ಇದ್ದಾರೆ. ನಾನು ಮಾನ್ಯ ಮಹದೇವಪ್ಪನವರಿಗೆ ಹೇಳಿದೆ. ನೀವು ಬೇಡಿಕೆಯನ್ನು ಬಹಳ ಸುಲಭವಾಗಿ ಪಾಸ್ ಮಾಡಿಕೊಂಡು ಹೋಗುತ್ತಿದ್ದೀರಿ ಏಕೆಂದರೆ ಸಮಯದ ಅಭಾವದಿಂದಾಗಿ ಬಹಳ ಜನ ಮಾತನಾಡುವ ಹಾಗಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ತಿಮ್ಮಪ್ಪನವರಿಗೆ ಬೈರೇಗೌಡರ ಮೇಲೆ ಏನು ಹೇಳಬೇಕು ಎಂದು ಇತ್ತು. ಅದನ್ನು ಅವರು ಮಾನ್ಯ ಮುನಿಯಪ್ಪನವರ ಕೈಯಲ್ಲಿ ಹೇಳಿಸಿಬಿಟ್ಟರು.

ಶ್ರೀ ಕಾಗೋಡು ತಿಮ್ಮಪ್ಪ: ಮುನಿಯಪ್ಪನವರಿಗೆ ಏನು ಎನ್ನುವುದು ನಿಮಗೆ ಚೆನ್ನಾಗಿ ಗೊತ್ತಿದೆ. ನನಗೆ ಕಥೆ ಹಚ್ಚುತ್ತೀರಲ್ಲ. ನಮ್ಮ ಸಾರ್ವಜನಿಕ ಲೆಕ್ಕ ಸಮಿತಿಯವರು ಈಗಾಗಲೇ ಔಷಧಿ ಕೊಳ್ಳುವ ವಿಚಾರದಲ್ಲಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ಎನ್ನುವುದು ಇನ್ನೂ ನಮಗೆ ಗೊತ್ತಾಗಿಲ್ಲ. ದಯವಿಟ್ಟು ಉತ್ತರ ಕೊಡುವಾಗ ಹೇಳಬೇಕು. ಬಹಳ ಪ್ರಬಲವಾದಂತಹ ಆಪಾದನೆ ಇದೆ, ಅದು ರುಜುವಾತು ಕೂಡ ಆಗಿದೆ. ಅದೇ ರೀತಿಯಲ್ಲಿ ಅನೇಕ ಕಡೆ ಆರ್‌ವಿಡಿ ವೈದ್ಯರೇ ಇಲ್ಲ. ಇವತ್ತು ನಮ್ಮ ವೆಟರಿನರಿ ಇನ್ಸ್‌ಪೆಕ್ಟರ್ ಇಲ್ಲ ಏನು ಮಾಡುವುದು? ಆ ಸ್ಥಿತಿ ಆಗಿದೆ. ನಮ್ಮ ಜ್ಞಾನೇಂದ್ರ ಅವರು ವಿವರವಾಗಿ ಹೇಳಿದ್ದಾರೆ. ಅದರ ಬಗ್ಗೆ ಪುನಃ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಅವರಿಗೆ ಹೇಳಿದ್ದೇ ನಿಮಗೆ ಅನ್ವಯಿಸುವುದು. ಆಸ್ಪತ್ರೆ ಅಥವಾ ಆರ್‌ವಿಡಿ ಎಂದು ನಾವು ಕಟ್ಟಿದ ಮೇಲೆ ಗ್ರಾಮಾಂತರ ಪಶು ಚಿಕಿತ್ಸಾಲಯ ಎಂದು ಕಟ್ಟಿದ ಮೇಲೆ ಅಲ್ಲೊಬ್ಬ ವೈದ್ಯರು ಇರಬೇಕು

ಎನ್ನತಕ್ಕ ಬಗ್ಗೆ ನಿಮಗೆ ಒಂದು ಕಟ್ಟು ಭದ್ರತೆ ಇರಲಿ. ಅದರ ಬಗ್ಗೆ ನೀವು ಕ್ರಮ ಕೈಗೊಳ್ಳಿ, ಸ್ವಲ್ಪ ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ಹೆಚ್ಚು ಔಷಧಿ ಕೊಡಿಸತಕ್ಕ ಕೆಲಸ ಮಾಡಿ. ಈಗ ಮಾನ್ಯ ಹಣಕಾಸಿನ ಸಚಿವರು ಇಲ್ಲೇ ಇದ್ದಾರೆ. ಅವರೊಂದು ತರಹ ಜಿಗಟು. ಸುಮಾರಾದವರಿಗೆ ಅವರು ಬಗ್ಗುವುದಿಲ್ಲ. ಆದ್ದರಿಂದ ಸ್ವಲ್ಪ ಪಾಲಿಶ್ ಮಾಡಿ. ಇದು ಹಳ್ಳಿಗಳ ಕಡೆಗೆ ಕೊಡುವಂತಹದ್ದು, ಹಾಗೆ ಮಾಡಬೇಡಿ ಎಂದು ಹೇಳಿ. ಸ್ವಲ್ಪ ಕೊಡೋಣ ಎಂದು ಹೇಳಿ.ನಾನು ಒಂದು ಸಾರಿ ಒಂದು ಮಾತು ಹೇಳಿದ್ದೆ. ನಾನು ತಮಾಷೆಗೆ ಹೇಳುತ್ತಿಲ್ಲ. ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಇವತ್ತು ಕುರಿ ಕಾಯತಕ್ಕ ಜನರಿಗೆ ಒಂದು ಪುಕ್ಕಟೆಯಾಗಿ ಚಪ್ಪಲಿ ಕೊಡಿಸಿ ಎಂದು ಹೇಳಿದೆ. ಏಕೆಂದರೆ ಅವರು ಚಪ್ಪಲಿ ಹಾಕತಕ್ಕದ್ದನ್ನು ನೋಡಿದ್ದೀರೋ ಇಲ್ಲವೋ? ಒಂದರ ಮೇಲೆ ಒಂದು, ಒಂದರ ಮೇಲು ಹೊಲಿಗೆ ಹಾಕಿ ಎಷ್ಟು ದಪ್ಪವಾಗಿದೆ. ಅವರಿಗೆ ಒಂದು ಕಂಬಳಿ, ಚಪ್ಪಲಿ ಕೊಡಿ. ಇವೆಲ್ಲಾ ಸಣ್ಣದಾಗಿ ಕಾಣುತ್ತದೆ. ಆದರೆ ಯಾವ ವರ್ಗವನ್ನು ನಾವು ಗುರ್ತಿಸಬೇಕು? ಯಾರ ಕಡೆಗೆ ನಮ್ಮ ಲಕ್ಷ್ಯ ಇರಬೇಕು? ಯಾರ ಕಡೆಗೆ ನಮ್ಮ ಕಳಕಳಿ ಇದೆ,ಕನಿಕರ ಇದೆ ಎಂದು ತಾವು ಸರ್ಕಾರವಾಗಿ ತೋರಿಸಿಕೊಡಬೇಕು. ಇಂತಹ ಕೆಲಸ ನೀನು ಮಾಡುತ್ತಿದ್ದಿ ಎಂದು ಹೇಳಬೇಕು. ನಾನು ಸಣ್ಣ ಉದಾಹರಣೆ ಹೇಳಿದ್ದು. ಆ ತರಹದಲ್ಲಿ ಕೆಲವು ಸಣ್ಣ ಯೋಜನೆಗಳನ್ನು ಹಾಕಿಕೊಳ್ಳಬೇಕು. ಇವತ್ತು ಕುರಿ ಸಾಕತಕ್ಕ ವಿಚಾರದಲ್ಲಿ ನೀವು ಆಸಕ್ತಿ ತೋರಿಸುತ್ತಿಲ್ಲ. ಬಹಳ ಲಾಭದಾಯಕವಾದಂತಹ ಕಸುಬು,ಉದ್ಯೋಗ ಅದು. ಇವತ್ತು ಕುರಿ ಉಣ್ಣೆ ಬೋರ್ಡ್ ಇದೆ. ಅದು ಇವತ್ತು ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲ. ಅದನ್ನು ಇನ್ನಷ್ಟು ಮಾಡರ್‌ನೈಸ್ ಮಾಡಬೇಕಾಗಿದೆ. ಇನ್ನಷ್ಟು ಯಂತ್ರಗಳನ್ನು ಕೊಡಬೇಕಾಗಿದೆ. ತುಂಬಾ ಚೆನ್ನಾಗಿ ನೇಯ್ಗೆ ಮಾಡಿಕೊಟ್ಟರೆ ತುಂಬಾ ಕೆಲಸಗಾರರು ಕೆಲಸ ಮಾಡುತ್ತಾರೆ. ಇವತ್ತು ಕುರಿ ನಮಗೆ ಎಷ್ಟು ರೇಟ್ ಆಗಿದೆ? ಏಕೆ ಆಗಿದೆ? ಪ್ರತಿ ಒಬ್ಬರೂ ಕುರಿ ತಿನ್ನುವುದಕ್ಕೆ ಶುರು ಮಾಡಿದ್ದಾರೆ. ತಿನ್ನುವಷ್ಟು ಉತ್ಪಾದನೆ ಆಗುವುದಿಲ್ಲ. ಇವತ್ತು ಅದನ್ನು ಬಿಡುವ ಹಾಗೆ ಇಲ್ಲ. ಆದ್ದರಿಂದ ನಮ್ಮ ಕರ್ನಾಟಕದಲ್ಲಿರತಕ್ಕ ಕುರಿಯ ವಿವಿಧ ತಳಿ ಇದೆಯಲ್ಲಾ ಅದು ಅತ್ಯಂತ ಉತ್ಕೃಷ್ಟವಾದಂತಹದ್ದು. ಅದನ್ನು ಹೆಚ್ಚಿನ ರೀತಿಯಲ್ಲಿ ಮಾಡಿ. ಚಳ್ಳಕೆರೆ ವಗೈರೆ ಕೆಲವು ಫಾರ್ಮುಗಳು ಇದ್ದಾವೆ. ಮಾನ್ಯ ಸಿದ್ಧರಾಮಯ್ಯನವರಿಗೆ ಹೇಳಿ ಸ್ವಲ್ಪ ಹಣ ಕೊಟ್ಟು ಆ ಚಳ್ಳಕೆರೆ ಫಾರ್ಮುಗೆ ನಾನು ಯಾವಾಗಲೋ ಹೋಗಿದ್ದೆ. ಅಲ್ಲಿ ಯಾವಾಗಲೋ ನಮ್ಮ ಸಮಿತಿ ಸಹ ಒಂದು ಬಂದಿತ್ತು. ಬರಗಾಲ ಪ್ರದೇಶದಲ್ಲಿ ಪಂಪುಸೆಟ್ಟಿಗೆ, ಬೋರ್‌ವೆಲ್‌ಗೆ ಕೊಟ್ಟರೆ ಒಳ್ಳೆಯದು. ನಮ್ಮ ಮಾನ್ಯ ಉಪನಾಯಕರಿಗೆ ಗೊತ್ತಿದೆ. ಅವರೇ ಹೇಳಿದರು. ಅಲ್ಲಿ ಐದಾರು ವರ್ಷ ಆದರೂ ಕೂಡ ಪಂಪುಸೆಟ್ಟನ್ನು ಹಾಕಿ ವಿದ್ಯುಚ್ಛಕ್ತಿ ತೆಗೆದುಕೊಂಡು ಅದರ ಉಪಯೋಗ ಪಡೆಯಲಿಲ್ಲ:ಅಂದರೆ ಇಲಾಖೆಯ ಅಧಿಕಾರಿಗಳು ಯಾವ ಮಟ್ಟದಲ್ಲಿ ಇದ್ದಾರೆ ಎಂದು ತಿಳಿದುಕೊಳ್ಳಿ. ಅದಕ್ಕೆ ನೀವು ಈ ಕಡೆಗೆ ಸ್ವಲ್ಪ ಲಕ್ಷ್ಯ ಕೊಡಿ.

ಶ್ರೀ ಬಿ.ಬಿ.ನಿಂಗಯ್ಯ: ಚಳ್ಳಕೆರೆಯಲ್ಲಿ ನಾನು ಸನ್ಮಾನ್ಯ ಉಪಮುಖ್ಯಮಂತ್ರಿಗಳು

ಎಲ್ಲಾ ಹೋಗಿ ಅಲ್ಲಿ ಅಗತ್ಯ ಇರತಕ್ಕ ಎಲ್ಲವನ್ನೂ ಅನುಕೂಲ ಮಾಡಿ ಅವರೇ ಅಲ್ಲಿ ಉದ್ಘಾಟನೆ ಮಾಡಿ ಬಂದಿದ್ದಾರೆ. ಒಳ್ಳೆಯ ಕೆಲಸ ಅಲ್ಲಿ ನಡೆಯುತ್ತಿದೆ.

ಸುಮಾರು ಎರಡೂವರೆ ಸಾವಿರ ಎಕರೆಯಲ್ಲಿ ಅಲ್ಲಿಗೆ ಬೇಕಾದ ಮೇವನ್ನೂ ಕೂಡ ಬೆಳೆಸುತ್ತಿದ್ದೇವೆ. ಅದೆಲ್ಲಾ ಬಹಳ ಚೆನ್ನಾಗಿ ಮಾಡಿದ್ದೇವೆ. ನಾನು ಉತ್ತರ ಕೊಡುವಾಗ ಸಂಪೂರ್ಣವಾದಂತಹ ವರದಿಯನ್ನು ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಾನು ನೋಡಿದಾಗ ನನ್ನ ಮನಸ್ಸಿಗೆ ಬಂತು. ಆದ್ದರಿಂದ ನೀವು ಸ್ವಲ್ಪ ಇತ್ತಕಡೆಗೆ ಗಮನ ಕೊಡಿ. ನೀವು ಹಾಗೆ ತರಹ ಹೇಳಿಕೊಂಡು ಹೋದರೆ ಆಗುವುದಿಲ್ಲ. ಇಂತಹ ಕ್ಷೇತ್ರದ ಕಡೆಗೆ ಸ್ವಲ್ಪ ಹೆಚ್ಚು ಹಣ ಕೊಡುವುದನ್ನು ಕಲಿತುಕೊಳ್ಳಬೇಕು.

5.30 ಪಿ.ಎಂ

ಆ ಕಸುಬಿನಲ್ಲಿರುವವರ ಸರ್ವಾಂಗೀಣ ಅಭಿವೃದ್ಧಿಯಾಗಬೇಕಾಗಿದೆಯಲ್ಲದೆ, ಅಮೃತ್ ಮಹಲ್‌ನಂಥ ಉತ್ತಮ ಜಾನುವಾರು ತಳಿಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ವಿಶೇಷ ಆಸಕ್ತಿ ವಹಿಸಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಹೇಳಿದ್ದು ಯಾವ ಕುರಿಗಳು? ಕವಿ ನಿಸಾರ್ ಅಹಮದ್‌ರವರು ಹೇಳಿರುವಂತೆ ಆ ಕುರಿಗಳೋ? ಅಥವಾ ಬೇರೆ ಕುರಿಗಳೋ?

ಶ್ರೀ ಕಾಗೋಡು ತಿಮ್ಮಪ್ಪ: ಆ ಕುರಿ ಬಗ್ಗೆ ನಾನೇಕೆ ಹೇಳಲಿ? ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹಿಂದೆ ನೀವು ಇದ್ದೀರಲ್ಲಾ. ನಮಗೆ ಬೇಕಾಗಿರುವುದು ಈ ಕುರಿಗಳು.

ಶ್ರೀ ಎಂ.ಪಿ.ಪ್ರಕಾಶ್: ಈಗ ನೀವು ಹೇಳಿದಂತಹ ಕುರಿಗಳ ಬಗ್ಗೆಯೇ ಕವಿ ನಿಸಾರ್ ಅಹಮದ್‌ರವರು ಹೇಳಿದ್ದು.

(ಸದನದಲ್ಲಿ ನಗು)

ಶ್ರೀಮತಿ ಪ್ರಮೀಳಾ ನೇಸರ್ಗಿ: ಅವರು ಹೇಳಿದ್ದು. ನಾವು ನೀವು ಕುರಿಗಳು ಸಾರ್ ಎಂದು. ಬರೀ ಒಬ್ಬರಿಗೇ ಹೇಳಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಕುರಿಗಳ ಪ್ರಸ್ತಾಪ ಮಾಡಿದ್ದರಿಂದ ಒಂದು ವಿಷಯ ಜ್ಞಾಪಕಕ್ಕೆ ಬರುತ್ತಿದೆ. ಹಿಂದೆ ಇದೇ ಸದನದಲ್ಲಿ ಒಂದು ಸಲ ಕಲಾಪ ಜರುಗುತ್ತಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದಲ್ಲಿದ್ದು, ರಾಮೇಗೌಡರು ಆಗ

ಪಶುಸಂಗೋಪನಾ ಮಂತ್ರಿಗಳಾಗಿದ್ದರು. ಇವರನ್ನು ಉದ್ದೇಶಿಸಿ ರಾಜ್ಯದಲ್ಲಿ ಯಾವ್ಯಾವ ಪಶುಗಳು, ಕುರಿಗಳು ಎಷ್ಟೆಷ್ಟು ಸಂಖ್ಯೆಯಲ್ಲಿವೆಯೆಂದು ಕೇಳಿದಾಗ ಇಷ್ಟು ಲಕ್ಷ ಸಂಖ್ಯೆಯಲ್ಲಿ ನಮ್ಮಲ್ಲಿ ಕುರಿಗಳಿವೆ ಎಂದರಂತೆ. ಆಗ ಮಂತ್ರಿಗಳನ್ನು ಉದ್ದೇಶಿಸಿ ನಿಮ್ಮ ಹಿಂದೆ ಇರುವ 152 ಕುರಿಗಳನ್ನೂ ಆ ಸಂಖ್ಯೆಯಲ್ಲಿ ಸೇರಿಸಿ ಹೇಳಿದ್ದೀರಾ? ಅಥವಾ ಇಲ್ಲವೋ? ಎಂದು ಕೇಳಿದರಂತೆ. ಹಾಗೆ ನಮ್ಮ ಹಿಂದೆ ಕುರಿಗಳು ಇಲ್ಲ,ಮುಂದೆ ಕುರಿಗಳಿವ

(ಸದನ ನಗೆಗಡಲಿದಲ್ಲಿ ತೇಲಿತು)

ಶ್ರೀ ಕಾಗೋಡು ತಿಮ್ಮಪ್ಪ: ಅನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಖಾತೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಅವರು ಕೆಲಸ ಮಾಡುತ್ತಾರೆ. ನೀವು ಕಳೆದ ವರ್ಷ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಯೋಜನೆಗೆ ಸಂಬಂಧಿಸಿದಂತೆ ಅಪೆಂಡಿಕ್ಸ್ 'ಎ'ಗೆ ಯಾವಾಗ ಒಪ್ಪಿಗೆ ಕೊಟ್ಟಿರಿ? ಇಡೀ ವರ್ಷ ಪೂರ್ಣಗೊಳ್ಳುವವರೆಗೆ ಅದಕ್ಕೆ ನೀವು ಒಪ್ಪಿಗೆ ಕೊಡದೆ 1998-99ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗೆ ಏನೊಂದು ಕಾರ್ಯಕ್ರಮ ಹಮ್ಮಿಕೊಳ್ಳದೆ ವ್ಯರ್ಥ ಮಾಡಿದ್ದೀರಲ್ಲ, ಇದು ಸರಿಯಾದ ಕೆಲಸವೇ? ಈ ಕುರಿತು ಕೆಲಸ ಮಾಡಬೇಕೆಂದು ಮೊನ್ನೆ ದಿವಸ ಒಪ್ಪಿಗೆ ಕೊಟ್ಟಿದ್ದರಿಂದ ಈ ವರ್ಷದಲ್ಲಿ ಕೆಲಸ ಪ್ರಾರಂಭಿಸಿದ್ದಾರೆ. ಕಳೆದ ವರ್ಷ ನೀವು ಏಕೆ ಕೆಲಸ ಪ್ರಾರಂಭಿಸಲಿಲ್ಲ? ಜಿಲ್ಲಾ ಪಂಚಾಯಿತಿಗೆ ಈ ವರ್ಷಕ್ಕೆ ಸಿಗತಕ್ಕಂಥ ಹಣ ಕಡಿಮೆ ಇರುತ್ತದೆ. ಆ ವರ್ಷದ ಆಯವ್ಯಯದಲ್ಲಿ ಇಟ್ಟರಥ ಹಣಕ್ಕೇ ಸರಿಯಾಗಿ ಕಾರ್ಯಕ್ರಮ ರೂಪಿಸಿ ಒಪ್ಪಿಗೆಗೋಸ್ಕರ ಜಿಲ್ಲಾ ಪಂಚಾಯಿತಿಗೆ ಕಳುಹಿಸಿಕೊಟ್ಟಿದ್ದರೆ ಮತ್ತು ವರ್ಷದ ಪ್ರಾರಂಭದಲ್ಲೇ ಅದಕ್ಕೆ ಒಪ್ಪಿಗೆ ಕೊಟ್ಟು ನೀವು ಈ ಕಾರ್ಯಕ್ರಮವನ್ನು ವರ್ಷದ ಆಖ್ಯೆರೊಳಗಾಗಿ ಪೂರ್ಣಗೊಳಿಸಬೇಕೆಂದು ಹೇಳುವ ಬದಲು ಇಡೀ ವರ್ಷವಾದರೂ ಕೂಡ ಅದಕ್ಕೆ ಸರ್ಕಾರದಿಂದ ಮಂಜೂರಾತಿ ಕೊಡಲಿಲ್ಲ, ಜಿಲ್ಲಾ ಪಂಚಾಯಿತಿಯವರು ಕೆಲಸ ಮಾಡಲಿಲ್ಲ. ಇದರಿಂದಾಗಿ ಕಳೆದ ವರ್ಷ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಯೋಜನೆ ಸಂಬಂಧವಾಗಿ ಏನೇನು ಸೌಲಭ್ಯಗಳು ಸಿಗಬೇಕಾಗಿತ್ತೋ ಅದು ಸಿಗದಿರುವಂಥ ಪರಿಸ್ಥಿತಿ ಇದೆ. ಆದುದರಿಂದ, ಇದು ನಿಮ್ಮ ಸರ್ಕಾರದ ನಿಜವಾದ ಸ್ಥಿತಿಯೋ? ಇಲ್ಲವೇ ಬೇಜವಾಬ್ದಾರಿತನವೋ? ಹಣಕಾಸಿನ ಕೊರತೆಯೇ? ಅಥವಾ ಲೆಕ್ಕಕ್ಕೋಸ್ಕರ ಆಯವ್ಯಯದಲ್ಲಿ ಹಣವಿಟ್ಟುಕೊಂಡು ತೆರಿಗೆ ಬರಲಿಲ್ಲವೆನ್ನುವ ಕಾರಣಕ್ಕಾಗಿ ಅದಕ್ಕೆ ನೀವು ಒಪ್ಪಿಗೆ ಕೊಡಲಿಲ್ಲವೋ? ಏನೆಂದು ನೀವು ಹೇಳಬೇಕಾಗುತ್ತದೆ. ಇಲ್ಲವೆಂದರೆ, ಈ ವರ್ಷಕ್ಕೆ ಕೊಡುವ ಹಣವನ್ನೂ ಸೇರಿಸಿ ಕಳೆದ ವರ್ಷದ್ದೂ ಸಹ ನೀವು ಕೊಡಬೇಕಾಗುತ್ತದೆ. ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಕೃಷಿ ಸಚಿವರನ್ನು ಉದ್ದೇಶಿಸಿ ನಿನ್ನೆ ದಿವಸ ಮಾನ್ಯ ಸದಸ್ಯರಾದ ವಿ.ಮುನಿಯಪ್ಪನವರು ಹೇಳಿರುವುದರಿಂದ ಅದನ್ನು ಮತ್ತೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರಿಗೆ ನಾನು ಒಂದು ಸಲಹೆ

ಕೊಡುವುದಾದರೆ, ಇವೊತ್ತು ನಮ್ಮಲ್ಲಿರುವ ಅನೇಕ ಕೃಷಿಕರು ವ್ಯವಸಾಯದಲ್ಲಿ ತಾಂತ್ರಿಕತೆಯನ್ನು ತುಂಬಾ ಬಳಸಿಕೊಳ್ಳುತ್ತಾ, ಹೊಸ ಹೊಸ ವಿಧಾನಗಳಿಂದ ಕೃಷಿಯನ್ನು ಅಭಿವೃದ್ಧಿಪಡಿಸಲು ಮುಂದೆ ಬರುತ್ತಿರುವುದರಿಂದ ನೀವು ಅಂತಹವರನ್ನು ಗುರ್ತಿಸಿ ಪ್ರೋತ್ಸಾಹಿಸಬೇಕು. ಕಳೆದ ಬಾರಿ ಈ ಬಗ್ಗೆ ಹೇಳಿದ್ದರೂ ನೀವು ಅದನ್ನೂ ಇನ್ನೂ ಜಾರಿಗೆ ಕೊಟ್ಟಿಲ್ಲ. ಈಗತಾನೇ ತಾವು ಕೃಷಿಕರ ಬಗ್ಗೆ ಹೇಳಿದಿರಿ. ಕುರಿ ಸಾಕುವವರು, ಕೋಳಿ ಸಾಕುವವರು, ಹಂದಿ ಸಾಕಣೆ ಮಾಡುವವರು ಕೃಷಿಕರಲ್ಲವೇ? ಉತ್ತಮ ಕೃಷಿಕರಿಗೆ ತಾವು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ಕೊಡುವ ಕೆಲಸ ಮಾಡುತ್ತಿದ್ದೀರಿ. ಆ ಪ್ರಶಸ್ತಿಯನ್ನು ರೇಷ್ಮೆ ಬೆಳೆಯುವ, ತರಕಾರಿ ಬೆಳೆಯುವ ಎಷ್ಟು ಜನರಿಗೆ ಕೊಟ್ಟಿದ್ದೀರಿ? ಕಬ್ಬು, ಭತ್ತ ಬೆಳೆಯುವ ಉತ್ತಮ ಕೃಷಿಕರಿಗೆ ಪ್ರಶಸ್ತಿಯನ್ನು ಕೊಡುತ್ತಿದ್ದೀರಿ. ಆಡಿಕೆ ಬೆಳೆ ಬೆಳೆಯುವವರಿಗೆ ಪ್ರಶಸ್ತಿ ಕೊಟ್ಟಿದ್ದೀರಿ. ಆದರೆ, ಕುರಿ ಸಾಕುವವರಿಗೇನಾದರೂ ಪ್ರಶಸ್ತಿ ಕೊಟ್ಟಿದ್ದೀರಾ? ಇವೊತ್ತು ತಾವು ಧಾರವಾಡ, ಬಿಜಾಪುರ, ರಾಣಿಬೆನ್ನೂರು, ಚಿತ್ರದುರ್ಗದ ಕಡೆಗಳಿಗೆ ಹೋದರೆ ಒಬ್ಬೊಬ್ಬರು 3,000, 5,000 ಸಂಖ್ಯೆಯಲ್ಲಿ ಕುರಿಗಳನ್ನು ಸಾಕುವವರಿದ್ದಾರೆ. ಒಳ್ಳೆಯ ಕುರಿಗಳನ್ನು ಸಾಕಿದಂಥವರಿಗೆ ತಾವೇಕೇ ಪ್ರಶಸ್ತಿ ಕೊಡಬಾರದು? ಇದರ ಬಗ್ಗೆ ತಾವು ಯೋಚಿಸಬೇಕು.

ಶ್ರೀ ಸಿದ್ದರಾಮಯ್ಯ: ಒಳ್ಳೆಯ ಕುರಿಗಳನ್ನು ಸಾಕುವುದೆಂದರೆ ಅವುಗಳನ್ನು ಮನೆಯಲ್ಲಿಯೇ ಇಟ್ಟುಕೊಂಡು ಹುರುಳಿ ಕಾಳು ತಿನ್ನಿಸಿಕೊಂಡಿದ್ದರೆ ಒಳ್ಳೆಯ ಕುರಿಗಳನ್ನು ಸಾಕುವುದಕ್ಕೆ ಸಾಧ್ಯವಾಗುತ್ತದೆ. 3,000 ಕುರಿಗಳನ್ನಿಟ್ಟುಕೊಂಡು ಬರೀ ಹಿಂಡಿ ತಿನ್ನಿಸಿಕೊಂಡಿದ್ದರೆ ಒಳ್ಳೆಯ ಕುರಿಗಳನ್ನು ಸಾಕುವುದಕ್ಕಾಗುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ: ಒಟ್ಟಿನಲ್ಲಿ ನಾವು ಹೇಳುವುದೇನೆಂದರೆ, ಈ ಪ್ರಶಸ್ತಿಗಳು ಕೃಷಿ ಕ್ಷೇತ್ರದಲ್ಲಿ ವ್ಯಾಪಕವಾಗಿರಬೇಕು. ಬರೀ ಭತ್ತ, ಕಬ್ಬು ಬೆಳೆಯುವವರು ಮಾತ್ರ ಕೃಷಿಕರು, ಬೇರೆಯವರು ಕೃಷಿಕರಲ್ಲವೇ? ತೆಂಗು ಬೆಳೆ ಬೆಳೆಯುವವರನ್ನು ಗುರ್ತಿಸುವುದಕ್ಕಾಗುತ್ತದೆಯೇ? ಇಲ್ಲವೇ? ನಾನು ಪತ್ರಿಕೆಯಲ್ಲಿ ಓದಿರುವಂತೆ, ತುಮಕೂರಿನ ಯಾವುದೋ ಒಂದು ಭಾಗದಲ್ಲಿ ತೆಂಗು ಸಸಿ ಹಾಕಿದ ನಾಲ್ಕು ವರ್ಷಕ್ಕೆ ಉತ್ತಮ ಫಸಲು ಬಂದಿರುವ ಬಗ್ಗೆ ವರದಿಯಾಗಿದೆ. If it is so, should we not recognise such people? ಚಿತ್ರದುರ್ಗದಲ್ಲಿ ಏಕಾಂತಯ್ಯನವರು ಬಹಳ ಚೆನ್ನಾಗಿ ಕಾಫಿ ಬೆಳೆಸಿದ್ದಾರೆ. ನಮ್ಮ ಜನರು ನೋಡಿಕೊಂಡು ಬಂದು ಹೇಳಿದ್ದಾರೆ, ನಾನು ನೋಡಿಲ್ಲ. ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬೆಳೆಯುವ ಕಾಫಿಗಿಂತ ಬಹಳ ಉತ್ತಮವಾಗಿ, ಚೆನ್ನಾಗಿ ಬೆಳೆದಿದ್ದಾರೆ. ಅದೇ ರೀತಿ ನಮ್ಮ ಊರಿನಲ್ಲೂ ಹೆಗಡೆ ಎಂಬುವವರು ಬೆಳೆದಿದ್ದಾರೆ. ಮೊದಲು ನನಗೂ ಗೊತ್ತಿರಲಿಲ್ಲ. ಅಕಸ್ಮಾತ್ ಅಲ್ಲಿಗೆ ಹೋದಾಗ ನೋಡಿಕೊಂಡು ಬಂದೆ. ನನಗೆ ಆಶ್ಚರ್ಯವಾಯಿತು. ಅದನ್ನು ಕೃಷಿ ಸಚಿವರು ನೋಡಬೇಕು. ಬರೀ ಮಲೆನಾಡಿನಲ್ಲಿ ಮಾತ್ರವಲ್ಲ, ಕೋಲಾರದಲ್ಲೂ ಸಹ

ಕಾಫಿ, ಅಡಿಕೆ ಬರುತ್ತದೆಂದು ಅವರು ಹೇಳುತ್ತಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಮ್ಮ ದುರಂತವೇನೆಂದರೆ, ಕೃಷಿ ಸಚಿವರಾದ ಬೈರೇಗೌಡರು ಇಸ್ರೇಲ್‌ಗೆ ಹೋಗಿ ಬಂದನಂತರ ಇಸ್ರೇಲ್ ಟೆಕ್ನಾಲಜಿ ತೆಗೆದುಕೊಂಡು ಬಂದು ಕೋಲಾರ ಜಿಲ್ಲೆಯಲ್ಲಿ ಏನೇನೋ ಮಾಡುತ್ತಾರೆಂದು ತಿಳಿದುಕೊಂಡಿದ್ದೆವು. ಇಸ್ರೇಲ್ ಟೆಕ್ನಾಲಜಿ ಕರ್ನಾಟಕದಲ್ಲಿ ತಲೆಯೇ ಹಾಕಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಅದಕ್ಕೋಸ್ಕರ ನಾನು ಕೃಷಿ ಸಚಿವರಾದ ಬೈರೇಗೌಡರಿಗೆ ಹೇಳುತ್ತಿರುವುದೇನೆಂದರೆ, ನೀವು ಇಸ್ರೇಲ್‌ಗೆ ಹೋಗಿ ನೋಡಿಕೊಂಡು ಅಧ್ಯಯನ ಮಾಡಿ ಬಂದಿದ್ದೀರಿ. ನನಗೆ ಹೋಗುವುದಕ್ಕಾಗಲಿಲ್ಲ. ನೀವು ಅನುಭವಿಗಳಿದ್ದೀರಿ, ಕೃಷಿ ಬಗ್ಗೆ ಮೊದಲಿನಿಂದಲೂ ಆಸಕ್ತಿ ಇರತಕ್ಕಂಥವರು ತಾವಾಗಿದ್ದು ಇವೊತ್ತು ಇಂತಹವರ ಜೊತೆ ನೀವು ಸಂಪರ್ಕ ಬೆಳೆಸಿ ಸಮಾಲೋಚನೆ ನಡೆಸಿ ಕೃಷಿಯನ್ನು ಅಭಿವೃದ್ಧಿಪಡಿಸುವತ್ತ ವಿಚಾರ ಮಾಡಬೇಕು. ನಮ್ಮ ಊರಿನಲ್ಲಿ ಕಡಿಮೆ ಪ್ರಮಾಣದ ನೀರಿನಲ್ಲಿ ಹೆಚ್ಚು ಉತ್ಪಾದನೆ ಮಾಡುವುದು ಹೇಗೆ ಎಂದು ನಾನು ನೋಡಿಕೊಂಡು ಬಂದಿದ್ದೇನೆ. ಕೃಷಿ ಸಹ ಒಂದು ಉದ್ಯಮದಂತೆ ಕಾಣಬೇಕೆಂದು ಆ ಪರಿಕಲ್ಪನೆ ಅವರಿಗೆ ಬಂದಿದೆಯಲ್ಲ, ಆತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಪಡೆದವರಲ್ಲ. ಅಂಥವರು ನಮ್ಮ ಊರಿನಲ್ಲಿರಬಹುದು, ಮತ್ತೊಂದು ಊರಿನಲ್ಲಿರಬಹುದು. ಇವತ್ತು ನಮ್ಮ ಕೃಷಿಕರಲ್ಲಿ ಅಂತಹ ಒಂದು ಪರಿಕಲ್ಪನೆ ಬೆಳೆಯುತ್ತಿದೆ. ಏಕೆಂದರೆ, ವಿದ್ಯಾವಂತರಾದವರು ಅನಿವಾರ್ಯವಾಗಿ ಕೃಷಿ ಕ್ಷೇತ್ರದಲ್ಲಿ ತೊಡಗಿದಾಗ, ಉದಾಹರಣೆಗೆ ಏಕಾಂತಯ್ಯನವರು ಇರಬಹುದು, ನೀವು ಇರಬಹುದು, ನಮ್ಮ ರಾಮರೆಡ್ಡಿಯವರು ಇರಬಹುದು, ಸಿದ್ಧರಾಮಯ್ಯನವರು ಇರಬಹುದು. ವಿದ್ಯಾವಂತರು ಅನಿವಾರ್ಯವಾಗಿ ಕೃಷಿ ಕ್ಷೇತ್ರವನ್ನು ಅವಲಂಬಿಸಿದಾಗ, ಕೃಷಿಯನ್ನು ಒಂದು ಉದ್ದಿಮೆ ಎನ್ನುವ ರೀತಿಯಲ್ಲಿ ಅವರು ಪ್ರಯೋಗ ನಡೆಸಿದಾಗ ಕೃಷಿ ಕ್ಷೇತ್ರವನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದನ್ನು ಕಂಡುಕೊಳ್ಳಬೇಕು, ಬದಲಿಗೆ ಟೆಕ್ನಾಲಜಿ ಇಸ್ರೇಲ್‌ನಿಂದ ಬರಬೇಕಾಗಿಲ್ಲ. ಅವರು ಯಾವುದೋ ಕೆಮಿಕಲ್ ಸೇರಿಸಿ ಗೊಬ್ಬರ ತಯಾರಿಸಿ ಸೊಪ್ಪು ಬೆಳೆಯುತ್ತಾರೆ, ನಂತರ ಅದನ್ನು ಕಡಿಸಿ ಅದನ್ನೇ ಕೆಸರು ಮಾಡುತ್ತಾರೆ. ಅದೇನೂ ದೊಡ್ಡ ಟೆಕ್ನಾಲಜಿ ಅಲ್ಲ. ಆತ ಸ್ಪ್ರಿಂಕ್ಲರ್ ಸಹ ಮಾಡಿದ್ದಾನೆ. But these elements should be recongised. ನಿಮ್ಮಂಥವರಿಗೆ ಈ ವಿಚಾರದ ಕುರಿತು ಹೇಳುವುದಾದರೆ ನಿಮಗೆ ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಆಸಕ್ತಿಯಿದೆಯಲ್ಲದೆ ಅನುಭವವೂ ಇದೆ. ಕೃಷಿ ಕ್ಷೇತ್ರದಲ್ಲಿ ಏನೇನು ಬೆಳವಣಿಗೆಯಾಗಿದೆ, ಯಾರ‍್ಯಾರು ಏನೇನು ಮಾಡುತ್ತಿದ್ದಾರೆ ಎನ್ನುವ ಬಗ್ಗೆ ನೀವು ಸ್ವಲ್ಪ ಕ್ರೋಢೀಕರಿಸಿ ಅವರಿಗೆ ಪ್ರೋತ್ಸಾಹ ಕೊಡುವುದರ ಮೂಲಕ ಇನ್ನಷ್ಟು ಉತ್ಸಾಹ ತುಂಬಿ ಕೃಷಿ ಕ್ಷೇತ್ರವನ್ನು ಆಧುನಿಕವಾಗಿ ವಿಸ್ತರಿಸುವುದಕ್ಕೆ ವ್ಯಾಪಕವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬುದು ನನ್ನ ಆಸೆಯಾಗಿದೆ. ಇದು ಬಿಟ್ಟು ಮೂರು ಹೊತ್ತು

ಕೋಲಾರಕ್ಕೆ ಹೋಗುವುದು, ವಾಪಸ್ಸು ಬರುವುದು, ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈಗ ನಿಮಗೆ ಕಾಲಾವಕಾಶ ಕಡಿಮೆಯಿರುವುದರಿಂದ ನೀವು ಇಸ್ರೇಲ್‌ಗೆ ಹೋಗಿ ನೋಡಿ ಅಧ್ಯಯನ ಮಾಡಿ ಬಂದಿರುವ ಬಗ್ಗೆ ನಾನು ಏನೇನು ಹೇಳಿದೆ, ನನಗೆ ಅದೇನೂ ಬೇಕಾಗಿಲ್ಲ, ನಿಮ್ಮ ಊರಿನಲ್ಲಿಯೇ ಆ ಕುರಿತು ಪ್ರಯೋಗ ಮಾಡಿ, ನೋಡೋಣ. ಇವೊತ್ತು ಕೃಷಿ ಕ್ಷೇತ್ರದಲ್ಲಿ ಬಹಳಷ್ಟು ಬದಲಾವಣೆಗಳುಂಟಾಗುತ್ತಿದ್ದು, ದಯವಿಟ್ಟು ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು. ಸದನದಲ್ಲಿ ಸದಸ್ಯರಾದ ಶಿವಾನಂದ ಪಾಟೀಲರಿಲ್ಲ. ಅವರು ತೋಟಗಾರಿಕೆಯನ್ನು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ನಿಮ್ಮಲ್ಲಿ ಅನಂತರಾಜು ಇಲ್ಲವೆ, ಎರಡು ಎಕರೆ ಪ್ರದೇಶದಲ್ಲಿ ಅವರು ಎಷ್ಟು ಚೆನ್ನಾಗಿ ಬೆಳೆಯುತ್ತಾರೆ. ಇವೊತ್ತು ಅಂತಹವರನ್ನು ಗುರ್ತಿಸಿ, ಪ್ರೋತ್ಸಾಹಿಸಿ ಅವರಲ್ಲಿರುವ ಜ್ಞಾನ, ತಂತ್ರಜ್ಞಾನವನ್ನು ಸಾಮಾನ್ಯ ಕೃಷಿಕರಿಗೆ ವರ್ಗಾವಣೆ ಮಾಡುವಂತಾಗಬೇಕು.ನೀವು ಅದನ್ನು ಮಾಡುತ್ತ ಕುಳಿತ್ತಿದ್ದರು, ತೆಗೆದುಕೊಂಡು ಹೋಗಿ ಆ ದೊಡ್ಡ ವಿಧ್ಯಾಭ್ಯಾಸಕ್ಕೆ ಹಚ್ಚಿದರು. ಇಲ್ಲಿ ಕುಳಿತುಕೊಂಡು ಅದು ಇದು ಸಣ್ಣ ಪುಟ್ಟದನ್ನು ಮಾಡುತ್ತಿದ್ದರು. I like that such people should be involved in the process of this technology. ಆದ್ದರಿಂದ ಇಂದಿನ ಬದಲಾದ ಪರಿಸ್ಥಿತಿಯಲ್ಲಿ ತಮ್ಮಂಥವರು ಆಸಕ್ತಿ ವಹಿಸಿ ಕೃಷಿ ಕ್ಷೇತ್ರವನ್ನು ಇನ್ನಷ್ಟು ವಿಸ್ತಾರಗೊಳಿಸಬೇಕು. ಅದರಲ್ಲು ತೋಟಗಾರಿಕೆಗೆ ಹೆಚ್ಚು ಒತ್ತು ಕೊಡಬೇಕು. ಹೂವಿನ ಬೆಳೆಯನ್ನು ಬೆಳೆಯುತ್ತಿದ್ದಾರೆ. ನಾನು ಕೋಲಾರದ ಕಡೆ ಹೋಗಬೇಕಾದರೆ ಪ್ಲಾಸ್ಟಿಕ್ ಟೆಂಟ್ ಕಟ್ಟಿ ಹೂವಿನ ಬೆಳೆಯನ್ನು ಬೆಳೆದಿರುವುದನ್ನು ನೋಡಿದ್ದೇನೆ. ಆದರೆ ಇದನ್ನೆಲ್ಲ ಮಾಸ್ ಸ್ಕೇಲ್‌ನಲ್ಲಿ ತೆಗೆದುಕೊಂಡು ಹೋಗಲು ಆಗುವುದಿಲ್ಲ. ನಾವು ಯಾರ ಬಗ್ಗೆ ಹೋರಾಟ ಮಾಡಬೇಕಾಗಿದೆಯೆಂದರೆ, ಒಂದು, ಅರ್ಧ ಎಕರೆ, ಸಣ್ಣ ಪ್ರಮಾಣದಲ್ಲಿ ತರಕಾರಿ ಬೆಳೆಯುವವರ್‍ಯಾರಿದ್ದಾರೆ ಅಂಥ ಸಾಮಾನ್ಯ ಜನರಿಗೆ ಉದ್ಯೋಗ ಇಲ್ಲದಿದ್ದರೆ ಉದ್ಯೋಗವನ್ನು ಕೊಡಬೇಕು, ಅರೆ ಉದ್ಯೋಗವಿದ್ದರೆ ಪೂರ್ಣ ಉದ್ಯೋಗ ಬರುವಂತೆ ಮಾಡಬೇಕು. ಈ ಕೃಷಿ ಸಮಾಜಕ್ಕೆ ಲಾಭದಾಯಕವಾಗಿ ಹೇಗೆ ಬದುಕಬೇಕೋ ಅದನ್ನು ಮಾಡಬೇಕಾಗಿದೆ. ಹತ್ತು ವರ್ಷ ಅಮೇರಿಕಾದಲ್ಲಿದ್ದು ಅಲ್ಲಿ ಯಾವುದನ್ನೊ ತಿಳಿದುಕೊಂಡು ಬಂದು ಇಲ್ಲಿ ಅದನ್ನು ಬೆಳೆದು ಇಲ್ಲಿಂದ ರಫ್ತು ಮಾಡುತ್ತೇನೆ ಅವಕಾಶ ಕೊಡಿ ಎಂದು ಅವರನ್ನು ಹೊಗಳಿಕೊಂಡು ಕುಳಿತರೆ ಏನೂ ಆಗುವುದಿಲ್ಲ. ಕೆಲವು ಬೇಕಾಗುತ್ತದೆ ಮಾಡಿ. ಆದರೆ ಅದು ದೊಡ್ಡ ಪ್ರಮಾಣದಲ್ಲಿ ಉದ್ಯೋಗವನ್ನು ಕೊಡುವುದಾಗಲಿ, ದೊಡ್ಡ ಪ್ರಮಾಣದಲ್ಲಿ ಕೃಷಿಕರನ್ನು ವ್ಯಾಪ್ತಿಗೆ ತರುವುದಾಗಲಿ ಆಗುವುದಿಲ್ಲ. ನಾವು ಏನಿದ್ದರೂ ನಮ್ಮ ತಂತ್ರಗಾರಿಕೆ, ನಮ್ಮ ಕೃಷಿ ಕ್ಷೇತ್ರದಲ್ಲಿರುವ ಅನುಭವ ಇವೆಲ್ಲವನ್ನು ಕ್ರೋಢೀಕರಿಸಿ ಹೆಚ್ಚು ಜನರಿಗೆ ಲಾಭ ಆಗತಕ್ಕ ಕಾರ್ಯ ಕ್ರಮವನ್ನು ರೂಪಿಸಬೇಕೇ ವಿನಃ ಪರದೇಶದಿಂದ ಬಂದವರನ್ನು ನಂಬಿಕೊಂಡರೆ ಸರಿ ಆಗುವುದಿಲ್ಲ. ಅವರು ಬಹಳ ಚೆನ್ನಾಗಿ ಮಾತನಾಡುತ್ತಾರೆ, ಬಹಳ ಚೆನ್ನಾಗಿ ವಿವರಣೆ ನೀಡುತ್ತಾರೆ. ಬಹಳ ಚೆನ್ನಾಗಿ

ನಮ್ಮಲ್ಲಿ ನಂಬಿಕೆಯನ್ನು ಉಂಟು ಮಾಡಿಬಿಡುತ್ತಾರೆ. ಅದರ ಬಗ್ಗೆ ಪೂರ್ಣವಾಗಿ ಒಲವು ತೋರುವುದಲ್ಲ. ಅದನ್ನು ಸಂಪೂರ್ಣವಾಗಿ ಮರೆಯಬೇಕು ಎಂದು ನಾನು ಹೇಳುವುದಿಲ್ಲ. ಆದರೆ ಪೂರ್ಣವಾಗಿ ಅವರಿಗೆ ಮರುಳಾಗಿ ಹೋಗಬಾರದು. ಆದ್ದರಿಂದ ತಾವು ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಬಗ್ಗೆ ಆಸಕ್ತಿ ವಹಿಸಬೇಕು. ತಾವು ಅವತ್ತಿನಿಂದ ಸಂಸ್ಕರಣೆಯ ಬಗ್ಗೆ ಹೇಳುತ್ತಿದ್ದೀರಿ. ನಾವೇ ಹೋರಾಟ ಮಾಡಿ ಒಂದೊಂದು ಸಂದರ್ಭದಲ್ಲಿ ನಾವೇ ಕೆಳಕ್ಕೆ ಬೀಳುವ ಪರಿಸ್ಥಿತಿ ಇದೆ. ಹೆಚ್ಚು ತರಕಾರಿಯನ್ನು ತಾವೇ ತಮ್ಮ ಕೋಲಾರದಲ್ಲಿ ಬೆಳೆಯುತ್ತೀರಿ. ಟೊಮ್ಯಾಟೊ ಬೆಲೆ ಬಿದ್ದುಹೋದಾಗ ಏನು ಪರಿಸ್ಥಿತಿಯಾಯಿತು, ಈರುಳ್ಳಿ ಬೆಲೆ ಬಿದ್ದುಹೋದಾಗ ಏನು ಪರಿಸ್ಥಿತಿಯಾಯಿತು, ತಮ್ಮ ಭಾಗದಲ್ಲಿ ಈ ಸಲ ಕೆಲವು ಕಡೆ ಅದೇ ಪರಿಸ್ಥಿತಿಯಾಯಿತು. ಹುರುಳಿಕಾಯಿಯನ್ನು ಐವತ್ತು ಪೈಸೆಗೆ ಕೊಂಡುಕೊಳ್ಳುವವರು ಇರಲಿಲ್ಲ. ಈಗ ಏನೊ ಸ್ವಲ್ಪ ಜಾಸ್ತಿಯಾಗಿದೆ. ಮೆಣಸಿಕಾಯಿ ಬೆಲೆ ಒಂದು ಸಲ ಜಾಸ್ತಿಯಾಗುತ್ತದೆ, ಮತ್ತೊಂದು ಸಲ ಕಡಿಮೆಯಾಗುತ್ತದೆ, ಟೊಮ್ಯಾಟೊ ಬೆಲೆ ಒಂದು ಸಲ ಜಾಸ್ತಿಯಾಗುತ್ತದೆ, ಮತ್ತೊಂದು ಸಲ ಕಡಿಮೆಯಾಗುತ್ತದೆ. ಒಟ್ಟಿನಲ್ಲಿ ಅದನ್ನು ಕಂಟ್ರೋಲ್ ಮಾಡತಕ್ಕ ವಿಚಾರ ಇಲ್ಲಿದೆ. ಸಿರಾದಲ್ಲಿ ಗಲಾಟೆಯಾಯಿತು.

ಶ್ರೀ ಸಿ.ಬೈರೇಗೌಡ(ಕೃಷಿ ಸಚಿವರು):- ಮಾನ್ಯ ಛೇರ್ಮನ್‌ರವರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ರಚನಾತ್ಮಕವಾದ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ಈ ಬೆಲೆಗಳು. ಏಕೆ ಏರುಪೇರುಗಳಾಗುತ್ತಿದೆ? ಒಂದು ಸಲ ಆಕಾಶ ಮುಟ್ಟುತ್ತದೆ, ಒಂದೊಂದು ಸಲ ಪಾತಾಳ ಮುಟ್ಟಿತು ಎಂದರೆ ರೈತರು ಹತ್ತು ವರ್ಷವಾದರು ಮೇಲೇ ಎದ್ದೇಳಲು ಆಗುವುದಿಲ್ಲ, ಕೆಲವು ರೈತರು ಜೀವನಪರ್ಯಂತ ತಲೆ ಎತ್ತಲು ಆಗುವುದಿಲ್ಲ. ಇಂಥ ಪರಿಸ್ಥಿ ಇದೆ. ಇದು ಏಕೆ ಆಗುತ್ತಿದೆ ಎಂದರೆ, ನಮ್ಮಲ್ಲಿ ಈ ರೀತಿಯಾದಂಥ ಶಾಕ್ ಆಗುತ್ತಿರುತ್ತದೆ. ಹೆಚ್ಚು ಬೆಳೆಯಾದರೂ ಶಾಕ್ ಕಡಿಮೆ ಬೆಳೆಯಾದರು ಒಂದು ರೀತಿ ಶಾಕ್ ಅಗುತ್ತದೆ. ಈ ಶಾಕ್‌ನ್ನು ಅಬ್ಸಾರ್ವ್ ಮಾಡತಕ್ಕ ವ್ಯವಸ್ಥೆ ನಮ್ಮ ದೇಶದಲ್ಲಿ ಇಲ್ಲ. ಅದು ಎತ್ತಿ ತೋರಿಸುತ್ತಿದೆ. ಸಂಸ್ಕರಣೆ ಎಂಬ ಬಗ್ಗೆ ತಾವು ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ. ಬೇರೆ ಬೇರೆ ದೇಶಗಳಲ್ಲಿ ಶೇಕಡ 70ರಷ್ಟು ಮೇಲ್ಪಟ್ಟು ತೋಟಗಾರಿಕಾ ಬೆಳೆಗಳು ಸಂಸ್ಕರಣೆಗೆ ಒಳಪಡುತ್ತಿದೆ. ನಮ್ಮ ದೇಶದಲ್ಲಿ ಈ ದೇಶ ಸ್ವಾತಂತ್ರ್ಯ ಬಂದು ಐವತ್ತು ಐವತ್ತೆರಡು ವರ್ಷಗಳ ನಂತರವು ಸಹ ಶೇಕಡ 0.6ರಷ್ಟು ಮಾತ್ರ ಸಂಸ್ಕರಣೆಗೆ ಒಳಪಡುತ್ತಿದೆ. ಈ ರೀತಿ ಏಕೆ ಆಗುತ್ತಿದೆ ಎಂದು ನಾನು ತಜ್ಞರುಗಳಾದ ಡಾ: ಸ್ವಾಮಿನಾಥ್‌ನ್‌ರವರ ಹತ್ತಿರ ಇತರರ ಹತ್ತಿರ ಚರ್ಚೆ ಮಾಡಿದಾಗ, ಅಂಕಿಅಂಶಗಳನ್ನು ನೋಡಿದಾಗ ನಮ್ಮ ದೇಶದಲ್ಲಿ ಸಂಸ್ಕರಣೆ ಎಂಬುದು ಏನೇನು ಇಲ್ಲ. ಮತ್ತು ಶೈತ್ಯಾಗಾರಗಳು ನಮ್ಮಲ್ಲಿ ಏನೇನು ಇಲ್ಲ. ಆದ್ದರಿಂದ ಬೆಳೆಗಾರನಿಂದ ಬಳಕೆದಾರನಿಗೆ ಉತ್ಪನ್ನ ಹೋಗತಕ್ಕ ಸಂದರ್ಭದಲ್ಲಿ ಶೇಕಡ 31ರಷ್ಟು ಉತ್ಪನ್ನ ಕೊಳೆತುಹೋಗುತ್ತಿದೆ. ಇದರ ಬೆಲೆ ಇಪ್ಪತ್ತಮೂರು ಸಾವಿರ ಕೋಟಿ

ರೂಪಾಯಿಯಾಗುತ್ತದೆ. ಒಂದು ವರ್ಷದಲ್ಲಿ ಇಷ್ಟು ಮೌಲ್ಯದ ಉತ್ಪನ್ನ ಕೊಳೆತುಹೋಗುತ್ತಿದೆ. ಆದ್ದರಿಂದ ನಾವು ಇದರ ಬಗೆ ಆಲೋಚನೆ ಮಾಡಿ, ನಿನ್ನೆ ಯಾರೋ ನಾನು ಇಸ್ರೇಲ್‌ಗೆ ಹೋಗಿ ಬಂದ ಬಗ್ಗೆ ಮಾತನಾಡುತ್ತಿದ್ದರು. ನಾನು ಇಸ್ರೇಲ್‌ಗೆ ಎರಡು ಸಲ ಹೋಗಿ ಬಂದಿದ್ದೇನೆ. ಇಷ್ಟು ಮಾತ್ರವಲ್ಲ ಯೂರೋಪ್‌ನ ಕೆಲವು ರಾಷ್ಟ್ರಗಳಿಗೆ ಹೋಗಿ ಬಂದಿದ್ದೇನೆ. ಚೈನಾದೇಶಕ್ಕೆ ಎರಡು ಸಲ, ಅಮೇರಿಕಾಕ್ಕೆ ಮೂರು ಸಲ ಹೋಗಿ ಬಂದಿದ್ದೇನೆ. ಇವೆಲ್ಲವನ್ನು ನೋಡಿ ಬಂದನಂತರ, ಇದರ ಆಧಾರದ ಮೇಲೆ ಇದರ ಲೋಪದೇನು? ಅದನ್ನು ಸರಿಪಡಿಸತಕ್ಕ ಪ್ರಥಮ ಪ್ರಯತ್ನವಾಗಿ ಭಾರತ ದೇಶದಲ್ಲಿ ನಡೆಯುತ್ತಿದೆ ಅದೇ ನಮ್ಮ ಆಹಾರ ಸಂರಕ್ಷಣಾ ನೀತಿ. 1-4-1999ರಿಂದ ಆ ನೀತಿಯನ್ನು ಜಾರಿಗೆ ಕೊಟ್ಟಿದ್ದೇನೆ. ಅದರಲ್ಲಿ ಈ ಉದ್ಯಮಗಳನ್ನು ಹೆಚ್ಚು ಹೆಚ್ಚು ಬಳಸಬೇಕು, ಸಂಸ್ಕರಣೆಗೆ ಹೆಚ್ಚು ಹೆಚ್ಚು ಉತ್ಪನ್ನಗಳು ಒಳಪಡಬೇಕು, ಆ ರೀತಿ ಒಳಪಟ್ಟಾಗ ನಾನು ಶಾಕ್ ಎಂದು ಏನು ಹೇಳಿದೆ ಅದನ್ನು ಅಬ್ಸಾರ್ವ್ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ನಾನು ಒಂದು ಚಿಕ್ಕ ಉದಾಹರಣೆಯನ್ನು ಹೇಳುತ್ತೇನೆ. ತಾವು ಟೊಮ್ಯಾಟೊ ಬಗೆ ಪ್ರಸ್ತಾಪ ಮಾಡಿದಿರಿ. ಬಹಳ ಹೆಚ್ಚು ಎಂದರೆ ಐದಾರು ದಿವಸ ಅದನ್ನು ಇಟ್ಟುಕೊಳ್ಳಬಹುದು. ನಾವು ಬಹಳ ಆಹಾರವನ್ನು ತಾಜಾ ಆಗಿ ಬಳಸುತ್ತೇನೆ. ಐದಾರು ದಿವಸಗಳಲ್ಲಿ ಕೊಳೆತುಹೋಗತಕ್ಕ ಟೊಮ್ಯಾಟೊ ಸಂಸ್ಕರಣೆ ಮಾಡಾ ಪ್ಯಾಕ್‌ನಲ್ಲಿ, ಬಾಟೆಲ್‌ನಲ್ಲಿ ಇಟ್ಟರೆ ಒಂದರಿಂದ ಎರಡು ವರ್ಷದವರೆಗೆ ಇರುತ್ತದೆ. ಯಾವಾಗ ಉತ್ಪಾದನೆ ಕಡಿಮೆಯಾಗುತ್ತದೆ. ಆಗ ಅದನ್ನು ಮಾರುಕಟ್ಟೆಗೆ ಬಿಡಲು ಸಾಧ್ಯವಾಗುವತ್ತದೆ. ಆದರೆ ನಮ್ಮ ದೇಶದಲ್ಲಿ ಅ ವ್ಯವಸ್ಥೆ ಇಲ್ಲ. ಆದ್ದರಿಂದ ನಾವು ಈಗ ಆಹಾರ ಸಂಸ್ಕರಣೆ ನೀತಿಯನ್ನು ರೂಪಿಸಿದ್ದೇವೆ. ಅದಲ್ಲದೆ ಆಹಾರ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲು ಯಾರಾದರು ಮುಂದೆ ಬಂದರೆ ಅವರಿಗೆ ಎಲ್ಲಾ ಸೌಲಭ್ಯವನ್ನು ಕೊಡುತ್ತೇವೆ. ಮಾಲೂರಿನಲ್ಲಿ ವಿಶೇಷವಾದಂಥ ಫುಡ್ ಪ್ರೋಸ್‌ಸಿಂಗ್ ಪಾರ್ಕ್ ಎಂಬುದಕ್ಕೆ ಇನ್ನೂರು ಎಕರೆ ಪ್ರದೇಶದಲ್ಲಿ ಅಂಥವರಿಗೆ ಸೌಲಭ್ಯವನ್ನು ಕೊಡಬೇಕೆಂದು ಮಾಡಿದ್ದೇವೆ. ಇದು ಪ್ರಾರಂಭಿಕವಾಗಿ ಮಾತ್ರ. ಉತ್ತರ ಕರ್ನಾಟಕದಲ್ಲಿ ಬಾಗಲಕೋಟೆ ದಕ್ಷಿಣದಲ್ಲಿ ಮಾಲೂರಿನಲ್ಲಿ ಆ ರೀತಿ ಮಾಡಿದ್ದೇವೆ. ನಾವು ಈ ಸಂಸ್ಕರಣೆಯ ಬಗ್ಗೆ ಇನ್ನೂ ಮುಂದೆ ಹೋಗಿ ಯಾವುದೇ ವಸ್ತುವಾಗಲಿ ಇವತ್ತು ನಮ್ಮ ವ್ಯಾಲ್ಯೂ ಆ್ಯಡೆಡ್ ಪ್ರಾಡಕ್ಟ್ ಆಗಿ ಎಲ್ಲಿ ಉತ್ಪಾದನೆಯಾಗುತ್ತದೆಯೊ ಅಲ್ಲಿಂದ ಅದು ವ್ಯಾಲ್ಯೂ ಆ್ಯಡೆಡ್ ಪ್ರಾಡಕ್ಟ್ ಆದರೆ ಉದ್ಯೋಗ ಸೃಷ್ಟಿಯಾಗುತ್ತದೆ ಅದರ ಜೊತೆಗೆ ಸ್ಥಳದಲ್ಲೇ ಕ್ಯಾಪಿಟಲ್ ಫಾರ್ಮೇಷನ್ ಆಗುತ್ತದೆ. ಹೆಚ್ಚು ಜನರಿಗೆ ಉದ್ಯೋಗ ಸಿಗುತ್ತದೆ. ಭೂಮಿ ಇಲ್ಲದಿರುವವರಿಗೆ ದಿನದ ಕೂಲಿ ಹೆಚ್ಚು ದೊರೆಯುತ್ತದೆ. ಈ ಕಲ್ಪನೆಯನ್ನು ಜಾರಿಗೆ ಕೊಡಬೇಕು ಎಂಬ ಉದ್ದೇಶ ನಮಗೆ ಇದೆ. ಇದರ ಪರಿಚಯ ಮತ್ತು ಆಲೋಚನೆ ನಾನು ಇಸ್ರೇಲ್ ಇತರೆ ದೇಶಗಳಲ್ಲಿನ ಪರಿಸ್ಥಿತಿಯನ್ನು ನೋಡಿದಾಗ, ನಮ್ಮ ದೇಶ ಮತ್ತು ಅಲ್ಲಿ ಆಗಿರುವ ಬದಲಾವಣೆಯನ್ನು ನೋಡಿದಾಗ ಆ ರೀತಿ ಕಲ್ಪನೆ ಬಂದಿದ್ದರಿಂದ ಪ್ರಪ್ರಥಮವಾಗಿ ಐವತ್ತು ವರ್ಷಗಳ

ನಂತರ ಈ ದೇಶದಲ್ಲಿ ಆಹಾರ ಸಂಸ್ಕರಣ ನೀತಿಯನ್ನು ನಾವು ರೂಪಿಸಿದ್ದೇವೆ, ಅದನ್ನು ಜಾರಿಗೆ ತಂದಿದ್ದೇವೆ. ಆ ಪ್ರಯತ್ನ ಮಾಡಿದ್ದೇವೆ. ಇದನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ಛೇರ್ಮನ್‌ರವರೆ, ಆಹಾರ ಸಂಸ್ಕರಣೆಗೆ ಸಂಬಂಧಪಟ್ಟಂತೆ ಬಹಳ ಮುಖ್ಯವಾದ ಅಂಶವನ್ನು ಅವರು ಹೇಳಿದ್ದಾರೆ. ಅವರು ಮಾತನಾಡುತ್ತ ಒಂದೊಂದುಸಲ ಬೆಲೆ ಆಕಾಶಕ್ಕೆ ಮುಟ್ಟುತ್ತದೆ ಒಂದೊಂದು ಸಲ ಪಾತಾಳಕ್ಕೆ ಹೊಗುತ್ತದೆ, ಇದಕ್ಕೆ ಏನು ಕಾರಣ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಸಂಸ್ಕರಣೆ ಮಾಡಿ ಶೇಖರಣೆ ಮಾತಕ್ಕದ್ದು ಒಂದು ವಿಧಾನವಷ್ಟೆ. ಆದರೆ ಇಲ್ಲಿ ಮೂಲಭೂತವಾದ ಪ್ರಶ್ನೆ ಏನಿದೆ ಎಂದರೆ, ನಮ್ಮಲ್ಲಿ ಏಕೆ ಆ ರೀತಿ ಆಗುತ್ತದೆಂದರೆ ಪ್ಲಾನ್ಡ್ ಪ್ರೊಡಕ್ಷನ್ ಇಲ್ಲ. ಯೋಜನಾಬದ್ಧವಾದಂಥ ಉತ್ಪಾದನೆ ಇಲ್ಲ; ಅದಕ್ಕೆ ಯಾವುದೇ ಕಾನೂನು ಇಲ್ಲ. ನಾವು ಏನು ಉತ್ಪಾದನೆ ಮಾಡಬೇಕು, ಎಷ್ಟು ಉತ್ಪಾದನೆ ಮಾಡಬೇಕು ಎಂಬ ಬಗ್ಗೆ ಯೋಜನಾಬದ್ಧ ಕಾನೂನು ಇಲ್ಲ. ನಮ್ಮ ಸಮಾಜಕ್ಕೆ ಏನು ಅವಶ್ಯಕತೆ ಇದೆ ಅಂಥ ಆಹಾರ ಪದಾರ್ಥಗಳನ್ನು ಉತ್ಪಾದನೆ ಮಾಡತಕ್ಕದ್ದು ಇಲ್ಲ. ನಮ್ಮ ಉತ್ಪಾದನೆ ಯಾವಾಗಲೂ ಮಾರ್ಕೆಟ್ ಓರಿಯೆಂಟೆಡ್ ಪ್ರೊಡಕ್ಷನ್ ಆಗಿರುತ್ತದೆ. ನಮಗೆ ಏನು ಬೇಕು ಎಂಬುದು ಇಲ್ಲಿ ಮುಖ್ಯವಲ್ಲ. ನಮಗೆ ಯಾವುದರಲ್ಲಿ ಲಾಭ ಹೆಚ್ಚಿಗೆ ಬರುತ್ತದೆ ಎಂಬುದು ಇಲ್ಲಿ ಮುಖ್ಯವಾಗಿದೆ. ಮಾರ್ಕೆಟ್ ಓರಿಯೆಂಟೆಡ್ ಪ್ರೊಡಕ್ಷನ್ ವಿಷಯಕ್ಕೆ ಬಂದಾಗ, ಮಾರ್ಕೆಟ್ ಎಕಾನಮಿ ವಿಷಯಕ್ಕೆ ಬಂದಾಗ ನಮಗೆ ಕಂಡು ಬರುವುದೇನೆಂದರೆ most glaring clash when it comes to market economy, agrarian product has no protection at all in this country after 50 years of Independence whereas industrial products are having all sorts of protection. ಇಂಡಸ್ಟ್ರಿಯಲ್ ಪ್ರೊಡಕ್ಷನ್ಸ್‌ಗೆ ಕಾನೂನಿನಲ್ಲಿ ಪ್ರೊಟೆಕ್ಷನ್ ಇದೆ. ಆದರೆ ಕೃಷಿ ಉತ್ಪನ್ನಗಳಿಗೆ ಕಾನೂನಿನಲ್ಲಿ ಯಾವುದೇ ಪ್ರೊಟೆಕ್ಷನ್ ಇಲ್ಲ. this unprotected production in the agrarian sector ಇದೊಂದು ಇನ್ನೊಂದು ಮೂಲಭೂತವಾದಂತಹ ಪ್ರಶ್ನೆ. ಮತ್ತೊಂದು ಬಹಳ ಮೂಲಭೂತವಾದಂತಹ ಪ್ರಶ್ನೆ ಏನೆಂದರೆ, imbalance between agrarian products and industrial products. ರೈತ ಏಕೆ ಇವತ್ತು ದಿವಾಳಿಯಾಗುತ್ತಿದ್ದಾನೆ ಎಂದು ಹೇಳಿದರೆ, ಇಂಡಸ್ಟ್ರಿಯಲ್ ಪ್ರಾಡಕ್ಟ್ಸ್ ಹೈಯೆಸ್ಟ್ ರೇಟಿಗೆ ಹೋಗುತ್ತಿವೆ. ಕೃಷಿ ಉತ್ಪನ್ನಗಳಿಗೆ ಕಡಿಮೆ ಬೆಲೆ ಇದೆ. ಹಾಗಾಗಿ The imbalance between agrarian products and industrial products makes a peasant pauper every day. ಇದು ಮೂಲಭೂತವಾದಂತಹ ಪ್ರಶ್ನೆ. ಸಂಸ್ಕರಣೆ ಮಾಡತಕ್ಕದ್ದು that is one part of the process to protect the interest of the agri-

cultural production. ಈ ಮೂಲಭೂತವಾದಂತಹ ಪ್ರಶ್ನೆಗಳು ಒಂದು ರಾಜ್ಯದ ವ್ಯಾಪ್ತಿಗೆ ಬರತಕ್ಕಂಥದ್ದು ಅಲ್ಲ. ಆದರೆ, ರಾಜ್ಯದ ವ್ಯಾಪ್ತಿಯಲ್ಲಿ ಏನೆಲ್ಲಾ ಮಾಡಬಹುದು....

ಛೇರ್ಮನ್:- ಮಾನ್ಯ ಸದಸ್ಯರು ನಾಳೆ ಡಿಮ್ಯಾಂಡ್‌ಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಬಹುದು. ತಮ್ಮ ಹೆಸರೇ ಮೊದಲನೆಯ ಸ್ಥಾನದಲ್ಲಿದೆ.

ಶ್ರೀ ಅರಗ ಜ್ಞಾನೇಂದ್ರ:- ನಮ್ಮ ಊರಾದ ಅರಗದಲ್ಲಿ ಒಂದು ವರ್ಷದಲ್ಲಿ ಸುಮಾರಾಗಿ ಏಪ್ರಿಲ್‌ನಿಂದ ಜೂನ್ ತಿಂಗಳವರೆಗೆ 500 ಲಾರಿ ಲೋಡ್ ಕುಂಬಳಕಾಯಿ ಬೆಳೆಯುತ್ತಾರೆ. ಅಷ್ಟೂ ಬಾಂಬೆ ಮಾರ್ಕೆಟ್‌ಗೆ ಹೋಗುವುದರಿಂದ ಅವರು ಹೊಡೆತ ತಿನ್ನುತ್ತಾರೆ. ನಿಮ್ಮ ಹಾರ್ಟಿಕಲ್ಚರ್ ಅಧಿಕಾರಿಗಳಿಗೆ ನಾನು ಕನಿಷ್ಟ ಹತ್ತು ಸಲ ಲೆಟರ್ ಬರೆದೆ ಮತ್ತು ಹೇಳಿದೆ. ಅರಗದಲ್ಲಿ ಕುಂಬಳ ಕಾಯಿ ಉಪಯೋಗಿಸಿ ಮಿಠಾಯಿ ತಯಾರು ಮಾಡುವ ಹೋಮ್ ಇಂಡಸ್ಟ್ರಿ ಮಾಡಿ ಎಂದು ನಾನು ಅವರಗೆ ಹೇಳಿದೆ. ಯಾರನ್ನಾದರೂ ಇಬ್ಬರನ್ನು ಕರೆದುಕೊಂಡು ಬಂದು ಮಿಠಾಯಿ ಮಾಡುವುದನ್ನು ನಮಗೆ ತೋರಿಸಿ ಕೊಡಿ ಎಂದು ನಾನು ಅವರನ್ನು ಕೇಳಿದೆ. ನಮಗೆ ಅಷ್ಟು ಮಾಡಿ, ನಾವು ಮುಂದೆ ಸಂಬಂಧಪಟ್ಟವರಿಂದ ಲೋನ್ ಕೊಡಿಸುವುದು ಇತ್ಯಾದಿ ವ್ಯವಸ್ಥೆ ಮಾಡಿಸುತ್ತೇವೆ ಎಂದು ಹೇಳಿದೆ. ಯಾವ ಅಧಿಕಾರಿಯೂ ಕೂಡ ಇದಕ್ಕೆ ಗಮನ ಹರಿಸಲಿಲ್ಲ. ನೀವೇನು ಅವರಿಗೆ 200 ಎಕರೆ ಜಾಗ ಕೊಡುವುದು ಬೇಡ.

ಶ್ರೀ ಸಿ.ಭೈರೇಗೌಡ: ಹಾರ್ಟಿಕಲ್ಚರ್‌ನವರು ಮಿಠಾಯಿ ಮಾಡುವುದಕ್ಕಾಗುತ್ತದೆಯೇ? ಅದು ಸಾಧ್ಯವೇ? ಫುಡ್ ಪ್ರೋಸೆಸಿಂಗ ಪಾಲಿಸಿ ತಂದಿರತಕ್ಕದ್ದು ಏಕೆಂದರೆ,ಈ ತರಹದ ಉತ್ಪನ್ನಗಳೇನಿವೆ, ಅವುಗಳನ್ನು ಬೇರೆ ಬೇರೆ ಪದಾರ್ಥಗಳನ್ನಾಗಿ ಮಾಡುವುದಕ್ಕಾಗಿ ನಾವು ಆಹಾರ ಸಂಸ್ಕರಣ ನೀತಿ ತಂದಿದ್ದೇವೆ. ನೀವು ಹೇಳಿರತಕ್ಕದ್ದು ಇದರಲ್ಲೇ ಬರುತ್ತದೆ. ಅದಕ್ಕೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಅದನ್ನು ಬೇರೆಯವರು ಮಾಡಬೇಕಾಗುತ್ತದೆ. ಕೃಷಿ ಇಲಾಖೆ ಮಿಠಾಯಿ ಮಾಡುತ್ತಾ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ:- ಮಿಠಾಯಿಯನ್ನು ಇಲಾಖೆಯವರೇ ಮಾಡಬೇಕು ಎಂದು ನಾನು ಹೇಳುತ್ತಿಲ್ಲ. ಮಾನ್ಯ ಮಂತ್ರಿಗಳು ನಾನು ಹೇಳಿದ ವಿಷಯವನ್ನು ಈ ಸೆನ್ಸ್‌ನಲ್ಲಿ ತೆಗೆದುಕೊಂಡರೆ ಆಗುವುದಿಲ್ಲ. ಕೇವಲ ಕುಂಬಳಕಾಯಿಯನ್ನು ಬೆಳೆದು ಬಿಟ್ಟರೆ ಆಯಿತೇ? ಮಿಠಾಯಿ ಮಾಡುವುದರ ಮೂಲಕ ಅದನ್ನು ಹೇಗೆ ಸೂಕ್ತವಾಗಿ ಬಳಸಿಕೊಳ್ಳಬಹುದು ಎಂಬ ಬಗ್ಗೆ ಅಧಿಕಾರಿಗಳು ಗೈಡ್ ಮಾಡಬೇಕೆಂದು ನಾನು ಕೇಳಿದ್ದು.

ಶ್ರೀ ಕಾಗೋಡು ತಿಮ್ಮಪ್ಪ:- ಡಿಮ್ಯಾಂಡ್‌ಗೆ ತಕ್ಕಂತೆ ಉತ್ಪನ್ನಗಳನ್ನು ಪ್ಲಾನ್

ಮಾಡಿಕೊಂಡು ಬೆಳೆಯುವ ಪದ್ಧತಿ ನಮ್ಮ ದೇಶಕ್ಕೆ ಬರಬೇಕಾದರೆ ಇನ್ನೂ ನೂರು ವರ್ಷಗಳು ಬೇಕಾಗುತ್ತದೆ. ನಮ್ಮಲ್ಲಿ ಕಟ್ಟ ಕಡೆಯಲ್ಲಿರತಕ್ಕಂಥ ಬಳಕೆದಾರ ಕೂಡ ಇದ್ದಾನೆ, ಅತ್ಯಂತ ಎತ್ತರದಲ್ಲಿ ಇರತಕ್ಕಂಥ ಬಳಕೆದಾರ ಕೂಡ ಇರುತ್ತಾನೆ. ಈ ಕನ್‌ಸ್ಯೂಮರ್‌ನ ಲೆವೆಲ್ ಆಫ್ ಕನ್‌ಸಂಪ್‌ಷನ್ ಏನಿದೆ, ಇದು ಒಂದೇ ಪ್ಯಾರಾಮೀಟರ್‌ನಲ್ಲಿ ಇರುವಂತಹ ಸ್ಟೇಜ್‌ನಲ್ಲಿ ನಾವಿಲ್ಲ. ನಮ್ಮದು. ಬೆಳವಣಿಗೆ ಆಗುತ್ತಿರತಕ್ಕಂಥ ಸಮಾಜವಾಗಿದೆ. ಬೆಳವಣಿಗೆ ಆದಂತಹ ಇಂಗ್ಲೆಂಡ್, ಫ್ರಾನ್ಸ್ ಅಥವಾ ಅಮೆರಿಕಾದಂತಹ ದೇಶದಲ್ಲಿ ನಮ್ಮ ದೇಶಕ್ಕೆ ಇಷ್ಟು ಆಲೂಗಡ್ಡೆ ಇತ್ಯಾದಿ ಬೇಕಾಗುತ್ತದೆ ಎಂಬುದು ಗೊತ್ತಾಗುತ್ತದೆ. ಅದನ್ನು ಅನ್‌ಲೈಸ್ ಮಾಡಿ ಅವರು ಅದರಂತೆ ಬೆಳೆಯ ಬಹುದು. ನಮ್ಮ ದೇಶದಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಹತ್ತು ವರ್ಷಗಳ ಹಿಂದೆ ನಮ್ಮ ನಿಮ್ಮ ಮನೆಗಳಲ್ಲಿ ಎಷ್ಟನ್ನು ಬಳಕೆ ಮಾಡುತ್ತಿದ್ದೆವು, ಈಗೆಷ್ಟು ಮಾಡುತ್ತಿದ್ದೇವೆ ಎಂಬುದರಲ್ಲಿ ಬಹಳಷ್ಟು ವ್ಯತ್ಯಾಸವಾಗಿದೆ. ನಾವು ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಆದ್ದರಿಂದ ಬೆಳವಣಿಗೆಯಾಗುತ್ತಿರುವ ಸಮಾಜದಲ್ಲಿ ಇದೆಲ್ಲಾ ಇರುತ್ತದೆ. ನೀವು ಯಾವುದಾದರೂ ಕೆಲವು ಐಟಮ್ ಅನ್ನಾದರೂ, ಹಾಸನದಲ್ಲಿ ಆಲೂಗಡ್ಡೆ ಇರಬಹುದು, ಬಿಜಾಪುರದಲ್ಲಿ ದಾಳಿಂಬೆ ಆಗಬಹುದು ಅಥವಾ ಮತ್ತೊಂದು ಆಗಬಹುದು, ಅಂತಹ ಯಾವುದಾದರೂ ಕೆಲವು ಐಟಮ್ ಬಗ್ಗೆ ಆದರೂ ನೀವು ಕಾನ್‌ಸೆಂಟ್ರೇಟ್ ಮಾಡಿ. ಅವು ಬೆಲೆಯಲ್ಲಿ ಏರಿಳಿತ ಆಗದ ರೀತಿಯಲ್ಲಿ ನೋಡಿಕೊಳ್ಳಿ, ಏರಿಳಿತ ಆದಾಗ ಸರ್ಕಾರ ಮಧ್ಯೆ ಪ್ರವೇಶಿಸಿ ಯಾವುದೋ ಸಹಕಾರ ಸಂಘವೋ ಅಥವಾ ಮತ್ತೊಂದೋ ಅದರಲ್ಲಿ ಅವುಗಳನ್ನು ಮಾರುವಂತೆ ಮಾಡಿ ರೈತನಿಗೆ ಬಾಧಕ ಆಗದ ರೀತಿಯಲ್ಲಿ ಪ್ರಯತ್ನ ಮಾಡಿ. ನನ್ನ ಸಣ್ಣ ತಿಳುವಳಿಕೆಯ ಪ್ರಕಾರವೇ ಹೇಳುವುದಾದರೆ, ಇವತ್ತು ಇಲ್ಲಿ ಹುರುಳಿಕಾಯಿ ಬೆಲೆ ಕೆಜಿಗೆ 1 ರೂಪಾಯಿ ಇದ್ದರೆ, ಮಂಗಳೂರು ಅಥವಾ ಬಾಂಬೆಗೆ ಹೋದರೆ ಅದೇ ರೇಟ್ ಅಲ್ಲಿ ಕೆಜಿಗೆ 5 ರೂಪಾಯಿ ಇರುತ್ತದೆ. ಬಾಳೆಹಣ್ಣು ಇಲ್ಲಿ ಕೆಜಿಗೆ 10 ರೂಪಾಯಿ ಇದ್ದರೆ, ಅದೇ ಹಣ್ಣು ಬೇರೆ ಕಡೆಗೆ ಹೋದರೆ ಕೆಜಿಗೆ 20 ರೂಪಾಯಿ ಇರುತ್ತದೆ. ಈ ರಿತಿ ನಡೆಯುತ್ತಿರುತ್ತದೆ. ಇವತ್ತಿನ ಟೆಕ್ನಾಲಜಿ ಯುಗದಲ್ಲಿ ನಾವು ಕುಳಿತ ಕಡೆಯಿಂದಲ್ಲೆ ಜಗತ್ತಿನ ಯಾವ್ಯಾವ ಮಾರುಕಟ್ಟೆಗಳಲ್ಲಿ ಯಾವ್ಯಾವ ಬೆಳೆಗೆ ಏನೇನು ಬೆಲೆ ಇದೆ ಎಂದು ತಿಳಿದುಕೊಳ್ಳಬಹುದು. ನೀವು ಇಡೀ ದೇಶದ್ದನ್ನು ನೋಡುವುದು ಬೇಡ. ನಮ್ಮ ರಾಜ್ಯದ 500 ಕಿ.ಮೀ. ಸುತ್ತಳತೆಯ ದೂರದಲ್ಲಿ ಫಾಸ್ಟಾಗಿ ಮೂವ್ ಆಗತಕ್ಕ ಸಾರಿಗೆ ವ್ಯವಸ್ಥೆಯಲ್ಲಿ 4-5 ಗಂಟೆಗಳಲ್ಲಿ ಕ್ರಮಿಸಬಹುದು. ಅದಕ್ಕೆ ಒಂದು ಸಣ್ಣ ಸಿಸ್ಟಮ್ ಅನ್ನು ನೀವು ಡೆವಲಪ್ ಮಾಡಿ. ನಿಮ್ಮ ಕೋಲಾರದಿಂದ ಒಂದೆರಡು ಹೆಚ್ಚಾಗಿ ಬೆಳೆಯುವಂತಹ ಐಟಮ್ ಇಟ್ಟುಕೊಳ್ಳಿ, ಅದು ಆಲೂಗಡ್ಡೆ ಆಗಬಹುದು ಅಥವಾ ಹುರುಳಿಕಾಯಿ ಅಗಬಹುದು ಅಥವಾ ಟೊಮ್ಯಾಟೋ ಆಗಬಹುದು. ಹೀಗೆ 7-8 ಮೇಜರ್ ಕನ್‌ಸ್ಯೂಮರ್ಸ್ ಐಟಮ್ ಅನ್ನು ಇಟ್ಟಕೊಂಡು ಮಾರಬಹುದು. ಮೊದಲು ಪ್ರೋಸೆಸಿಂಗ್ ಆಗಿ ನಂತರ ಇದು ಆಗಬೇಕು. ನಿಮಗೆ ಗೊತ್ತಿದ್ದಂತೆ ಪ್ರೋಸೆಸಿಂಗ್

ಕ್ಷೇತ್ರದಲ್ಲಿ ಕಿಸಾನ್, ಇತ್ಯಾದಿ ದೊಡ್ಡ ದೊಡ್ಡ ಕಂಪೆನಿಗಳಿವೆ. ಅವರನ್ನೆಲ್ಲಾ ನೀವು ಚಾಲೆಂಜ್ ಮಾಡುವುದಕ್ಕಾಗುತ್ತದೆಯೇ? ಅವರು ನಿಮ್ಮನ್ನು ಕೊಂದೇ ಬಿಡುತ್ತಾರೆ. ಇವತ್ತು ಯಾರ ಮನೆಯಲ್ಲಿ ಟೊಮ್ಯಾಟೋ ಸಾಸ್ ಅನ್ನು, ಚಿಲ್ಲಿಸಾಸ್ ಅನ್ನು ಉಪಯೋಗ ಮಾಡವುದಿಲ್ಲ? ನಾವೆಲ್ಲಾ ಉಪಯೋಗಿಸುತ್ತೇವೆ. ಎಲ್ಲರೂ ಕಿಸಾನ್ ಐಟಮ್ ಅನ್ನೇ ತೆಗೆದುಕೊಳ್ಳುತ್ತೇವೆ ಇಲ್ಲಿ ಇರುವುದನ್ನು ಯಾರೂ ತೆಗೆದುಕೊಳ್ಳುವುದಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನಾನು ಹೇಳುವುದೇನೆಂದರೆ, ಬೇರೆ ದೇಶದಲ್ಲಿ ಪ್ರೋಸೆಸಿಂಗ್ ಇಂಡಸ್ಟ್ರಿ ಏನು ಮಾಡಿದ್ದಾರೆ, ಅದನ್ನು ಎಲ್ಲರೂ ಉಪಯೋಗಿಸುತ್ತಾರೆ. ಬೆಂಗಳೂರು, ಮೈಸೂರಿನಲ್ಲಿ ಸಾಸ್ ಅನ್ನು ಬಳಸುತ್ತಿರಬಹುದು. ಆದರೆ ನಮ್ಮ ಊರಿನಲ್ಲಿ ವಾಸಿಸುವವರು ಚಿಲ್ಲಿ ಸಾಸ್ ಬಳಸುವುದು ಸಾಧ್ಯವೇ? ಬೇರೆ ಬೇರೆ ದೇಶಗಳಲ್ಲಿ ಎಲ್ಲರೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದು. ಆದರೆ ನಮ್ಮಲ್ಲಿ ಯಾರು ಅದನ್ನು ಉಪಯೋಗಿಸಲು ಸಾಧ್ಯ?

ಶ್ರೀ ಕಾಗೋಡು ತಿಮ್ಮಪ್ಪ:ಅದಕ್ಕೆ ನಾನೇನು ಹೇಳುತ್ತೇನೆ ಎಂದರೆ, ಈ ಪ್ರೋಸೆಸ್ ಅನ್ನುವುದು ತುಂಬಾ ಲೇಟಾಗುತ್ತದೆ. ಭತ್ತ, ತೆಂಗು, ಕಬ್ಬು ಬೆಳೆಯುವರಿಗೆ ದೊಡ್ಡ ಮಾರ್ಕೆಟ್ಟೇ ಇದೆ. ಅದು ಬೇರೆ ವಿಷಯ. ನಮ್ಮಲ್ಲಿ ತರಕಾರಿಗಳ ಮಾರಾಟದಿಂದಲೇ ಬಹಳ ಜನ ಬದುಕುತ್ತಿದ್ದಾರೆ. ನಿಮ್ಮಲ್ಲೂ ಕೂಡ ಅಂತಹವರು ಇದ್ದಾರೆ. ಅರ್ಧ ಎಕರೆ -ಒಂದು ಎಕರೆ ಇಟ್ಟುಕೊಂಡು,ಅದರಲ್ಲೇ ಸರ್ವಸ್ವವನ್ನೂ ಹಾಕಿ ಜೀವನ ಮಾಡತಕ್ಕವರು ಇದ್ದಾರೆ.ಈ ವರ್ಷ 5 ರೂಪಾಯಿ ಕೆಜಿಗೆ ರೇಟ್ ಇದ್ದ ಟೊಮ್ಯಾಟೋ ಕೆಜಿಗೆ 1 ರೂಪಾಯಿ ಅಥವಾ 50 ಪೈಸೆ ರೇಟಿಗೆ ಇಳಿದರೆ, ರೈತ ವಿಷ ಕುಡಿಯುವುದೊಂದೇ ಬಾಕಿ. ಬೇರೆ ಏನೂ ಇಲ್ಲ. ಆದ್ದರಿಂದ ಕೆಲವು ಐಟಮ್ಸ್‌ಗಳ ಮಾರ್ಕೆಟಿಂಗ್ ಸಿಸ್ಟಮ್ ಅನ್ನು ರೆಗ್ಯೂಲೇಟ್ ಮಾಡಿ ಆ ಬೆಳೆಗಾರನಿಗೆ ಮತ್ತು ಗ್ರಾಹಕರಿಗೆ ನ್ಯಾಯಯುತವಾದಂತಹ ದರದಲ್ಲಿ ಸಿಕ್ಕುವ ರೀತಿಯಲ್ಲಿ ಮಾಡಬೇಕು. ಇದಕ್ಕಾಗಿ ಮಾರ್ಕೆಟಿಂಗ್‌ಸಿಸ್ಟಮ್ ಒಂದನ್ನು ಡೆವಲಪ್ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಹಾಸನದಂತಹ ಜಿಲ್ಲೆಯಲ್ಲಿ ಒಂದು ಸೀಸನ್‌ನಲ್ಲಿ ಆಲೂಗಡ್ಡೆ ಬಹಳ ಬೆಳೆದು ಬಿಟ್ಟಿತು ಎಂದು ಇಟ್ಟುಕೊಳ್ಳಿ. ರೇಟ್ ಚೆನ್ನಾಗಿ ಬಂದಿದೆ ಎಂದು ಎಲ್ಲರೂ ಹಾಕಿದ್ದರಿಂದ ಆ ರೀತಿ ಆಯಿತು ಎಂದಿಟ್ಟುಕೊಳ್ಳಿ. ಆಗ ವ್ಯಾಪಾರಸ್ಥರು ರೈತರ ಶೋಷಣೆ ಮಾಡಲು ಸಿದ್ಧರಾಗಿ ಕುಳಿತುಬಿಡುತ್ತಾರೆ. ಆ ಸಂದರ್ಭದಲ್ಲಿ the government should take a risk and enter into the market.ಅಂತಹ ಒಂದು ಮಾರ್ಕೆಟಿಂಗ್ ಸಿಸ್ಟಮ್ ಅನ್ನು ಡೆವಲಪ್ ಮಾಡುವುದಕ್ಕೆ ನೀವು ಪ್ರಯತ್ನ ಮಾಡಿ. ನಿಮಗೆ ಈ ದಿಸೆಯಲ್ಲಿ ಸಾಕಷ್ಟು ಅನುಭವ ಇದೆ.

ಶ್ರೀ ಸಿ. ಭೈರೇಗೌಡ: ಈ ವಿಚಾರವನ್ನೂ ಸಹ ನಾವು ಈಗಾಗಲೇ ಪರಿಶೀಲನೆ ಮಾಡಿ

ಈ ವರ್ಷದಿಂದ ನಾವು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಜವಾಬ್ದಾರಿಯಂತೆ ಕೆಲವು ಉತ್ಪನ್ನಗಳಿಗೆ ಈ ಮಾರುಕಟ್ಟೆ ಪ್ರವೇಶ ಮಾಡುವಂತಹ ಪದ್ಧತಿ ಜಾರಿಯಲ್ಲಿದೆ. ಆದರೆ ಅನೇಕ ಉತ್ಪನ್ನಗಳಿಗೆ ಆ ಪದ್ಧತಿ ಜಾರಿಯಲ್ಲಿ ಇಲ್ಲ. ಈಗಾಗಲೇ ಒಂದು ತಾತ್ವಿಕವಾದಂತಹ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈ ವರ್ಷದಲ್ಲಿ ಸುಮಾರು 20 ಕೋಟಿ ರೂ.ಗಳನ್ನು ಅದಕ್ಕೆ ಮೀಸಲಾಗಿಟ್ಟು ಆ ಹಣವನ್ನು ಕೆಲವು ಉತ್ಪನ್ನಗಳಿಗೆ, ಯಾವುವು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ವಲಯದಲ್ಲಿ ಒಳಗೊಂಡಿಲ್ಲವೋ ಮತ್ತು ರಾಜ್ಯ ಸರ್ಕಾರದ ಯೋಜನೆಯನ್ನು ರೂಪಿಸಿ ಕೆಲವು ಉತ್ಪನ್ನಗಳು ಬೆಲೆ ತಗ್ಗಿದಂತಹ ಸಂದರ್ಭದಲ್ಲಿ ಅವುಗಳು ಮಾರುಕಟ್ಟೆ ಪ್ರವೇಶ ಮಾಡುವಂತೆ ಮಾಡಬೇಕು, ಸರ್ಕಾರ ರೈತನಿಗೆ ರಕ್ಷಣೆ ಕೊಡಬೇಕು ಎನ್ನತಕ್ಕಂಥ ತಾತ್ವಿಕವಾದಂತಹ ತೀರ್ಮಾನವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಅದು ಸಚಿವ ಸಂಪುಟದ ಒಪ್ಪಿಗೆಗಾಗಿ ಕಾಯುತ್ತಿದೆ. ಅದಾದ ತಕ್ಷಣ ಬಹುಶಃ ಇದು ಒಂದೆರಡು ವಾರದಲ್ಲಿ ಈ ಯೋಜನೆಯನ್ನೂ ಕೂಡ ಜಾರಿಗೆ ತರುತ್ತೇವೆ ಎನ್ನುವಂತಾದ್ದನ್ನೂ ಕೂಡ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಛೇರ್ಮನ್: 6 ಗಂಟೆಯೊಳಗಾಗಿ ತಮ್ಮ ಭಾಷಣ ಮುಗಿಸಿಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ: ಈಗ ಕೃಷಿ ಮಾರುಕಟ್ಟೆ ಇದೆ. ಈ ಕೃಷಿ ಮಾರುಕಟ್ಟೆ ದೊಡ್ಡ ಗೋಡೌನುಗಳನ್ನು ಕಟ್ಟುವುದು ಇತ್ಯಾದಿ ಮಾಡುವುದನ್ನು ಬಿಟ್ಟರೆ ಕೃಷಿ ಉತ್ಪನ್ನಗಳ ಬಗ್ಗೆ, ಕೃಷಿಕರ ರಕ್ಷಣೆಯ ಬಗ್ಗೆ ನಾವೇನಾದರೂ ಪ್ರಯತ್ನ ಮಾಡಬೇಕು ಅನ್ನುವುದರ ಬಗ್ಗೆ ಅವುಗಳಿಗೆ ಎಳ್ಳಷ್ಟೂ ಕೂಡ ಕಾಳಜಿ ಇಲ್ಲ. ಅವರನ್ನೂ ಕೂಡ ನೀವು ಉಪಯೋಗಿಸಿಕೊಳ್ಳಿ. ಕೃಷಿ ಮಾರುಕಟ್ಟೆ ಎಂದರೆ ಬರೇ ವ್ಯಾಪಾರದ್ದು ಅಷ್ಟೇ ಅಲ್ಲ, ಈ ಬೆಲೆಗಳ ನಿಯಂತ್ರಣದ ಬಗ್ಗೆ, ಒಳ್ಳೆಯ ಬೆಲೆ ರೈತನಿಗೆ ಸಿಗುವುದರ ಬಗ್ಗೆ ಅವರೂ ಕೂಡ ವೈಜ್ಞಾನಿಕವಾಗಿ ಸ್ವಲ್ಪ ವ್ಯಾವಹಾರಿಕ ಕ್ರಮಗಳನ್ನು ಅನುಸರಿಸಬೇಕಾದಂತಹ ಅಗತ್ಯ ಇದೆ. ನಮ್ಮ ಊರಿನ ಸುತ್ತಮುತ್ತ ಬೇಸಿಗೆಯಲ್ಲಿ ಹಸಿ ಮೆಣಸಿನಕಾಯಿ ಬೆಳೆಯುತ್ತಾರೆ. ಭತ್ತ ಬೆಳೆದರೆ ಅಷ್ಟು ಚೆನ್ನಾಗಿ ಲಾಭ ಬರುವುದಿಲ್ಲ ಎಂದು ಇದನ್ನು ಬೆಳಯುತ್ತಾರೆ. ಈ ಹಸಿ ಮೆಣಸಿನಕಾಯಿಯನ್ನು ಸರಿಯಾಗಿ ಒಂದೆರಡು ಎಕರೆಗಳಲ್ಲಿ ಬೆಳೆದು ಬಿಟ್ಟರೆ 40- 50 ಸಾವಿರ ರೂಪಾಯಿಗಳ ಲಾಭ ಸಿಗುತ್ತದೆ. ಮನೆಯಲ್ಲಿರತಕ್ಕಂಥ ಎಲ್ಲಾ ಗೊಬ್ಬರ, ದುಡ್ಡನ್ನೂ ಸಹಾ ಇದರ ಮೇಲೆಯೇ ಅವರು ಇನ್‌ವೆಸ್ಟ್ ಮಾಡಿ ಬಿಡುತ್ತಾರೆ. ಅದು ಸರಾಸರಿ ಒಂದು ಕ್ವಿಂಟಾಲ್‌ಗೆ 700- 1000 ರೂಪಾಯಿ ರೇಟಿಗೆ ಬಾಂಬೆ ಮಾರ್ಕೆಟ್‌ಗೆ ಹೋಗುತ್ತದೆ. ಆದರೆ ಸಡನ್ನಾಗಿ ಕ್ವಿಂಟಾಲ್‌ಗೆ 1200- 1000 ರೂಪಾಯಿಗಳ ಬೆಲೆ ಇದ್ದದ್ದು 200 ರೂಪಾಯಿಗಳಿಗೆ ಇಳಿದರೆ ಅವನು ಏನು ಮಾಡಬೇಕು? ನಿಮ್ಮ ಹಾಸನದಲ್ಲಿ ನಡೆದಂತೆ, ಅವರು ತಂದಂತಹ ಮೆಣಸಿನಕಾಯಿಯನ್ನು ಬಿಸಾಡಿದ್ದರು. ನಾನು ಅಲ್ಲಿನ ಎಪಿಎಂಸಿ ಅವರಿಗೆ, ಎಲ್ಲಾದರೂ 25 ಲಕ್ಷ ರೂಪಾಯಿಗಳನ್ನು ನಿಮ್ಮ ಕೈಯ್ಯಲ್ಲಿ ಹಿಡಿದುಕೊಂಡು ಹೋಗಿ ಒಂದು ದಿವಸ ಒಂದೆರೆಡು ಲೋಡ್

ಮೆಣಸಿನಕಾಯಿಯನ್ನು ಕೊಳ್ಳಿರಿ ಎಂದರೆ,ಅವರು ನಮಗೆ ಕೊಳ್ಳಲಿಕ್ಕೆ ಪ್ರಾವಿಷನ್ ಇಲ್ಲ,ನಮಗೆ ಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳಿದರು.

6.00 ಪಿಎಂ

ಅವರು 10 ಜನ ಬಂದಿರುತ್ತಾರೆ, ನೀವು 10 ಲೋಡ್, 20 ಲೋಡ್ ಹಾಕುತ್ತೀರಿ, ಮೆಣಸಿನಕಾಯಿ ಕೊಳ್ಳುವುದಕ್ಕೆ ಲಾರಿ ಮತ್ತು ದುಡ್ಡು ಇಟ್ಟುಕೊಂಡು ಹೋಗಿ ಕೂತುಕೊಳ್ಳಿ ಎಂದು ಹೇಳಿದರೆ, ಏನು ಮಾಡಿದರೂ ಮಾಡಲಿಲ್ಲ. ಇವರು ಇರುವುದು ಏತಕ್ಕೆ? ಯಾರ ರಕ್ಷಣೆಗೆ? ಬರೀ ಕಮೀಷನ್ ತೆಗೆದುಕೊಳ್ಳುವುದಕ್ಕಾ? ಅದಕ್ಕೆ ಏನಾದರೂ ಸ್ವಲ್ಪ ವಿಚಾರ ಮಾಡಿ ಕಾನೂನಿನಲ್ಲಿ ಏನಾದರೂ ಸ್ವಲ್ಪ ಲೋಪ ದೋಷಗಳಿದ್ದರೆ ಸರಿಪಡಿಸಬೇಕು. In some times, it is a market. ಎಷ್ಟು ದುಡ್ಡು ಖರ್ಚು ಮಾಡಿ ಮಾರ್ಕೆಟಿಂಗ್ ಪ್ರಾಂಗಣವನ್ನು ಅಭಿವೃದ್ಧಿ ಪಡಿಸಿದ್ದೇವೆ. ಎಷ್ಟು ಸಿಬ್ಬಂದಿ ಇದೆ, ಎಷ್ಟು ವ್ಯವಸ್ಥೆ ಇದೆ, ಶಿರಾದಲ್ಲಿ ಏಕೆ ಗಲಾಟೆಯಾಯಿತು? ಇದೇ ಕಾರಣಕ್ಕೆ. ಇವತ್ತು ನಮ್ಮ ಲೀಡರ್‌ಶಿಪ್ ಕೂಡ ಸಾಕಷ್ಟು ಸತ್ತು ಹೋಗಿದೆ. ನಾವು ವ್ಯಸನಪಟ್ಟುಕೊಳ್ಳಬೇಕಷ್ಟೆ. ಎಂತೆಂಥವರೋ ಆ ಮಾರ್ಕೆಟಿಂಗ್ ಅಧ್ಯಕ್ಷರು, ಸದಸ್ಯರು ಕೂತುಕೊಂಡು ಅವರು ಹೇಗೆ ನಿಭಾಯಿಸುವುದು, ಹೇಗೆ ಮಾಡಬೇಕೆಂಬ ವ್ಯವಸ್ಥೆ ಹೋಗಿಬಿಟ್ಟಿದೆ. ರಾಜಕೀಯ ವ್ಯವಸ್ಥೆಯಲ್ಲಿ ಯಾರು ಬಂದಿರುತ್ತಾರೆ, ಅವರನ್ನು ಕೂರಿಸುತ್ತೀರಿ, ಅವರಿಗೆ ಬಾಯಿ ಬಿಡುವುದಕ್ಕೆ ಬರುವುದಿಲ್ಲ, ಮಾರ್ಕೆಟಿಂಗ್ ಎಂದರೆ ಏನು ಎಂದು ಗೊತ್ತಿಲ್ಲ, ಈ ಸ್ಥಿತಿಯಾಗಿದೆ. ಇದರಲ್ಲಿ ಪಕ್ಷ ಪಂಗಡ ಭೇದ ಮರೆತ ಸರ್ವಾಂಗೀಣ ವಿಚಾರ ಮಾಡತಕ್ಕಂತಹ ಸಂದರ್ಭ ಇದೆ. ನಮ್ಮ ಊರಿನಲ್ಲಿ ನಡೆದಿರಬಹುದು, ಹಾಸನದಲ್ಲಿ ನಡೆದಿರಬಹುದು, ಇನ್ನೊಂದು ಕಡೆ ನಡೆದಿರಬಹುದು, ಒಟ್ಟಾರೆ ಕೃಷಿ ಮಾರುಕಟ್ಟೆಗಳೂ ಕೂಡ ಬೆಲೆ ನಿಯಂತ್ರಣದ ಬಗ್ಗೆ, ರೈತರಿಗೆ ಉತ್ತಮವಾದ ಬೆಲೆ ಹೊಂಚಿಕೊಡುವ ಬಗ್ಗೆ ಇವತ್ತು ಅವರಿಗೆ ಜವಾಬ್ದಾರಿ ಹೊರಿಸತಕ್ಕಂತಹ ಕಾಲ ಬಂದಿದೆ. ಜೊತೆಗೆ ಅಡಿಕೆ ವಿಚಾರದಲ್ಲಿ ಬರೆದಿದ್ದೇನೆ, ತನಿಖೆ ಮಾಡಿಸಿದ್ದಾರೆ. ಮುಂದಿನ ಕೆಲಸವೇನು, ಒಬ್ಬ ಅಧಿಕಾರಿ ಇದ್ದರು ಅವರನ್ನು ಶಿಫ್ಟ್ ಮಾಡಿದಿರಿ. They detected so minutely. I am not disclosing. some of the illegal transactions were going on. ರಾಬರಿ ಪ್ರಾರಂಭವಾಯಿತು. ನಮ್ಮಂತಹವರ ಊರಿನಲ್ಲಿ ನಿಮ್ಮಂತಹವರ ಊರಿನಲ್ಲಿ ಕೆಲವರು, ಲಾರಿಗಳಲ್ಲಿ, ಕಾರ್‌ಗಳಲ್ಲಿ ಮೂಟೆಗಟ್ಟಲೆ ಹಣವನ್ನು ಕಟ್ಟಿಕೊಂಡು ಬರತಕ್ಕಂಥದ್ದನ್ನು ನೋಡಿ ಕೆಲವರಿಗೆ ಟೆಂಪ್ಟೇಷನ್ ಆಗಿ ನಮ್ಮಂತವರ ಊರಿನಲ್ಲಿ ಜನ ಇವತ್ತು ರಾಬರಿಗೆ ಇಳಿದರು. ನಿಮ್ಮ ಊರಿನಲ್ಲಿ ಜನ ಬಂದು ಕೊಟ್ಟಿಗೆ ಮನೆಯಲ್ಲಿ ಇಳಿದರು ಎಂದರೆ, ನಾವು ಅಲ್ಲಿ ಏನಾಗಬೇಕು? ನೇಣು ಹಾಕಿಕೊಂಡು ಸಾಯಬೇಕು. ಯಾರಿಂದ ಈ ವ್ಯವಸ್ಥೆಯಾಯಿತು? ಈ ಲಾಭ ಮಾಡತಕ್ಕಂತಹ ಜನ, ಮತ್ತು ದರೋಡೆಕೋರರಿಂದ. ಅವರನ್ನು ನಿಯಂತ್ರಣ ಮಾಡತಕ್ಕಂತಹ ಅಗತ್ಯ ಇದೆ. ನಿಮಗೆ ಬರೆದ ಮೇಲೆ ತುಂಬ

ಇನ್‌ವೆಸ್ಟಿಗೇಟ್ ಮಾಡಿದ್ದಾರೆ. They have disclosed lot of information. ಫಾಲೋ ಅಪ್ ಆ್ಯಕ್ಷನ್ ಬೇಕಾಗುತ್ತದೆ. ದಯವಿಟ್ಟು ಪ್ರಾಮಾಣಿಕ ಅಧಿಕಾರಿಗಳನ್ನು ಅಲ್ಲಿ ಇಟ್ಟು ಕೆಲಸ ಮಾಡಿ. ನಿಮಗೆ 200-300 ಕೋಟಿ ರೂಪಾಯಿ ಲಾಭ ಬರುತ್ತದೆ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀಮತಿ ಬಿ.ಟಿ.ಲಲಿತಾನಾಯಕ್ (ದೇವದುರ್ಗ): ಮಾನ್ಯ ಉಪಾಧ್ಯಕ್ಷರೆ, 10ನೇ ವಿಧಾನ ಸಭೆಯ ಎಂಟನೆ ಹಾಗೂ ಕೊನೆಯ ಅಧಿವೇಶನ ಸಂದರ್ಭದಲ್ಲಿ ಬೇಡಿಕೆ ಮೇಲೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಮಹಿಳೆಯಾದ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ತಿಳಿಸುತ್ತಾ, ಕೆಲವು ಇಲಾಖೆಗಳ ಬಗ್ಗೆ ನಿರ್ದಿಷ್ಟವಾಗಿ ಒಂದು ಅಲ್ಲದೆ ಇದ್ದರೂ ಕೆಲವು ಇಲಾಖೆಗಳ ಬಗ್ಗೆ ನನ್ನ ಬೇಡಿಕೆಯನ್ನು ಮತ್ತು ನನ್ನ ಅಭಿಪ್ರಾಯಗಳನ್ನು ಇಡುವುದಕ್ಕೆ ಬಯಸುತ್ತೇನೆ. ಇನ್ನು ಎರಡು ತಿಂಗಳಲ್ಲಿ ನಾವು ಜನತಾ ನ್ಯಾಯಾಲಯದ ಮುಂದೆ ಎಲ್ಲರೂ ಹೋಗುವವರಿದ್ದೇವೆ. ಇಂತಹ ಸಂದರ್ಭದಲ್ಲಿ ಆಳುವ ಪಕ್ಷ ಮತ್ತು ಕೇಳುವ ಪಕ್ಷ ಎಲ್ಲರಿಗೂ ಕೂಡ ಈ ನಾಲ್ಕೂವರೆ ವರ್ಷಗಳಲ್ಲಿ ಏನೇನು ಕೆಲಸ ಮಾಡಿದ್ದೇವೆಂದು ಆತ್ಮ ವಿಮರ್ಶೆ ಮಾಡಿಕೊಂಡರೆ, ನಮ್ಮಿಂದ ಏನಾಗಿದೆ ಎನ್ನುವುದನ್ನು ಬಹುಶಃ ಪ್ರತಿಯೊಬ್ಬ ಶಾಸಕರೂ ಕೂಡ ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ನನಗನ್ನಿಸುತ್ತದೆ. ಏಕೆಂದರೆ, ಸರ್ಕಾರ ಒಂದೇ ಈ ಕೆಲಸ ಮಾಡುತ್ತದೆ ಎಂದು ಅಲ್ಲ, ಪ್ರತಿಯೊಬ್ಬರೂ ಸೇರಿ ಸರ್ಕಾರವಾಗಿರುವುದರಿಂದ ಸುಮಾರು 5 ಕೋಟಿ ಕರ್ನಾಟಕದ ಜನತೆ ಪ್ರತಿನಿಧಿಗಳಾಗಿ ನಾವು ಇಲ್ಲಿ ಸೇರಿರುವುದು ಒಂದು ಭಾಗ್ಯ ಎಂದು ನಾನು ಭಾವಿಸುತ್ತೇನೆ. ಈ ಶಾಸಕತ್ವದ ಅವಧಿಯನ್ನು ಸಾರ್ಥಕ ರೀತಿಯಲ್ಲಿ ನಾವು ಸದುಪಯೋಗ ಪಡಿಸಿಕೊಂಡಿದ್ದೇವಾ, ನಮಗೆ ಮತಗಳನ್ನು ಕೊಟ್ಟು ಆರಿಸಿ ಕಳುಹಿಸಿದಂತಹ ಜನರಿಗೆ ಏನಾದರೂ ಮಾಡಿದ್ದೇವಾ ಎಂದು ನೋಡಿದಾಗ, ಸರ್ಕಾರದ ಸಾಧನೆ ಬಗ್ಗೆ ಬಹಳ ಹೆಮ್ಮೆ ಇದೆ. ಬೇಡಿಕೆಯೂ ಕೂಡ ಇದೆ. ಇಲ್ಲವೆಂದಲ್ಲ, ಆದರೆ ಬಹಳಷ್ಟು ವಿಷಯದಲ್ಲಿ ಅತ್ಯಂತ ತೃಪ್ತಿಕರವಾದ ಕೆಲಸ ನಡೆದಿರುವುದು ಕೂಡ ಕಂಡುಬರುತ್ತಿದೆ. ನಬಾರ್ಡ್‌ನಿಂದ ಹಿಡಿದು ಜಿಲ್ಲಾ ಪಂಚಾಯಿತಿಯವರೆಗೆ ಕೂಡ ಹಲವಾರು ರಸ್ತೆ ಕಾಮಗಾರಿಗಳು ನಡೆದಿವೆ. ಒಂದು ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಕಡೆ ಈ ನಾಲ್ಕೂವರೆ ವರ್ಷಗಳಲ್ಲಿ ಆಸ್ಪತ್ರೆ, ಕುಡಿಯುವ ನೀರು, ಪಶು ಆಸ್ಪತ್ರೆ, ವಿದ್ಯುತ್ ವ್ಯವಸ್ಥೆ ಮತ್ತು ಶಾಲಾ ಕಾಲೇಜುಗಳಾಗಿವೆ. ನಾನು ಪ್ರತಿನಿಧಿಸುತ್ತಿರುವ ತಾಲ್ಲೂಕಿನಲ್ಲಿ ಮೂರು ಅಂಬೇಡ್ಕರ್ ಭವನಗಳಾಗಿವೆ. ರಸ್ತೆಗಳು ಇರಲಿಲ್ಲ, ಕೂಡು ರಸ್ತೆಗಳಿರಲಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಬಹಳ ಕೆಟ್ಟು ಹೋಗಿತ್ತು. ಅದನ್ನು ಮಾಡಿದ್ದೇವೆ. ಬೇಕಾದಷ್ಟು ಕೆರೆ ಕುಂಟೆಗಳ ವ್ಯವಸ್ಥೆಯಾಗಿದೆ. ಕೃಷ್ಣ ಮೇಲ್ದಂಡೆ ಯೋಜನೆ ಕೆಲಸ ಆಗುತ್ತಿದೆ. ಆದರೂ ಕೂಡ ಇದನ್ನು ಬೇಗ ಮಾಡಿ ಮುಗಿಸಬೇಕೆಂದು ನನ್ನ ಬೇಡಿಕೆ

ಇದೆ. ಸೊನ್ನೆಯಿಂದ 95 ನೇ ಕಿ.ಮೀ.ವರೆಗೆ 'ಎ' ಸ್ಕೀಮ್‌ನಲ್ಲಿ ಒಂದುವರೆ ಲಕ್ಷ ಎಕರೆ ನೀರಾವರಿ ನಮ್ಮ ಜಿಲ್ಲೆಗೆ ಆಗುತ್ತಿದೆ. ಆ ಕೆಲಸವನ್ನು ತ್ವರಿತಗತಿಯಲ್ಲಿ ನಮ್ಮ ಸರ್ಕಾರ ಮಾಡಬೇಕಾಗಿದೆ. ಅಂಬೇಡ್ಕರ್ ಭವನ, ಬಾಲಭವನ, ಗುರುಭವನ ಮತ್ತು ಸಮುದಾಯ ಭವನ ಒಂದಲ್ಲ ಎರಡಲ್ಲ ನಾನಾ ರೀತಿಯ ಸಾಂಸ್ಕೃತಿಕ ಮಂದಿರಗಳನ್ನು ಕೊಡುತ್ತಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ರೀಡೆಗೆ, ಶಾಲಾ ಚಟುವಟಿಕೆಗಳಿಗೆ, ಬೇರೆ ಆಟ ಪಾಠಗಳಿಗೆ ಪ್ರತಿಯೊಂದಕ್ಕೂ ಕೂಡ, ವೃದ್ಧಾಪ್ಯವೇತನ ಕೊಡಿಸುವಂತಹ ಕೆಲಸ ಆಗುತ್ತಿದೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಯಾವ ಗ್ರಾಮದಲ್ಲಿ ತಾವು ಹೋಗಿ ಕೇಳಿದರೂ ಕೂಡ ಅಂಗವಿಕಲರ ವೇತನ ಬರುತ್ತಿದೆಯಾ ಎಂದು ಕೇಳಿದರೆ, ಹೌದು ಬರುತ್ತಿದೆ ಎಂದು ಹೇಳುತ್ತಾರೆ ಹೊರತು ಇಲ್ಲವೆಂದು ಹೇಳುವುದು ನಾನು ಕೇಳಿಯೇ ಇಲ್ಲ. ಯಾವುದೇ ಕಡೆ ನೋಡಿದರೂ ಅಷ್ಟೊಂದು ಕಾಳಜಿ ವಹಿಸಿ ವೃದ್ಧಾಪ್ಯ ವೇತನ, ವಿಧವಾವೇತನ ಇವೆಲ್ಲವೂ ಕೂಡ ಬಡ ಜನರಿಗೆ ದೊರಕಿಸಿ, ಅವರವರ ವೃತ್ತಿಗೆ ಅನುಗುಣವಾಗಿ ನಾನಾ ರೀತಿಯ ಲೋನ್ ಕೊಡುವಂತಹ ಕೆಲಸ ಮಾಡುತ್ತಿದೆ. ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿರುವಂತಹ ಸಂದರ್ಭದಲ್ಲಿ ಒಂದು ಸಾರಿ ಇದೇ ಸದನದಲ್ಲಿ ಆ ವಿಷಯ ಪ್ರಸ್ತಾಪ ಮಾಡಿದಾಗ ಅದಕ್ಕೆ ಒಂದು ಜಂಟಿ ಸದನ ಸಮಿತಿ ಮಾಡಿದ್ದು, ಇವತ್ತು ಆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅದರಲ್ಲಿ ಕಾನೂನಿಗೆ ಹಲವಾರು ತಿದ್ದುಪಡಿಗಳನ್ನು ಸೂಚಿಸುವಂತಹ ಕೆಲಸ ಆಗಿದೆ. ಮಹಿಳೆಯರ ಆಯೋಗ ಇದೆ, ಮಹಿಳೆಯರ ಸಹಾಯವಾಣಿ ಇದೆ, ಇಷ್ಟು ಆಗಿಯೂ ಕೂಡ ಮಹಿಳೆಯರ ಮೇಲೆ ಕೊಲೆ, ದೌರ್ಜನ್ಯ ನಡೆಯುತ್ತಿದೆ. ಅದನ್ನು ತಡೆಗಟ್ಟುವಂತಹ ಕೆಲಸವೂ ಆಗುತ್ತಿದೆ. ಆದರೆ ನನ್ನ ಬೇಡಿಕೆ ಏನೆಂದರೆ ನೀವು ಏನೇ ಮಾಡಿದರೂ ಪೋಲಿಸ್ ಇಲಾಖೆ ಎಷ್ಟು ಸಮರ್ಪಕವಾಗಿ ಕೆಲಸ ಮಾಡಬೇಕು ಅಷ್ಟು ಮಾಡುತ್ತಿಲ್ಲ. ದಿನ ಬೆಳಗಾದರೆ ಪತ್ರಿಕೆಯಲ್ಲಿ ನೋಡಿದರೆ ಹೋಗುತ್ತಿರುವ ಮಹಿಳೆಗೆ ಅಡ್ಡಗಟ್ಟಿ ಅವಳ ಸರವನ್ನು ಕಿತ್ತುಕೊಳ್ಳುವುದು, ಅಡ್ಡಗಟ್ಟಿ ಹಣವನ್ನು ಪಡೆದು ಅವರನ್ನು ಕೊಲೆ ಮಾಡುವುದು. ಮಕ್ಕಳನ್ನು ಎತ್ತಿಕೊಂಡು ಹೋಗುವುದು. ಮೊನ್ನೆ ನಡೆದಂತಹ ಒಂದು ಧಾರುಣ ಘಟನೆ ಹೊರಗಡೆ ಆಡುತ್ತಿದ್ದ ಆ ಮಗುವನ್ನು ಯಾರೋ ಎತ್ತಿಕೊಂಡು ಹೋಗಿ ಇಷ್ಟು ಹಣ ಬೇಕೆಂದು ಕೇಳಿದರು, ಆ ಮೇಲೆ ಆ ಮಗುವನ್ನು ಸಾಯಿಸಿದರು. ಇವತ್ತಿನ ಪತ್ರಿಕೆಯಲ್ಲಿ ನೋಡಿರಬಹುದು, ಹಸಿವಿನ ಬೇಗೆ ಮತ್ತು ಬಡತನದಿಂದ ಮೂರು ಜನ ಹೆಣ್ಣು ಮಕ್ಕಳನ್ನು ಕೊಲೆ ಮಾಡಿ, ತಾನೂ ಕೂಡ ಆತ್ಮಹತ್ಯೆ ಮಾಡಿಕೊಂಡಿರುವಂತಹ ಮಹಿಳೆ. ಇಂತಹವು ಬೇಕಾದಷ್ಟು ನಡೆಯುತ್ತಿವೆ. ಎಷ್ಟೇ ಮಾಡಿದರೂ ಕೂಡ ಬೇಡಿಕೆಗಳು ಇದ್ದೇ ಇರುತ್ತವೆ. ಆದರೆ ಎಷ್ಟರ ಮಟ್ಟಿಗೆ ಇದನ್ನು ಮಾಡಬಹುದು, ಯಾವ ಕೆಲಸವನ್ನು ಕೈಗೆತ್ತಿಕೊಳ್ಳಬೇಕು, ಯಾವ ಕೆಲಸವನ್ನು ನಂತರ ತೆಗೆದುಕೊಳ್ಳಬೇಕು, ಇದನ್ನು ನಾವು ಆಲೋಚನೆ ಮಾಡಬೇಕಾಗಿದೆ. ರೆವಿನ್ಯೂ ಇಲಾಖೆಯವರು ಇಂತಿಷ್ಟು ಜನಸಂಖ್ಯೆ ಇರುವಂತಹ ಪ್ರತಿ ತಾಂಡವನ್ನು ಕಂದಾಯ ಗ್ರಾಮವನ್ನಾಗಿ ಮಾಡಬೇಕೆಂದು ಮಾನ್ಯ ಮಂತ್ರಿಗಳು ಆದೇಶವನ್ನು ಹೊರಡಿಸಿದ್ದಾರೆ.

ಆದರೆ ಅಧಿಕಾರಿಗಳು ಅದನ್ನು ಮಾಡುತ್ತಿಲ್ಲ. ಅಧಿಕಾರಿಗಳು ಯಾವ ಕಡೆ ಚೆನ್ನಾಗಿ ಕೆಲಸ ಮಾಡುತ್ತಾರೆ, ಅಲ್ಲಿ ಮಾತ್ರ ಚೆನ್ನಾಗಿ ಕೆಲಸಗಳಾಗುತ್ತವೆ. ಇಲ್ಲದಿದ್ದರೆ ಎಲ್ಲೆಲ್ಲಿ ಅಧಿಕಾರಿಗಳ ಲೋಪದೋಷ ಇರುತ್ತದೆ ಅಂದಹ ಕಡೆ ಕೆಲಸಗಳಾಗುವುದಿಲ್ಲ. ಅದನ್ನು ಸಮರ್ಥವಾಗಿ ನಿಭಾಯಿಸುವಂತಹ, ಅಧಿಕಾರಿಗಳಿಗೆ ಪಾಠ ಕಲಿಸುವಂತಹ ಅವರನ್ನು ಸರಿದಾರಿಗೆ ತರುವಂತಹ ಒಂದು ಸಾಮರ್ಥ್ಯ ಶಾಸಕರಿಗಿರಬೇಕು ಚುನಾಯಿತ ಪ್ರತಿನಿಧಿಗಳಿಗಿರಬೇಕು. ಆದರೆ ಬಹಳಷ್ಟು ಚುನಾಯಿತ ಪ್ರತಿನಿಧಿಗಳು ಅದರ ಕಡೆ ಗಮನಹರಿಸುವುದಿಲ್ಲ. ಆದ್ದರಿಂದ, ಅವರೂ ಕೂಡ ಸೋಮಾರಿತನದಿಂದ ಇದ್ದು ಎಷ್ಟೋ ಆಗಬಹುದಾದ ಕೆಲಸಗಳಾಗುತ್ತಿಲ್ಲ. ಸಣ್ಣ ನೀರಾವರಿ ಮತ್ತು ಬೃಹತ್ ನೀರಾವರಿ ಬಗ್ಗೆ ಹೇಳುವಾಗ ನೀರಾವರಿ ಎನ್ನತಕ್ಕಂಥದ್ದು ಅಷ್ಟೊಂದು ಸರಿಯಾದ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಿದೆ ಎಂದು ನನಗನ್ನಿಸುವುದಿಲ್ಲ. ಏಕೆಂದರೆ, ಹಿಂದೆ ರಾಜ ಮಹಾರಾಜರು ಕೆರೆ ಕುಂಟೆ ದುರಸ್ತಿ ಮೊದಲು ಮಾಡಿಸಿ, ನೀರಿನ ವ್ಯವಸ್ಥೆ ಮೊದಲು ಮಾಡಿಸುತ್ತಿದ್ದರು. ಏಕೆಂದರೆ, ರೈತನಿಗೆ ನೀರು ಮೂಲತಃ ಬೇಕಾಗುವಂಥದ್ದು. ರೈತ ಬದುಕಿದ್ದರೆ ದೇಶ ಬದುಕುವುದು ರೈತನಿಗೆ ನಾವು ಎಲ್ಲ ರೀತಿಯ ಸಹಾಯ ಮಾಡಬಹುದು, ಬೀಜ ಗೊಬ್ಬರ ಮತ್ತು ನೇಗಿಲು ನೊಗ ಎಲ್ಲಕೊಡುತ್ತೇವೆ. ಲೋನ್ ಕೊಡುತ್ತೇವೆಂದು ಹೇಳಿದರೂ ಕೂಡ ಸರಿಯಾದ ರೀತಿಯಲ್ಲಿ ನೀರಾವರಿ ವ್ಯವಸ್ಥೆ ಆಗದಿದ್ದರೆ ಅವನು ತನ್ನ ಕೆಲಸದಲ್ಲಿ ಸರಿಯಾದ ಸಫಲತೆಯನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಏನು ಹೇಳುತ್ತೇನೆ, ಬೋರ್‌ವೆಲ್ ಕೊರೆಸಿ ಇವತ್ತು ಅಂತರ್ಜಲ ನಾಶವಾಗುತ್ತಿರುವ ಸಂದರ್ಭದಲ್ಲಿ

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈಗ ಪ್ರಸ್ತುತ ಇರತಕ್ಕಂಥ ಬಾವಿಗಳು, ಕೆರೆಕುಂಟೆಗಳನ್ನು ಸರಿಯಾದ ರೀತಿಯಲ್ಲಿ ದುರಸ್ತಿ ಮಾಡಿ ಅವುಗಳಿಂದ ನೀರನ್ನು ಉಪಯೋಗ ಮಾಡಿಕೊಳ್ಳುವಂಥ ವ್ಯವಸ್ಥೆಯ ಕತೆ ಹೆಚ್ಚು ಗಮನವನ್ನು ಕೊಡಬೇಕು ಎಂಬುದು ನನ್ನ ಬೇಡಿಕೆಯಾಗಿದೆ. ಏಕೆಂದರೆ ಮೊನ್ನೆ ಸರ್ಕಾರ ''ಮಾನವ ಅಭಿವೃದ್ಧಿ 1999'' ಎನ್ನತಕ್ಕಂಥ ವರದಿಯನ್ನು ಕೊಟ್ಟಿದೆ. ಆ ವರದಿಯಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳು ರಾಯಚೂರು ಹಾಗೂ ಹೈದ್ರಾಬಾದ್ ಕರ್ನಾಟಕ ಎಂದು ಹೇಳಲಾಗಿದೆ. ಅದು ಕಟುಸತ್ಯ. ಎಲ್ಲಾಜಿಲ್ಲೆಗಳ ಸಮಕ್ಕೆ ಆ ಭಾಗವನ್ನು ತರಬೇಕಾದರೆ ಇನ್ನೂ ಎಷ್ಟೋ ವರ್ಷಗಳಾಗಬಹುದು. ಅಷ್ಟು ವರ್ಷಗಳಾದರೂ ಕೂಡ ಎಲ್ಲಾ ಜಿಲ್ಲೆಗಳ ಸಮಕ್ಕೆ ತರಲು ಸಾಧ್ಯವಾಗುವುದಿಲ್ಲವೇನೋ ಎಂದು ನನಗನ್ನಿಸುತ್ತದೆ. ಏಕೆಂದರೆ ಅಲ್ಲಿಯ ಜನಕ್ಕೆ ಸ್ವಂತ ಜಮೀನಿಲ್ಲದೇ ಕೆಲಸಕ್ಕಾಗಿ ವಲಸೆ ಹೋಗುತ್ತಿದ್ದಾರೆ.

(ಮಾನ್ಯ ವಿಧಾನ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕೆಲವರಿಗೆ 60 ರಿಂದ 100 ಎಕರೆಗಳವರೆಗೆ ಜಮೀನಿದ್ದರೂ ಕೂಡ ಬೆಳೆ ಬೆಳೆಯಲು ನೀರಾವರಿ ವ್ಯವಸ್ಥೆಯಾಗಿಲ್ಲ. ರಾಯಚೂರನ್ನು ಎರಡು ನದಿಗಳ ನಡುವೆ ಇರತಕ್ಕಂಥ ಊರೆಂದು ಕರೆಯುತ್ತಾರೆ. ಒಂದು ಕಡೆ ತುಂಗಭದ್ರೆ ಮತ್ತೊಂದು ಕಡೆ ಕೃಷ್ಣ ನದಿ ಹರಿಯುತ್ತದೆ. ಆದರೂ ಕೂಡ ನಾವು ಸರಿಯಾದ ರೀತಿಯಲ್ಲಿ ಆ ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಇನ್ನೂ ಅಲ್ಲಿಯ ಕೆಲಸಗಳು ಕುಂಟುತ್ತಾ ಹೋಗುತ್ತಲೇ ಇದೆ. ನಾವೇನೋ ಎಲ್ಲಾ ಕಡೆ ಹೇಳುತ್ತಲೇ ಇದ್ದೇವೆ, ಏನೆಂದರೆ ಕೃಷ್ಣಾ ಮೇಲ್ದಂಡೆ ಕೆಲಸಗಳು ಚುರುಕಾಗಿ ಆಗುತ್ತಿದೆ ಮತ್ತು 95ನೇ ಕಿ.ಮೀ. ವರೆಗೂ ನೀರು ಬಂದೇ ಬರುತ್ತದೆಂದು ಹೇಳುತ್ತಲಿದ್ದೇವೆ. ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರುಗಳು ಮಾತನಾಡುತ್ತಾ 2000 ಇಸವಿಯೊಳಗಾಗಿ ಈ ಕೆಲಸವಾಗುವುದಿಲ್ಲವಾದರೂ ಏತಕ್ಕಾಗಿ ಸರ್ಕಾರ ಸುಮ್ಮನೆ ಹೇಳಬೇಕು ಎಂದಿದ್ದಾರೆ. ಇದು ನಿಧಾನವಾಗಲು ಹಿಂದಿನ ಸರ್ಕಾರವೇ ಕಾರಣ. ಹಿಂದಿನ ಸರ್ಕಾರಗಳು ಸ್ವಲ್ಪ ಮಟ್ಟಿಗಾದರೂ ಕಾಳಜಿಯನ್ನು ವಹಿಸಿ ಈ ಬಗ್ಗೆ ಕೆಲಸ ಮಾಡಿದ್ದರೆ ಈಗ ಆ ಕೆಲಸ ಬಹುಶಃ ಮುಗಿಯುತ್ತಿತ್ತೇನೋ. ಆದುದರಿಂದ ಈಗ ಈ ಕೆಲಸ ಸ್ವಲ್ಪ ವಿಳಂಬವಾಗಬಹುದು ಎನ್ನುವ ಅನುಮಾನ ನಮಗಿದೆ. ಆದರೂ ಕೂಡ ಅಲ್ಲಿ ಹಗಲು-ರಾತ್ರಿ ಕೆಲಸಗಳು ನಡೆಯುತ್ತಿರುವುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಎಷ್ಟು ಶ್ರಮ ವಹಿಸಬೇಕೋ ಅಷ್ಟು ಶ್ರಮ ವಹಿಸಿರುವುದರಿಂದ ಆ ಕೆಲಸಗಳು ಈಗ ಆಗುತ್ತಲಿವೆ. ಇದೇ ಮುತುವರ್ಜಿಯನ್ನು ಹಿಂದಿನ ಸರ್ಕಾರಗಳು ವಹಿಸಿದ್ದರೆ ಬಹುಶಃ ಇಷ್ಟೊತ್ತಿಗೆ ಆ ಭಾಗದಲ್ಲಿ ಹಸಿರು ಬೆಳೆಗಳು ಭೂಮಿಯಲ್ಲಿ ಬಂದು ರೈತನಿಗೆ ಜೀವಕಳೆ ಬರುತ್ತಿತ್ತು. ಇನ್ನು ಇದು ತಕ್ಷಣದಲ್ಲಿ ಆಗಿಲ್ಲದಿರುವುದರಿಂದ ಇನ್ನೂ ಕೂಡ ಬಾಂಬೆ-ಮದ್ರಾಸ್‌ಗಳ ಕಡೆ ಜನರು ವಲಸೆ ಹೋಗುವುದು ತಪ್ಪಿಲ್ಲ. ಇವೊತ್ತಿಗೂ ಕೂಡ ಅಲ್ಲಿಯ ಗಿರಿಜನರು ತಮ್ಮ ತಲೆ ಮೇಲೆ ಸೌದೆಯನ್ನು ಹೊತ್ತುಕೊಂಡು ಹೋಗುವುದು ತಪ್ಪಿಲ್ಲ. ಒಂದು ಎತ್ತಿನ ಬಂಡಿ ಇದ್ದರೆ ಅದನ್ನೇ ತನ್ನ ಮನೆ ಎಂದು ಮತ್ತು ವಾಹನವೆಂದು ಮತ್ತು ಸಲಕರಣೆಯ ಹಾಗೆ ತಿಳಿದುಕೊಂಡಿರುವಂಥ ಜನಗಳನ್ನು ನಾವು ಈಗಲೂ ಆ ಭಾಗದಲ್ಲಿ ನೋಡುತ್ತಿದ್ದೇವೆ. ನಮ್ಮ ಸರ್ಕಾರ ಕೂಡ ಒಂದೊಂದು ತಾಲ್ಲೂಕಿಗೂ ಒಂದೊಂದು ಸಾವಿರ ಮನೆಗಳನ್ನು ಕೊಟ್ಟಿದೆ. ಅದರೂ ಕೂಡ ಇನ್ನೂ ಬಹಳಷ್ಟು ನಿರಾಶ್ರಿತರಿಗೆ ಮನೆ ಇಲ್ಲದ ಪರಿಸ್ಥಿತಿ ಇದೆ. ಬಹುಶಃ ಇದೇ ರೀತಿಯಲ್ಲಿ ಮನೆಗಳನ್ನು ಕೊಟ್ಟರೆ ಇನ್ನು 5 ವರ್ಷಗಳಲ್ಲಿ ಬಹುಶಃ ಪ್ರತಿಯೊಂದು ಕುಟುಂಬಕ್ಕೂ ಒಂದೊಂದು ಮನೆ ಸಿಗಬಹುದು. ಶೈಕ್ಷಣಿಕವಾಗಿ ಆ ಪ್ರದೇಶ ಬಹಳಷ್ಟು ಹಿಂದುಳಿದಿದೆ. ನೇಮಕಾತಿಗಳಲ್ಲಿ ಶಿಕ್ಷಕರನ್ನು ಕೌನ್ಸಲಿಂಗ್ ಮೂಲಕ ಹೆಚ್ಚಾಗಿ ನೇಮಕ ಮಾಡಿಕೊಂಡಿದ್ದೇವೆ ಎಂದು ಹೇಳಬಹುದು, ಆದರೆ ಈ ಬಗ್ಗೆ ಪ್ರಾದೇಶಿಕವಾಗಿ ನೀವು ಗಮನ ಹರಿಸದಿದ್ದರೆ. ಇಂತಿಷ್ಟು ಎಂದು ಡಿವಿಜನ್ ಮಟ್ಟದಲ್ಲಿ ನೀವು ಆಯ್ಕೆ ಮಾಡದಿದ್ದರೆ ಈ ಕಡೆಯ ಮೈಸೂರು-ಬೆಂಗಳೂರು ಜನಗಳು ಆ ಭಾಗಗಳಲ್ಲಿ ಇರುವುದಕ್ಕೆ ಇಷ್ಟಪಡುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ

ಮಂಡ್ಯದವರೊಬ್ಬರನ್ನು ನಮ್ಮ ಕಡೆಗೆ ನೇಮಕಾತಿ ಮಾಡಿ ಹಾಕಿದ್ದಾರೆ. ಮೈಸೂರು ಕಡೆಯ ಲೆಕ್ಚರರ್ ಒಬ್ಬರನ್ನು ಹಾಕಿದ್ದಾರೆ, ಇವರುಗಳು ಯಾವಾಗ ಮೈಸೂರು ಭಾಗಕ್ಕೆ ಹೋಗುತ್ತೇವೋ ಎಂದು ಕಾಯುತ್ತಿದ್ದಾರೆ. ಅವರುಗಳು ಯಾವತ್ತೂ ಕೂಡ ಅಲ್ಲಿಯೇ ಇದ್ದು ಕೆಲಸವನ್ನು ಮಾಡುವುದಕ್ಕೆ ಬಯಸುವುದಿಲ್ಲ. ಅಂಥ ಒಂದು ಹಿಂದುಳಿದ ಪ್ರದೇಶಕ್ಕೆ ಅದೇ ಭಾಗದ ಅಂದರೆ ರಾಯಚೂರು, ಬಳ್ಳಾರಿ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳ ಜನರನ್ನೇ ಹಾಕಿದರೆ ಒಳ್ಳೆಯದು. ಅವರು ಡಾಕ್ಟರ್ ಆಗಿರಬಹುದು, ಇಂಜಿನಿಯರ್ ಆಗಿರಬಹುದು, ಶಿಕ್ಷಕರಾಗಿಬಹುದು ಅಥವಾ ಬೇರೆ ಯಾವುದೇ ಇಲಾಖೆಗೆ ಸಂಬಂಧ ಪಟ್ಟಂತೆ ಅಧಿಕಾರಿಯಾಗಿರಬಹುದು ಅಥವಾ ನೌಕರರಾಗಿರಬಹುದು, ಅಂಥ ಹುದ್ದೆಗಳಿಗೆ ಅದೇ ಭಾಗದ ಜನರನ್ನು ನೇಮಕ ಮಾಡಿ ಹಾಕಿದ್ದೇ ಆದರೆ ಆಗ ಮಾತ್ರ ಅಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತದೆ ಎನ್ನುವಂಥ ವಿಷಯವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದನ್ನು ಬಿಟ್ಟು ಬೇರೆ ಬೇರೆ ಕಡೆಗಳ ಜನರನ್ನು ನೇಮಕ ಮಾಡಿ ಹಾಕಿದರೆ ಅದು ಕೇವಲ ಕಣ್ಣೊರೆಸುವ ತಂತ್ರವಾಗುತ್ತದೆ. ಏಕೆಂದರೆ ಆ ಜನಗಳು ಅಲ್ಲಿ ಇರುವುದಕ್ಕೆ ಇಷ್ಟಪಡುವುದಿಲ್ಲ. ಅಧ್ಯಕ್ಷರೆ, ನಮಗೆ ಸ್ವಾತಂತ್ರ್ಯ ಬಂದಮೇಲೆ ಹದಿಮೂರು ತಿಂಗಳು ಕಳೆದ ಮೇಲೆ ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ ಸ್ವಾತಂತ್ರ್ಯ ಬಂತು. ಅದು ನಿಮಗೂ ಗೊತ್ತಿರಬಹುದು. ಅದುವರೆಗೂ ಆ ಭಾಗ ಮುಸ್ಲಿಮರ ಆಳ್ವಿಕೆಯಲ್ಲಿ ಮತ್ತು ಬೇರೆ ಬೇರೆ ಜನಾಂಗಗಳವರ ಆಳ್ವಿಕೆಯಲ್ಲಿತ್ತು. ಹೀಗಾಗಿ ಆ ಭಾಗ ತಾಯಿಯಿಲ್ಲದ ಮಗುವಿನ ರೀತಿಯಲ್ಲಿ ಬಹಳ ಹಿಂದುಳಿದುಬಿಟ್ಟಿತು. ಇದು ಕೂಡ ಆ ಭಾಗ ಹಿಂದುಳಿಯಲು ಕಾರಣವಾಗಿದೆ. ಭೌಗೋಳಿಕವಾಗಿ ಆ ನಾಲ್ಕು ಜಿಲ್ಲೆಗಳು ಹಿಂದುಳಿದಿರುವುದಕ್ಕೆ ಇದು ಕೂಡ ಒಂದು ಕಾರಣವಾಗಿದೆ ಎನ್ನುವುದು ತಾವು ಗಮನಿಸಬೇಕಾಗಿದೆ. ಆದುದರಿಂದಲೇ ಆ ಕಡೆಯ ಜನರು ಏನು ಹೇಳುತ್ತಿದ್ದಾರೆಂದರೆ ತಮ್ಮ ಕಡೆಗೆ ಯಾವ ಸೌಲಭ್ಯಗಳನ್ನೂ ಹೆಚ್ಚಾಗಿ ಮಾಡಿಕೊಡದಿರುವುದರಿಂದ ತಮಗೆ ಪ್ರತ್ಯೇಕವಾದಂಥ ವ್ಯವಸ್ಥೆಯನ್ನೇ ಮಾಡಲಿ, ಈ ರಾಜ್ಯಕ್ಕೂ ತಮಗೂ ಯಾವ ಸಂಬಂಧವೂ ಬೇಡ ಎನ್ನವಂಥ ಮಾತನ್ನಾಡುತ್ತಾರೆ. ಅದರಲ್ಲಿ ಅರ್ಥವೂ ಇದೆ. ಏಕೆಂದರೆ ನೀವು ಆ ಕಡೆಯ ಜನಗಳಿಗೆ ನಾವು ಪ್ರಾತಿನಿಧ್ಯವನ್ನು ಕೊಟ್ಟಿದ್ದೇವೆ ಎಂದರೂ ಕೂಡ ಯಾವುದೋ ಕೆಲವು ವಿಷಯಗಳಲ್ಲಿ ಇನ್ನೂ ಕೊರತೆ ಇದ್ದೇ ಇದೆ. ಆದುದರಿಂದ ನಾನು ಕೇಳಿಕೊಳ್ಳುವುದೇನೆಂದರೆ ಯಾವುದೇ ಸೌಲಭ್ಯಗಳನ್ನು ಬಾಂಬೆ-ಕರ್ನಾಟಕ ಹಾಗೂ ಹಳೇ ಮೈಸೂರು ಪ್ರಾಂತ್ಯಗಳಿಗೆ ನೀವೇನು ಕೊಡುತ್ತಿರೋ ಅದನ್ನು ಉತ್ತರ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕೊಡಲು ನಿಗ ವಹಿಸಬೇಕೆಂದು ಹೇಳಬಯಸುತ್ತೇನೆ. ಇನ್ನು ವರದಕ್ಷಿಣೆ, ಕಿರುಕುಳ, ಅತ್ಯಾಚಾರ, ಮಹಿಳೆಯರ ಮೇಲೆ ದೌರ್ಜನ್ಯಗಳು ಹೈದ್ರಾಬಾದ್-ಕರ್ನಾಟಕದ ಭಾಗಗಳಲ್ಲಿಯೂ ಹೆಚ್ಚಾಗಿ ಆಗುತ್ತಿರುವುದನ್ನು ತಾವು ಗಮನಿಸಿರಬಹುದು. ದೇವದಾಸಿ ಪದ್ಧತಿ ಈ ಕಡೆ ಎಲ್ಲೂ ಇಲ್ಲ. ಆದರೆ, ಹೈದ್ರಾಬಾದ್-ಕರ್ನಾಟಕದ ಭಾಗಗಳಲ್ಲಿ ದೇವದಾಸಿ ಪದ್ಧತಿ

ಬಹಳಷ್ಟು ಕಡೆ ಇದೆ. ಇದಕ್ಕೆ ಕಾರಣಗಳನ್ನು ತಿಳಿಯಲು ಹಿಂದಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಕೂಡ ಆ ಭಾಗಕ್ಕೆ ಭೇಟಿ ಕೊಟ್ಟು ಇಂಥಿಂಥ ಕಾರಣಗಳಿಂದ ಈ ದೇವದಾಸಿ ಪದ್ಧತಿ ಇನ್ನೂ ಅಲ್ಲಿ ನಡೆಯುತ್ತಿದೆ ಮತ್ತು ಇದನ್ನು ನಿವಾರಣೆ ಮಾಡಬೇಕು ಎಂದು ಹೇಳಿದೆ. ದೇವದಾಸಿಯರಿಗೆ ಜಮೀನು ಕೊಡುವ ವ್ಯವಸ್ಥೆ ಇದೆ. ಪ್ರತಿಯೊಂದು ಜಿಲ್ಲೆಯ ಜಿಲ್ಲಾಧಿಕಾರಿಗಳು ದೇವದಾಸಿಯರಿಗೆ ಇಂತಿಷ್ಟು ಜಮೀನನ್ನು ಕೊಡಬೇಕು ಎಂದು ಇದೆ. ಅದನ್ನು ಕೊಡುತ್ತಾ ಬಂದಿದ್ದಾರೆ. ಆ ವ್ಯವಸ್ಥೆ ಯಾವ ರೀತಿಯಿಂದಲೂ ತಗ್ಗಿಲ್ಲ, ಅದು ಇನ್ನೂ ಹೆಚ್ಚು ಹೆಚ್ಚಾಗುತ್ತಾ ಹೋಗುತ್ತಿದೆ. ಇನ್ನು ಬೇರೆ ಬೇರೆ ರೀತಿಯಲ್ಲಿ ಇರುವ ಅವ್ಯವಸ್ಥೆಗಳೇನಿವೆ, ಉದಾಹರಣೆಗೆ ಹೇಳಬೇಕೆಂದರೆ ಮಹಿಳೆಯ ಬೆತ್ತಲೆ ಸೇವೆ ಇರಬಹುದು, ಬಾನಾಮತಿ ಇರಬಹುದು, ಇಂಥವುಗಳು ಈ ಭಾಗಗಳಿಗಿಂತ ಹೈದ್ರಾಬಾದ್-ಕರ್ನಾಟಕ ಭಾಗಗಳಲ್ಲಿ ಹೆಚ್ಚಾಗುತ್ತಿವೆ. ಈ ಕಡೇ ಗಮನಹರಿಸಿ ಕಾರಣವನ್ನು ಕಂಡುಹಿಡಿದು ನಿವಾರಣೆ ಮಾಡುವ ನಿಟ್ಟಿನಲ್ಲಿ ನಿಗಾ ವಹಿಸಬೇಕು. ಇದಕ್ಕಾಗಿ ಒಂದು ಸಮಿತಿಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಬಗೆ ಹೇಳಬಯಸುತ್ತೇನೆ.

ಅಧ್ಯಕ್ಷರು: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೇಲೆ ಬೇಡಿಕೆ ಈಗ ಬಂದಿಲ್ಲ. ಆ ಬೇಡಿಕೆ ಮೇಲೆ ಚರ್ಚೆ ಬಂದಾಗ ನಿಮಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಈಗ ಸಹಕಾರ ಮತ್ತು ಕ್ರಮಪಡಿಸಿದ ಮಾರುಕಟ್ಟೆಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ನಡೆಯಬೇಕಾಗಿರುವುದು. ನೀವು ಸಹಕಾರ ಇಲಾಖೆ ಬೇಡಿಕೆ ಮೇಲೆ ಮಾತನಾಡಿ. ಏಕೆಂದರೆ ಈ ಎಸ್ಸೆಸ್.ಪ್ಾಟೀಲ್‌ರವರನ್ನು ಹೇಳುವವರು, ಕೇಳುವವರು ಯಾರು ಇಲ್ಲ. ಏಕೆಂದರೆ ಮೊನ್ನೆ ರಾಜ್ಯ ಸರ್ಕಾರದವರು ಮಾನವ ಅಭಿವೃದ್ಧಿ 1999 ಎನ್ನುವ ವರದಿಯನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಏನು ಹೇಳಲಾಗಿದೆಯೆಂದರೆ ಇಡೀಯ ರಾಜ್ಯದ ಜನಸಂಖ್ಯೆಯಲ್ಲಿ ಕೇವಲ 0. 12 ಕೋಟಿ ಮಹಿಳೆಯರು ಮಾತ್ರ ಸಹಕಾರಿ ವಲಯದಲ್ಲಿ ಸದಸ್ಯರಾಗಿರುವುದನ್ನು ತೋರಿಸಿದ್ದಾರೆ. ಅಂದರೆ ಕೇವಲ 12 ಲಕ್ಷ ಮಹಿಳೆಯರು ಮಾತ್ರ ಸಹಕಾರಿ ವಲಯದಲ್ಲಿರುವುದು. ಅದರೆ ನಿಮ್ಮ ಜನಸಂಖ್ಯೆ ಎಷ್ಟು ಇದೆ ಗೊತ್ತೆ? ಸಹಕಾರ ಕ್ಷೇತ್ರದಲ್ಲಿ ಇವರು ಮಹಿಳಾ ಜನಸಂಖ್ಯೆಯಲ್ಲಿ ಕೇವಲ 12 ಲಕ್ಷ ಸದಸ್ಯರಾಗಲು ಮಾತ್ರ ಅವಕಾಶ ಮಾಡಿ ಕೊಟ್ಟಿರುವುದು.

ಶ್ರೀಮತಿ ಬಿ.ಟಿ.ಲಲಿತಾನಾಯಕ್: ಸಹಕಾರಿ ಕ್ಷೇತ್ರ ಒಂದೇ ಅಲ್ಲ. ಎಲ್ಲಾ ವಿಚಾರಗಳಲ್ಲೂ ಕೂಡ ಮಹಿಳೆಯರನ್ನು ಹಿಂದಕ್ಕೆ ಹಾಕಿದ್ದಾರೆ. ಯಾವ ವಿಚಾರವನ್ನು ಗಮನಿಸಿದರೂ ಕೂಡ ಅದು ವ್ಯಕ್ತವಾಗುತ್ತಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲೂ ಕೂಡ ಹಿಂದಕ್ಕೆ ಹಾಕಿದ್ದಾರೆ. ಉದಾಹರಣೆಗೆ ಹೇಳಬೇಕೆಂದರೆ ಡಾ:ಪದ್ಮಿನಿ ಎಂಬುವವರಿಗೆ 18 ವರ್ಷಗಳ ಸೇವೆಯ ಅನುಭವ ಇದ್ದರೂ ಕೂಡ ಅವರನ್ನು ಹಿಂದಕ್ಕೆ ತಳ್ಳಿ ಬೇರೆಯವರು ಮುಂದಕ್ಕೆ ಹೋಗಲು ಅವಕಾಶ

ಮಾಡಿಕೊಟ್ಟಿದ್ದಾರೆ. ನಾನು ಅದರ ಬಗ್ಗೆ ಮನವಿಯೊಂದನ್ನು ಕೊಟ್ಟಿದ್ದೇನೆ. ಅದೇ ರೀತಿಯಲ್ಲಿ ಮಾನ್ಯ ಸಹಕಾರಿ ಮಂತ್ರಿಗಳು ಮಹಿಳೆಯರ ಬಗ್ಗೆ ಕೇವಲ ಮಾತನಾಡುತ್ತಾರಷ್ಟೆ. ಆದರೆ ಒಳಗೊಳಗೇ ಅವರು ಮಹಿಳೆಯರನ್ನು ದ್ವೇಷ ಮಾಡುವ ಹಾಗೆ ಮಾಡುತ್ತಿದ್ದಾರೆ. ಅವರು ಮಹಿಳೆಯರಿಗೆ ಅರ್ಹತೆಯೇ ಕಡಿಮೆ ಎಂದು ಹೇಳುತ್ತಾರೆ. ನನ್ನ ಅಭಿಪ್ರಾಯದಲ್ಲಿ ಹೇಳಬೇಕೆಂದರೆ ಪ್ರತಿಯೊಬ್ಬ ಪುರುಷನು ಒಳಗೊಳಗೇ ಹೆಣ್ಣು ಮಗಳನ್ನು ದ್ವೇಷ ಮಾಡುತ್ತಿದ್ದಾನೆ, ಇದು ನನ್ನ ಪ್ರಬಲವಾದ ನಂಬಿಕೆಯೂ ಆಗಿದೆ ಮತ್ತು ಇದು ನಿಜವೂ ಆಗಿದೆ. ಹಾಗೆ ಎಸ್.ಎಸ್.ಪಾಟೀಲ್ ಕೂಡ ಆ ವಿಷಯಲ್ಲಿ ಅದೇ ಜಾಡನ್ನು ಹಿಡಿದಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶಾಸಕಿಯವರು ನಾನು ಕೂಡ ಅದೇ ಜಾಡನ್ನು ಹಿಡಿದಿದ್ದೇನೆ ಎಂದು ಹಾಗೂ ಎಲ್ಲಾ ಮಹಿಳಾ ವಿರೋಧಿ ಇದ್ದೇನೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಹೌದು, ನೀವು ಅವರ ಪರ ಇದ್ದಿದ್ದರೆ 12 ಲಕ್ಷ ಅಷ್ಟೇ ಇರುತ್ತಿತ್ತಾ? ಇದೇ ಇಲಾಖೆ ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿ ಇದ್ದಿದ್ದರೆ ಒಂದು ಕೋಟಿ ಮಾಡಿರುತ್ತಿದ್ದರು. ಪ್ರಮೀಳಾ ನೇಸರ್ಗಿಯವರೇ ತಾವು ಸುಮ್ಮನೆ ಕುಳಿತಿದ್ದೀರಿ, ಕೇವಲ 12 ಲಕ್ಷ ಮಾಡಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ನಾನು ಕೇಳಿಸಿಕೊಳುತ್ತಿದ್ದೇನೆ. ಅದರ ಬಗ್ಗೆ ಏನೇನು ಹೇಳಬೇಕು ಅದನ್ನೆಲ್ಲಾ ನನ್ನ ಟರ್ನ್ ಬಂದಾಗ ಮಾತನಾಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಹೊಸ ಸಹಕಾರ ಸಂಘವನ್ನು ಕಟ್ಟಿಕೊಟ್ಟಿದ್ದೇವೆ, ನಾವು ಮಹಿಳೆಯರಿಗೆ ಸಾಕಷ್ಟು ಮಾಡಿದ್ದೇವೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಒಂದು ವಿಚಾರದಲ್ಲಿ ನಾನು ಎಸ್.ಎಸ್.ಪಾಟೀಲ್‌ರವರನ್ನು ಸಮರ್ಥನೆ ಮಾಡುತ್ತೇನೆ ಏಕೆಂದರೆ ಯಾವುದೇ ಕಾರ್ಯಕ್ರಮ ಇದ್ದರೆ ಸಹಕಾರ ಸಂಘಗಳು, ಸಹಕಾರ ಬ್ಯಾಂಕುಗಳಿಗೆ ಹೋದರೆ ಮೊದಲು ಜ್ಯೋತಿ ಬೆಳಗಬೇಕಲ್ಲ, ಅವರು ಯಾವುದೇ ಪುರುಷನ ಹತ್ತಿರ ಜ್ಯೋತಿ ಬೆಳಗಿಸುವುದಿಲ್ಲ. ಯಾವುದಾದರೂ ಮಹಿಳೆಯನ್ನು ಕರೆದು, ನಮ್ಮದು ಕೈಯೆಲ್ಲಾ ಕೊಳೆಯಾಗಿದೆ, ಅದಕ್ಕೆ ನೀವು ಜ್ಯೋತಿ ಬೆಳಗಿ ಎಂದು ಹೇಳಿರುವುದನ್ನು ನಾನು ಕೇಳಿದ್ದೇನೆ. ಅದರಲ್ಲಿ ಅಷ್ಟರಮಟ್ಟಿಗೆ ಅವರಿಗೆ ಪ್ರೋತ್ಸಾಹ, ಉತ್ತೇಜನ ಕೊಡುವುದು ಮಾಡುತ್ತಿದ್ದಾರೆ.

MR. SPEAKER: That is also a convention.

ಶ್ರೀಮತಿ ಬಿ.ಟಿ.ಲಲಿತಾನಾಯಕ್: ತಾವೇ ಹೇಳಿದಿರಿ, ರಾಯಚೂರು ಜಿಲ್ಲೆ ಸ್ತ್ರೀ

ಅಭಿವೃದ್ಧಿಯ ಸೂಚ್ಯಂಕದ ಪ್ರಕಾರ 101ನೇ ಸ್ಥಾನ ಪಡೆದಿದೆ ಎನ್ನುವ ಮಾತನ್ನು ಮಾನವ ಅಭಿವೃದ್ಧಿಯಲ್ಲಿ ಹೇಳಿದ್ದೀರಿ. ಅದೇ ರೀತಿಯಲ್ಲಿ ಗ್ರಾಮೀಣಾಭಿವೃದ್ಧಿ ಬಗೆ ಅಧಿಕಾರ ವಿಕೇಂದ್ರೀಕರಣವಾದಾಗ ಸಾಕಷ್ಟು ಜನ ಮಹಿಳೆಯರು ಈ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬಂದಿದ್ದಾರೆ. ಆದರೆ, ಅವರನ್ನು ಯಾವರೀತಿ ನಡೆಸಿಕೊಳ್ಳುತ್ತಿದ್ದಾರೆ. ಎಂದು ತಾವು ಗಮನಿಸಿದ್ದೀ ಆದರೆ ತಾವು ರಾಜಕೀಯದಲ್ಲಿ ಮೀಸಲಾತಿ ಕೊಡದೆ ಮನೆಯಲ್ಲಿ ಇಟ್ಟಿರುವುದೇ ಉತ್ತಮ ಎನ್ನುವಂತಹ ಮನೋಭಾವನೆ ಮೂಡುವಂತಹ ಸಾಧ್ಯತೆ ಇದೆ. ಯಾರಿಗಾಗಿ ಅಧಿಕಾರ ವಿಕೇಂದ್ರಿಕರಣ? ಒಂದು ಪಕ್ಷ ಅಧ್ಯಕ್ಷೆಯಾಗಿ ಬಂದು ಕುಳಿತುಕೊಳ್ಳುತ್ತಾಳೆ, ಸದಸ್ಯೆಯಾಗಿ ಬಂದು ಕುಳಿತುಕೊಳ್ಳುತ್ತಾಳೆ ಎಂದರೆ ಅವಳ ಹಿಂದೆ ಗಂಡ ಬರುತ್ತಾನೆ. ಮತ್ತು ಅವಳಿಗೆ ಅಧಿಕಾರಿಗಳು ಯಾವರೀತಿಯ ಮರ್ಯಾದೆ ಕೊಡಬೇಕೋ ಅದನ್ನು ಕೊಟ್ಟಿರುವುದಿಲ್ಲ. ಏಕೆಂದರೆ ಅವಳಿಗೆ ಏನೂ ಗೊತ್ತಿರುವುದಿಲ್ಲವೆನ್ನುವ ಭಾವನೆ ಇದೆ. ನಮ್ಮಲ್ಲಿ ಒಂದು ಗಬ್ಬೂರು ಎಂದಿದೆ. ಅದು ದೇವದುರ್ಗದಲ್ಲಿ ಒಂದು ಊರು, ದೇವಾಲಯಗಳ ಊರು ಎಂದು ಹೇಳುವುದಕ್ಕೆ ಗಬ್ಬೂರು ಎಂದು ಹೇಳುತ್ತಾರೆ. ಅದು ಗರ್ಭಗುಡಿಗಳ ಊರು ಬಹುಶಃ ಅದು ಆ ರೀತಿಯಾಗಿದೆ. ಆ ಊರಿನಲ್ಲಿ ಒಬ್ಬ ಹರಿಜನ ಮಹಿಳೆ ಅಧ್ಯಕ್ಷಳಾಗಬೇಕಾಗಿತ್ತು ಆದರೆ ಅಲ್ಲಿ ಬಲಿಷ್ಠ ವರ್ಗದ ಜನ ಏನು ಮಾಡಿದರೆಂದರೆ, ಇಲ್ಲ ಅವಳು ಅಧ್ಯಕ್ಷಳಾದರೆ ಅವಳು ಮೇಲೆ ಕುಳಿತುಕೊಳ್ಳಬೇಕು ನಾವು ಕೆಳಗೆ ಕುಳಿತುಕೊಳ್ಳಬೇಕಾ? ಆದುದರಿಂದ ಅವಳು ಅಧ್ಯಕ್ಷಳಾಗಿ ಅಲ್ಲಿ ಕುಳಿತುಕೊಳ್ಳಬಾರದು ಎಂದು ಮಾಡಿದರು. ಎಲ್ಲಾ ಅಧಿಕಾರಿಗಳು ಮತ್ತು ಮುಖ್ಯಸ್ಥರು ಸೇರಿ ಮೀಸಲಾತಿ ಪ್ರಕಾರ ಅವಳು ಅಧ್ಯಕ್ಷಳಾಗಲೇಬೇಕು, ನೀವು ಸುಮ್ಮನೆ ಇರಿ, ನೀವು ಅದನ್ನು ತಡೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದರು. ಆದರೆ ಅವರು ಕೇಳಲಿಲ್ಲ. ಅಲ್ಲಿ ಒಬ್ಬ ತಾತ ಎಂದು ಇದ್ದಾರೆ, ಅವರು ವಯಸ್ಸಾದವರು ಹಾಗೂ ಬಲಿಷ್ಠರು. ಅವರು ಅಲ್ಲಿ ಎಲ್ಲವನ್ನು ಕೂಡ ತಮ್ಮ ವಶದಲ್ಲೇ ಇಟ್ಟುಕೊಂಡಿರುತ್ತಾರೆ. ಅವರ ಹತ್ತಿರ ಹೋಗಿ ನಾವೆಲ್ಲಾ ಅವರ ಕಾಲಿಗೆ ಬೀಳುವುದು. ಅಂತಹ ಒಬ್ಬ ವ್ಯಕ್ತಿ ಅಲ್ಲಿ ಜನ ಸಮುದಾಯದ ಜೊತೆ ಇಡೀ ನಾಲ್ಕು ವರ್ಷಗಳ ಕಾಲ ಯಾರನ್ನು ಅಧ್ಯಕ್ಷರನ್ನಾಗಿ ಮಾಡಲೇ ಇಲ್ಲ. ಇವತ್ತಿಗೂ ಕೂಡ ಅಧ್ಯಕ್ಷರು ಇಲ್ಲದೆ ಇರುವ ಗ್ರಾಮ ಎಂದರೆ, ಅದು ನಮ್ಮ ದೇವದುರ್ಗ ಗ್ರಾಮ. ಅಲ್ಲಿ ಯಾರೂ ಕೂಡ ಗಮನಿಸಲೇ ಇಲ್ಲ.

ಅಧ್ಯಕ್ಷರು: ಪ್ರಕಾಶ್‌ರವರೇ ನಿಮ್ಮ ಇಲಾಖೆ ಬಗ್ಗೆ ಹೇಳುತ್ತಿದ್ದಾರೆ.

ಶ್ರೀಮತಿ ಬಿ.ಟಿ.ಲಲಿತಾನಯಕ್: ಇನ್ನು ಈಗ ಶೌಚಾಲಯಗಳನ್ನು ಮಾಡಲೇಬೇಕು. ಅದು ಎಲ್ಲಾ ಕಡೆ ಆಗಬೇಕು. ಕರ್ನಾಟಕ ನೈರ್ಮಲ್ಯವಾಗಬೇಕು ಎನ್ನುವ ಉದ್ದೇಶದಿಂದ ಮಾನ್ಯ ಸಚಿವರು ಆ ಇಲಾಖೆಯಿಂದ ಬೇಕಾದಷ್ಟು ಸೌಲಭ್ಯವನ್ನು ಮಾಡುತ್ತಿದ್ದಾರೆ. ಆದರೆ ಅಲ್ಲಿ ನಾವು ಮಾಡಿಸಿಕೊಟ್ಟಿದ್ದನ್ನು ಬೇರೆ ಬೇರೆ ರೀತಿಯಲ್ಲಿ ಬಳಕೆ ಮಾಡುತ್ತಿದ್ದಾರೆ. ಮತ್ತೆ ತಂಬಿಗೆ ತೆಗೆದುಕೊಂಡು ಬೀದಿಗೆ

ಹೋಗುವುದನ್ನು ಬಿಡುತ್ತಿಲ್ಲ. ಅದಕ್ಕೆ ಯಾವರೀತಿಯಿಂದ ನಾವು ತಿಳಿ ಹೇಳಬೇಕು. ಸರ್ಕಾರ ಇದಕ್ಕೆ ಏನು ಮಾಡುತ್ತದೆ? ಸನ್ಮಾನ್ಯ ಸಚಿವರು ಇದಕ್ಕೆ ಏನಾದರೂ ಪರಿಹಾರ ಹೇಳಬಹುದೆ ಎಂದು ನಾನು ಬಯಸುತ್ತಿದ್ದೇನೆ. ಏಕೆಂದರೆ ನಾವು ಎಲ್ಲಾ ರೀತಿಯಲ್ಲೂ ಕೂಡ ಹೇಳಾಯಿತು. ರಾತ್ರಿ ನಮ್ಮ ಕಾರು ಏಳೆಂಟು ಗಂಟೆಯಲ್ಲಿ ಊರಿಗೆ ಹೋದರೆ ಕಾರಿನ ಬೆಳಕಿಗೆ ಎಲ್ಲರೂ ಎದ್ದು ನಿಲ್ಲುತ್ತಾರೆ. ಇಷ್ಟೆಲ್ಲಾ ಶೌಚಾಲಯಗಳನ್ನು ಕಟ್ಟಿಸುವುದಕ್ಕೆ ನಾವು ವ್ಯವಸ್ಥೆ ಮಾಡುತ್ತಿದ್ದರೂ ಕೂಡ ನಮ್ಮ ಪ್ರಯತ್ನ ಏಕೆ ಯಶಸ್ವಿಯಾಗಿಲ್ಲ. ಮಳೆ ಬಂದು ನೀರು ನಿಂತಿರುತ್ತದೆ, ಆ ಕೆಸರಿನಲ್ಲೇ ಕಾಲು ಇಟ್ಟುಕೊಂಡು ಹೋಗಬೇಕು, ಇದಂತೂ ಬಹಳ ಹಿಂಸೆ. ಆದುದರಿಂದ ಇದಕ್ಕೆ ಒಂದು ಬೇರೆ ದಾರಿ ಕಂಡುಹಿಡಿಯುವುದು ಸಾಧ್ಯವಾ? ಬೇರೆ ರೀತಿಯಲ್ಲಿ ಶೌಚಾಲಯ ಹೋಗುವುದಕ್ಕೆ ವ್ಯವಸ್ಥೆ ಮಾಡುಬಹುದಾ ಎಂದು ಆಲೋಚನೆ ಮಾಡಬೇಕಾಗುತ್ತದೆ. ಈಗ ಏನು ಮಾಡುತ್ತಿದ್ದೀರಿ ಆ ವ್ಯವಸ್ಥೆ ಯಶಸ್ವಿಯಾಗುತ್ತಿಲ್ಲ. ಆದರೆ ಹಣ ಮಾತ್ರ ಖರ್ಚು ಆಗುತ್ತಿದೆ. ಇನ್ನು ಅಧಿಕಾರಿಗಳು ಎಷ್ಟು ಜನ ಇರಬೇಕು? ಇದಕ್ಕೆ ಏನಾದರೂ ಒಂದು ಲೆಕ್ಕಾಚಾರ ಅಂಕಿಅಂಶ ಇದೆಯಾ ಎಂದು ಗೊತ್ತಾಗಿಲ್ಲ. ಏಕೆಂದರೆ ಎಷ್ಟು ಜನ ಅಧಿಕಾರಿಗಳು ಇರುತ್ತಾರೆ, ಅವರೆಲ್ಲರ ಟೇಬಲ್ಲಿಗೆ ಒಂದು ಪತ್ರ ಹೋಗಿ ಅದು ಸರಿಯಾದ ಕ್ರಮಕ್ಕೆ ನಿಲ್ಲಬೇಕಾದರೆ ಬಹಳ ದಿವಸವಾಗುತ್ತದೆ. ಎಂದರೆ ಬಹಳ ಬಹಳ ಅಧಿಕಾರ ವರ್ಗ ಇದ್ದಹಾಗೆ ಕಡಿಮೆ ಕೆಲಸಗಳು ಆಗುತ್ತಿವೆ ಮತ್ತು ಹಣ ಹೆಚ್ಚು ಖರ್ಚಾಗುತ್ತಿದೆ ಎಂದು ಗುಮಾನಿ ಇದೆ. ಬಹಳ ಜನ ಆಲೋಚನೆ ಮಾಡುತ್ತಿದ್ದಾರೆ. 20 ಸಾವಿರ ಹುದ್ದೆಗಳನ್ನು ನಾವು ಕಟ್ ಮಾಡಿದ್ದೇವೆ ಎಂದು ಮಾನ್ಯ ಹಣಕಾಸು ಸಚಿವರು ಹೇಳಿದ್ದಾರೆ. ಎಂದರೆ ಯಾವ್ಯಾವ ಹಂತದಲ್ಲಿ ಅಧಿಕಾರಿಗಳನ್ನು ಕಟ್ ಮಾಡಿದ್ದಾರೆ ಎಂದು ಗೊತ್ತಾಗಿಲ್ಲ. ಆದರೆ ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಅಧಿಕಾರಿಗಳು ಸಹ ಹಾಗೆ ಇದ್ದಾರೆ. ಅದರ ಜೊತೆಗೆ ಇನ್ನು ಹೆಚ್ಚೆಚ್ಚು ಜನ ಬರುತ್ತಿದ್ದಾರೆ. ಇದನ್ನು ಬಿ.ಡಿ.ಓ ಅಥವಾ ಇಓ ಇವರುಗಳ ನಡುವೆ ಏನಿದ್ದಾರೆ ಇವರಲ್ಲಿ ಯಾರನ್ನು ತೆಗೆದಿಲ್ಲ. ಆದುದರಿಂದ ಇವರನ್ನು ಕಡಿತಗೊಳಿಸಿ ಅದೇ ಹಣವನ್ನು ಅಭಿವೃದ್ಧಿ ಮಾಡುವುದರ ಬಗ್ಗೆ ಆಲೋಚನೆ ಮಾಡಬೇಕು. ಇನ್ನು ಅಂತರ್ಜಲದ ಬಗ್ಗೆ ನಾನು ಆಗಲೇ ಹೇಳಿದೆ. ಗ್ರಾಮೀಣ ಪ್ರದೇಶದಲ್ಲಿ ಇವತ್ತು ಕೊಳವೆ ಬಾವಿಗಳನ್ನು ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ಕಡೆಯಿಂದ ನಾವು ತೆಗೆಸುತ್ತಿದ್ದೇವೆ. ಇದನ್ನು ಕಡಿಮೆ ಮಾಡಬೇಕು. ಅದನ್ನು ತೆಗೆಸಿ ಬೇರೆಬೇರೆ ರೀತಿ ಮಾಡಬೇಕು. ಇದು ಪಂಚಾಯತ್‌ರಾಜ್ ವ್ಯಾಪ್ತಿಗೆ ಬರುತ್ತದೆಂದು ಹೇಳುತ್ತಿದ್ದೇನೆ. ವೈದ್ಯಕೀಯ ಶಿಕ್ಷಣದ ಬಗ್ಗೆ ನಾನು ಕೊನೆಯಲ್ಲಿ ಹೇಳುತ್ತೇನೆ. ನಾನು ಪ್ರಮುಖವಾಗಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಮಾತನಾಡುಬೇಕೆಂದು ಇತ್ತು.

ಅಧ್ಯಕ್ಷರು: ಆ ಬೇಡಿಕೆ ಇದ್ದಾಗ ನಾನು ಕರೆಯುತ್ತೇನೆ. ನೀವು ವ್ಯವಸಾಯದ ಬಗ್ಗೆ ಮಾತನಾಡುವುದಿಲ್ಲವೇ? ವ್ಯವಸಾಯ ನಿಮ್ಮ ಹೆಣ್ಣುಮಕ್ಕಳದೆ ಅಲ್ಲವೆ?

ಶ್ರೀಮತಿ ಬಿ.ಟಿ.ಲಲಿತಾನಾಯಕ್: ವ್ಯವಸಾಯದ ವಿಷಯದಲ್ಲಿ ನಾವು ಮಾತನಾಡುವುದಕ್ಕಾಗುವುದಿಲ್ಲ. ಏಕೆಂದರೆ ಏನೇನು ಸವಲತ್ತು ಕೊಡಬೇಕು ಅದನ್ನೆಲ್ಲಾ ಕೊಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಪ್ರತಿಯೊಬ್ಬ ರೈತನಿಗೂ ಇವತ್ತು ಯಾವ್ಯಾವ ರೀತಿಯಲ್ಲಿ ಸೌಲಭ್ಯ ಸಿಗಬೇಕು ಅದು ಸಿಗುತ್ತಾ ಇದೆ. ಮಹಿಳೆಯರು ಕೂಡ ಸಾಕಷ್ಟು ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ ಕೃಷಿ ಇಲಾಖೆ ಬಗ್ಗೆ ನಾನು ಯಾವ ಬೇಡಿಕೆಯನ್ನು ಇಡುತ್ತಿಲ್ಲ. ಏಕೆಂದರೆ ನಮ್ಮಲ್ಲಿ ಇವತ್ತು ರೈತ ಮಹಿಳೆಯರು ಬಹಳ ಸಂತೋಷದಿಂದ ತಮ್ಮ ಕೆಲಸ ನಿರ್ವಹಿಸುತ್ತಿದ್ದಾರೆ.

ಅಧ್ಯಕ್ಷರು: ಈ ಹೊಂದಾಣಿಕೆ ನಮಗೆ ಅರ್ಥವಾಯಿತು. ನಮ್ಮಲ್ಲಿ ಎಲ್ಲೂ ಇಲ್ಲ. ವ್ಯವಸಾಯ ಇಲಾಖೆಯಿಂದ ನಿಮ್ಮಲ್ಲಿ ಆಗಿದೆ.

ಶ್ರೀಮತಿ ಬಿ.ಟಿ.ಲಲಿತಾನಾಯಕ್: ನನಗೆ ಇಡೀ ರಾಜ್ಯದ ಬಗ್ಗೆ ಹೇಳುವುದಿಲ್ಲ. ಆದರೆ ವ್ಯವಸಾಯ ಇಲಾಖೆ ಬಹಳ ದಕ್ಷವಾಗಿ ಕೆಲಸ ಮಾಡುತ್ತಿದೆ. ಅದರಲ್ಲಿ ಸಂದೇಹ ಇಲ್ಲ. ಏನಾದರೂ ಕೊರತೆ ಇದ್ದರೆ ಅದನನು ಬೇರೆ ಸದಸ್ಯರುಗಳು ಹೇಳಬಹುದು. ಇವತ್ತು ನನ್ನ ಕ್ಷೇತ್ರದಲ್ಲಿ ಯಾವ ರೈತರನ್ನೇ ಕೇಳಿದರೂ ಅವರಿಗೆ ಸಬ್ಸಿಡಿ ಮೂಲಕ ಪ್ರತಿಯೊಂದು ಸೌಲಭ್ಯವನ್ನು ಕೊಡುತ್ತಿದ್ದು, ಮಹಿಳೆಯರಿಗೆ ಯಾವ್ಯಾವ ವೃತ್ತಿಗೆ ಏನು ಲೋನು ಬರಬೇಕು ಅದು ಬಂದು ಸುಗಮವಾಗಿ ನಡೆಯುತ್ತಿರವುದರಿಂದ ನಮ್ಮಲ್ಲಿ ಅಂತಹ ಕೊರತೆ ಇಲ್ಲ. ಇಡೀ ಕರ್ನಾಟಕದ ಮಟ್ಟಿಗೆ ಏನೇನು ತೊಂದರೆ ಇದೆ ಎನ್ನುವುದು ನನಗೆ ತಿಳಿದಿಲ್ಲ. ಆದುದರಿಂದ ಅದರ ಬಗ್ಗೆ ನಾನು ಹೇಳುವುದಿಲ್ಲ. ಇನ್ನು ವೈದ್ಯಕೀಯ ಶಿಕ್ಷಣ, ಇವತ್ತು ಬಹಳಷ್ಟು ಜನ ವಿದ್ಯಾರ್ಥಿಗಳು ತುಂಬಾ ಡೊನೇಷನ್ ಕೊಟ್ಟು ಹೆಚ್ಚುವರಿ ಸೀಟುಗಳನ್ನು ಪಡೆದುಕೊಂಡು ಅವರ ಸ್ಥಿತಿ ತ್ರಿಶಂಕುವಾಗಿರುವುದು ನಾವು ಕಾಣುತ್ತಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಆ ವಿಷಯದ ಬಗ್ಗೆ ಬಹಳಷ್ಟು ಮಾತನಾಡಿದರು. ಹಾಗೂ ಹಾಗೆ ಸುಮ್ಮನೆ ಆದರೂ ಆದರೆ ವಿದ್ಯಾರ್ಥಿಗಳ ಸಮಸ್ಯೆಗಳು ಬಗೆಹರಿದಿಲ್ಲ. ಆ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ಹೇಗೆ. ಇಲ್ಲಿ ಈ ಕಡೆ ಮತ್ತು ಆ ಕಡೆ ಸದಸ್ಯರುಗಳು ಮೌನವಾಗಿ ಇರುವುದನ್ನು ನೋಡಿದರೆ ಆ ವಿದ್ಯಾರ್ಥಿಗಳ ದುರಾದೃಷ್ಟವೇನೋ ಎಂದು ತಿಳಿದುಕೊಂಡಿದ್ದೇನೆ. ಬಹಳಷ್ಟು ಕಡೆ ಈ ವಿಷಯ ಗೋಪ್ಯವಾಗಿದೆ ಮತ್ತು ಅನ್ಯಾಯವಾಗಿದೆ. ಈಗ ಉದಾಹರಣೆಗೆ ಅಂಬೇಡ್ಕರ್ ಕಾಲೇಜಿನಲ್ಲಿ ಕೂಡ ಬಹಳಷ್ಟು ಜನರನ್ನು ಹಿಂದೆ ಇದ್ದಂತಹ ಬ್ಯಾಕ್‌ಲಾಗ್ ಸೀಟುಗಳನ್ನು ತುಂಬಿಕೊಳ್ಳಲಾರದೆ ಅವರು ಹಾಗೆ ಇದ್ದಾರೆ. ಅವರನ್ನು ಪರೀಕ್ಷೆಗೆ ಕೂರಿಸದೇ ಇದ್ದಾಗ ಅವರು ದುಡ್ಡು ವಾಪಸ್ಸು ಕೊಡಿ ಎಂದು ಕೇಳಿದರೆ ಅದನ್ನು ಕೊಟ್ಟಿಲ್ಲ. ಹೀಗೇಲ್ಲಾ ಆಗಿ ಅಲ್ಲಿ ಧರಣಿಯನ್ನು ಮಾಡಿದರು, ಇವತ್ತಿಗೂ ಕಷ್ಟ ಅವರಿಗೆ ತಪ್ಪಿಲ್ಲ. ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅದರ ಬಗ್ಗೆ ಕ್ರಮ ತೆಗೆದುಕೊಂಡು ಪ್ರತಿಯೊಬ್ಬರಿಗೂ ಕೂಡ ನ್ಯಾಯಬದ್ಧವಾಗಿ ಅವರಿಗೆ ಸ್ಥಾನವನ್ನು ಕೊಡಬೇಕು. ಏಕೆಂದರೆ ಮುಂದೆ ಅವರು ಇನ್ನೊಬ್ಬರ ಜೀವವನ್ನು ಉಳಿಸುವಂತಹ

ಡಾಕ್ಟರ್. ಡಾಕ್ಟರುಗಳೆ ಹೀಗೆ ಭ್ರಷ್ಟಚಾರಕ್ಕೆ ಈಡಾದರೆ ಮುಂದೆ ಒಳ್ಳೆಯ ರೀತಿಯಲ್ಲಿ ಅವರು ಕೆಲಸ ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ ಅವರು ಡಾಕ್ಟರ್, ಡ್ರೈವರ್ ಹಾಗೂ ಶಿಕ್ಷಕರೆ ಆಗಿರಬಹುದು, ಅವರಿಗೆ ಯಾವುದೇ ರೀತಿಯಲ್ಲಿ ಹಿಂಸೆ ಕೊಡಬಾರದು, ಅವರಿಂದ ಹಣ ಸುಲಿಗೆ ಮಾಡದೇ ಅವರನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡಿದ್ದೆ ಆದರೆ ಅವರು ಉತ್ತಮ ಸೇವೆ ಸಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ವಾರ್ತಾ ಮತ್ತು ಪ್ರಚಾರ ಇಲಾಖೆ ವಿಚಾರದಲ್ಲಿ ಹೇಳುವುದಾದರೆ ಚಲನಚಿತ್ರಗಳು ಮತ್ತು ಟಿ.ವಿ. ಮಾಧ್ಯಮಗಳಲ್ಲಿ ಯಾವರೀತಿಯಾಗಿ ಪ್ರದರ್ಶನವಾಗುತ್ತಿದೆ ಎನ್ನುವುದನ್ನು ಯಾವರೀತಿ ತೋರಿಸುವುದಕ್ಕೆ ಇಚ್ಛೆ ಪಡುತ್ತಾರೆ. ನಾನು ಅಂದುಕೊಂಡಂತಹ ವಿಷಯಗಳ ಬಗ್ಗೆ ನನಗೆ ಮಾತನಾಡುವುದಕ್ಕೆ ಅವಕಾಶ ಇಲ್ಲದ್ದರಿಂದ ಇವತ್ತು ಕೆಲವೇ ವಿಷಯಗಳ ಬಗ್ಗೆ ನಾನು ಮಾತನಾಡಬೇಕಾಗಿದೆ.

6.30 ಪಿ.ಎಂ

ಈ ಮಾಧ್ಯಮಗಳು ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದನ್ನು ಆಲೋಚನೆ ಮಾಡಿದಾಗ ನಿಜವಾಗಿಯೂ ಅದು ಮಕ್ಕಳೇ ಆಗಿರಬಹುದು, ದೊಡ್ಡವರೇ ಆಗಿರಬಹುದು ಯಾವುದೇ ಒಂದು ಉತ್ತಮವಾದಂತಹ ನಾಗರಿಕ ಲಕ್ಷಣಗಳನ್ನು ಅಥವಾ ಅಂತಹ ಒಂದು ಮಾರ್ಗಗಳನ್ನು ತೋರಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆಂಬುದನ್ನು ನಾವು ಚಿಂತನೆ ಮಾಡಬೇಕಾಗುತ್ತದೆ. ಈ ಪಿಸ್ತೂಲ್‌ಗಳಲ್ಲಿ ಹೊಡೆಯುವಂಥಾದ್ದು ಮತ್ತು ಆಟಗಳಿಗೋಸ್ಕರ ಪಿಸ್ತೂಲ್‌ಗಳನ್ನು ಬಳಸುವಂಥಾದ್ದು ನಡೆಯುತ್ತಿದೆ. ಈ ಪಿಸ್ತೂಲ್ ಏನು ಹೇಳುತ್ತದೆ, ಇದರಿಂದ ಹೊಡೆಯುವಂತಹ ನೀತಿ ಏನಿದೆ, ಅದನ್ನು ನಾವು ಯಾವುದೇ ವಸ್ತುವನ್ನು ಆಟಿಕೆ ಎಂದು ಹಿಡಿದು ಹಿಂಸೆಗೆ ಪ್ರಚೋದನೆ ಕೊಡುವಂತಹ ವಸ್ತುವನ್ನು ಹಿಡಿದು ಆದರ ಮೂಲಕವೇ ಮಕ್ಕಳ ಮನಸ್ಸಿನಲ್ಲಿ ವಿಷವನ್ನು ತುಂಬುವುದರಿಂದ ಇವತ್ತು ಆ ಮಕ್ಕಳು ಬೇರೆ ಬೇರೆ ರೀತಿಯಲ್ಲಿ ಅಂದರೆ ಒಬ್ಬ ಹುಡುಗನು ಕಾಂಪೌಂಡ್ ಮೇಲಿನಿಂದ ಬಿದ್ದು ಸತ್ತಿರುವ ವಿಚಾರವನ್ನು ನಾವು ಪೇಪರ್‌ಗಳಲ್ಲಿ ಓದಿದ್ದೇವೆ. ಈ ರೀತಿಯಾಗಿ ಏಕೆ ಆಯಿತೆಂದರೆ ಈ ರೀತಿಯಾಗಿ ಬಿದ್ದರೆ ಯಾವುದೋ ಒಂದು ಶಕ್ತಿ ನಮ್ಮನ್ನು ಕಾಪಾಡುತ್ತದೆಂದು ಟಿ.ವಿ. ಮಾಧ್ಯಮದಲ್ಲಿ ತೋರಿಸಿದ್ದರು. ಇದನ್ನು ಅನುಕರಣೆ ಮಾಡಿ ಬಹಳಷ್ಟು ಮಕ್ಕಳು ಆ ದಾರಿಯನ್ನು ಹಿಡಿಯುತ್ತಿದ್ದಾರೆ. ಇನ್ನು ಅಶ್ಲೀಲವಾಗಿರುವುದನ್ನು ತೋರಿಸುವಂಥಾದ್ದರ ಬಗ್ಗೆ ನಾವು ಯಾವಾಗಲೂ ಹೇಳುತ್ತಲೇ ಇದ್ದೇವೆ, ಚಿತ್ರಗಳಲ್ಲಿ ಅಶ್ಲೀಲವಾಗಿರುವಂಥಾದ್ದನ್ನು ತೋರಿಸಬಾರದು ಅದನ್ನು ಖಂಡಿಸುತ್ತೇವೆಂದು ಹೇಳಿದರೂ ಅದನ್ನು ಹೆಚ್ಚು ಹೆಚ್ಚು ಮಾಡಿ ಇವತ್ತು ಯುವ ಜನಾಂಗ ಅಡ್ಡ ದಾರಿಗೆ ಹೋಗುವಂತಹ ಕೆಲಸ ಟಿ.ವಿ.ಮಾಧ್ಯಮದ ಮೂಲಕ ನಡೆಯುತ್ತಿದೆ. ಇದು ಚಲನಚಿತ್ರಗಳಲ್ಲೂ ನಡೆಯುತ್ತಿದೆ, ಇದು ಮೂಢನಂಬಿಕೆ ಇರಬಹುದು ಯಾವುದೇ

ವಿಚಾರವಾಗಿರಬಹುದು, ಅದನ್ನು ಯಾರು ಕೂಡ ಕಂಟ್ರೋಲ್ ಮಾಡುತ್ತಿಲ್ಲ, ಇಂಥಾದ್ದನ್ನು ತೋರಿಸಬೇಕು, ಇಂಥಾದ್ದಕ್ಕೆ ರಿಯಾಯಿತಿ ಕೊಡಬೇಕು. ಇಂತಹ ರೀತಿ ನೀತಿಗಳು ಅದಕ್ಕೆ ಇರಬೇಕೆನ್ನುವಂತಹ ಯಾವುದೇ ಒಂದು ಕಂಟ್ರೋಲ್, ಗಡಿ, ರೇಖೆ ಎಳೆಯುವಂತಹದ್ದು ಇಲ್ಲದಿರುವುದರಿಂದ ಈ ಇಲಾಖೆ ಲಂಗುಲಗಾಮು ಇಲ್ಲದೆ ತನ್ನ ಕೆಲಸವನ್ನು ಮಾಡುತ್ತಿದೆ. ಯಾವ ಚಿತ್ರಕ್ಕೆ ಪೂರ್ಣ ರಿಯಾಯಿತಿ ಕೊಡಬೇಕು, ಯಾವುದಕ್ಕೆ ಬಹಳಷ್ಟು ದಂಡನೆ ಕೊಡಬೇಕೆಂಬ ದಿಕ್ಕಿನಲ್ಲಿ ಹೋಗಬೇಕೆನ್ನುವಂಥಾದ್ದರ ಬಗ್ಗೆ ನಿಯಮಾವಳಿಯನ್ನು ರೂಪಿಸುವಂತಹ ಕೆಲಸ ಆಗಬೇಕಾಗಿದೆ. ಇನ್ನು ಪತ್ರಿಕೆಗಳ ವಿಚಾರವಾಗಿ ಮೊನ್ನೆ ನನ್ನ ವಿಷಯದಲ್ಲಿ ಪ್ರಕಟವಾಯಿತು. ಪರಿಶಿಷ್ಠ ನಿಗಮದಿಂದ ಹಣವನ್ನು ತಿಂದು ಹಾಕಿದ್ದಾರೆಂದು, ಅದು ನನ್ನ ಹೆಸರಿನಲ್ಲಿ ದೊಡ್ಡದಾಗಿ ಬರೆದು ಅವರ ಸಂಬಂಧಿ ಎಂದು ಚಿಕ್ಕ ಹೆಸರಿನಲ್ಲಿ ಯಾವ ವ್ಯಕ್ತಿ ಮಾಡಿದ್ದಾರೋ ಆ ವ್ಯಕ್ತಿಯ ಹೆಸರನ್ನು ಸಾಕಿದ್ದಾರೆ. ವಂಚನೆ ಮಾಡಿದಂಥವರು ಶ್ರೀಮತಿ ಬಿ.ಟಿ.ಲಲಿತಾನಾಯಕ್ ಎನ್ನುವಂತಹ ರೀತಿಯಲ್ಲಿ ಇದೆ. ಇದನ್ನು ಓದುವವರು ಪೂರ್ತಿ ಓದುವುದಿಲ್ಲ, ಇಷ್ಟು ಓದಿ ನನಗೆ ಫೋನ್ ಮಾಡಿ ಏನು ಈ ರೀತಿ ವಿಷಯವಿದೆ ಎನ್ನುತ್ತಾರೆ. ಈ ರೀತಿಯಾಗಿ ಮಾಡಬಹುದಾ? ಇನ್ನು ಈ ಲೋಕಲ್ ಪತ್ರಿಕೆಗಳು, ಸಣ್ಣಪುಟ್ಟ ಪತ್ರಿಕೆಗಳು ಇದನ್ನು ಯಾವುದಕ್ಕಾಗಿ ತೆಗೆಯುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅವರ ಉದ್ದೇಶವೇನು? ನಮ್ಮ ಚಾರಿತ್ರ್ಯವಧೆ ಮಾಡುವುದರಿಂದ ಅವರಿಗೆ ಏನು ಲಾಭವಿದೆ? ಇದು ನನಗೆ ಅರ್ಥವಾಗುತ್ತಿಲ್ಲ. ಇದನ್ನು ಯಾರು ಕೂಡ ಕಂಟ್ರೋಲ್ ಮಾಡುತ್ತಿಲ್ಲ ನಾನು ಅದನ್ನು ಏನಾದರೂ ಹೇಳಿದರೆ ಅದನ್ನು ಬಿಸಾಕಿ ಎಂದು ಹೇಳುತ್ತಾರೆ. ಆದರೆ ಅದನ್ನು ಹಾಗೆ ಬಿಸಾಡುವುದಕ್ಕಾಗುವುದಿಲ್ಲ. ಅದು ಅಕ್ಷರಗಳಲ್ಲಿ ಮೂಡಿಬಂದಿರುವುದರಿಂದ ಜನರು ಅದನ್ನು ಓದೇ ಓದುತ್ತಾರೆ. ಅದು ಮನಸ್ಸಿನ ಮೇಲೆ ಕೆಟ್ಟ ಪರಿಣಾಮವಾಗುತ್ತದೆ. ಅದನ್ನು ತಡಗಟ್ಟುವಂಥಾದ್ದಕ್ಕೆ ಯಾವುದಾದರೂ ಮಾರ್ಗ ಇದೆಯೇ? ಇಂಥಾದ್ದಕ್ಕೆ ನಿಯಮಾವಳಿಯನ್ನು ರೂಪಿಸುವುದಕ್ಕೆ ಆಗುವುದಿಲ್ಲವೇ? ಅವರು ನಮಗೆ ಮಾನನಷ್ಟ ಮೊಕದ್ದಮೆಯನ್ನು ಹೂಡಿ ಎಂದು ಹೇಳುತ್ತಾರೆ. ಆದರೆ ಅದಕ್ಕಾಗಿ ನಾವು ವಕೀಲರನ್ನು ಹುಡುಕಬೇಕು, ಅವರಿಗೆ ಫೀ ಕೊಡಬೇಕು. ನಾವು ಚಿಂತೆ ಹಚ್ಚಿಕೊಳ್ಳಬೇಕು, ಓಡಾಡಬೇಕು, ಇದೆಲ್ಲವನ್ನು ಮಾಡಬೇಕುಗುತ್ತದೆ. ಪತ್ರಿಕೆಗಳವರು ಖಚಿತವಾದಂತಹ ಮಾಹಿತಿ ಇಲ್ಲದೇ ಪ್ರಕಟ ಮಾಡುವಾಗ ನಮ್ಮ ಮಾನಕ್ಕೆ ಹಾನಿ ಮಾಡಿದಾಗ ನಾವು ಕೋರ್ಟ್ ಮುಖಾಂತರವೇ, ವಕೀಲರ ಮೂಲಕವೇ ಪಾಠ ಕಲಿಸಬೇಕಾ? ಅಥವಾ ಸರ್ಕಾರಕ್ಕೆ ಏನಾದರೂ ಬೇರೆ ದಾರಿ ಇದೆಯಾ ಎಂಬುದನ್ನು ಗಮನಿಸಬೇಕಾಗಿದೆ. ಇವರು ಅನ್ಯಾಯ, ಸುಳ್ಳು ನಿಂದನೆ ಮಾಡಿ ಬರೆಯುವಂತಹ ಯವ್ಯಾದಕ್ಕೂ ಬೇಕಾಗಿಲ್ಲದಂತಹ ಪತ್ರಿಕೆ ಎಂದು ಹೇಳಿದರೂ ಕೂಡ ಅವು ಪತ್ರಿಕೆಗಳೇ, ಸಣ್ಣ ಪತ್ರಿಕೆಗಳು ಸಹ ಪತ್ರಿಕೆಗಳೇ ಆಗಿರುತ್ತವೆ. ಅವುಗಳನ್ನು ಓದಿ ಇದು ನಿಜವೆಂದು ನಂಬುವಂತಹ ಜನರು ಇರುವಂತಹ ಸಂದರ್ಭದಲ್ಲಿ ಈ ರೀತಿಯಾಗಿ ಮಾನ ಹರಾಜು ಹಾಕುವಂತಹ ಕೆಲಸವನ್ನು ಮಾಡುತ್ತಾರಲ್ಲಾ, ಇದರ ಬಗ್ಗೆ

ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸಂಬಂಧಪಟ್ಟಂತಹ ಸಚಿವರಲ್ಲಿ ಒತ್ತಾಯ ಮಾಡುತ್ತಿದ್ದೇನೆ, ಎಲ್ಲಕ್ಕೂ ಒಂದು ಪರಿಹಾರವಿದ್ದೇ ಇದೆ. ಆ ರೀತಿಯಾಗಿ ಪರಿಹಾರವಿರುವಾಗ ಅದನ್ನು ಸರಿದೂಗಿಸುವಂತಹ ರೀತಿಯಲ್ಲಿ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇವತ್ತು ನಾನು ಎಲ್.ಕೆ.ಜಿ, ಯುಕೆಜಿ, ಕನ್ನಡದ ಬಗ್ಗೆ ಮಾತನಾಡಬೇಕೆಂದು ಇದ್ದೆ, ಕನ್ನಡ ಭಾಷಾ ಮಾಧ್ಯಮದ ಮೂಲಕ ಇವತ್ತು ಏನಾಗುತ್ತಿದೆ ಎನ್ನುವುದರ ಬಗೆ ನನಗೆ ಮಾತನಾಡಲು ಮುಂಧೆ ಅವಕಾಶವನ್ನು ಕೊಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ ನನಗೆ ಇವತ್ತು ಮಾತನಾಡಿದ್ದು ತೃಪ್ತಿಯಾಗುತ್ತಿಲ್ಲ, ಇವತ್ತೇ ಮಾತನಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನಗನಿಸುತ್ತಿದೆ. ಆದರೂ ವೇಳೆಯ ಅಭಾವವಿರುವುದರಿಂದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಆ ಬೇಡಿಕೆಗಳ ಬಗ್ಗೆ ಚರ್ಚೆ ಇರುವ ದಿವಸ ತಮ್ಮನ್ನು ನೆನಪಿನಲ್ಲಿಟ್ಟುಕೊಂಡು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಈಗ ಸಭೆ ಮುಕ್ತಾಯಗೊಂಡು ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಸಂಜೆ 6 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 2ನೇ ಜುಲೈ ಮಾಹೆ 1999ರ ಶುಕ್ರವಾರದಂದು ಬೆಳಿಗ್ಗೆ: 10.00 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕಾಸೂ ಸಂಖ್ಯೆ. 7441 - ಸಶಾಮು, ತುಮಕೂರು, 350 ಪುಸ್ತಕಗಳು ದಿ: 6-12-2000